ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಡಿಸೆಂಬರ್ 7, 2011 ಪುಟ 20 ರೂ. 14/-

ಅಡಿಗ ವಿವಾದ

ಚಿನ್ನದ ಕತ್ತಿಗೆ ಪರಾಕು ಪಂಪು




ಐಲು ಪೈಲು ಸೋಸಲೆ ಮಠಾಧೀಶ



ಯಾರೇ
ೆದ್ದರೂ
ೆಡಿಎಸ್‌ಗೆ
ಾಭ

ಾಮುಲು ೆಲ್ಲುತ್ತಾನಾ?



ವಿನಿವಿಂಕ್ ಶಾಸ್ತ್ರಿ ಲೆಕ್ಕ ಚುಕ್ತಾ

ಮಂಗಳೂರು ಮಾಫಿಯಾ

ಮಚ್ಚು ಮಸೆತ

ರೇಷನ್ ಕಾರ್ಡ್ ಕಂಪ್ಯೂಟರೀಕರಣ ಪಡಿತರ ಪದ್ಧತಿಯ ಸಾಫ್ಟ್ ಕೊಲೆ




ರೇಷನ್ ಕಾರ್ಡ್ ವಿತರಣೆಯಲ್ಲಿರುವ "ಲೀಕ್"ಗಳನ್ನು ಸರಿಪಡಿಸುವ ಮತ್ತು ಆಡಳಿತ ಯಂತ್ರಾಂಗವನ್ನು ಆಧುನೀಕರಣಗೊಳಿಸುವ ನೆಪದಲ್ಲಿ ಬಿಜೆಪಿ ಸರ್ಕಾರ ಪಡಿತರ ಪದ್ಧತಿಗೆ ಇನ್ನೊಂದು ಮಾರಣಾಂತಿಕ ಹೊಡೆತವನ್ನೇ ನೀಡಿದೆ.



ಇನ್ನು ಮುಂದೆ ರೇಷನ್ ಕಾರ್ಡುಗಳಿಗೆ ಅರ್ಜಿಯನ್ನು ಗುಜರಾಯಿಸುವುದು ಮತ್ತು ಪಡೆಯುವುದು ಎಲ್ಲವನ್ನು ಆನ್‌ಲೈನ್‌ನಲ್ಲೇ ಮಾಡಬೇಕೆಂದು ಸರ್ಕಾರ ಕಡ್ಡಾಯಗೊಳಿಸಿದೆ. ಆ ಮೂಲಕ ಬೋಗಸ್ ರೇಷನ್ ಕಾರ್ಡ್‌ಗಳ ಸಂಖ್ಯೆಯನ್ನು ಕಡಿತಮಾಡಿ ನಿಜವಾದ ಫಲಾನುಭವಿಗಳಿಗೆ ಮಾತ್ರ ಅಗತ್ಯ ದಿನಸಿ ಸಿಗುವಂತೆ ಮಾಡುವುದು ಇದರ ಹಿಂದಿನ ಮಹತ್ತರ ಉದ್ದೇಶವೆಂದು ಸರ್ಕಾರ ಬೀಗುತ್ತಿದೆ. ಆದರೆ ಇದರ ಹಿಂದಿನ ಕರಾಮತ್ತು ನಿಜವಾದ ಫಲಾನುಭವಿಗಳಿಗೆ ತುತ್ತು ಅನ್ನವನ್ನೂ ನಿರಾಕರಿಸುವುದೆಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಬೋಗಸ್ ರೇಷನ್ ಕಾರ್ಡುಗಳ ಹೆಗಲ ಮೇಲೆ ಬಂದೂಕನ್ನು ಇಟ್ಟು ಸರ್ಕಾರ ನಿಜವಾದ ಫಲಾನುಭವಿಗಳ ಮೇಲೆ ಪ್ರಹಾರ ನಡೆಸುತ್ತಿರುವುದು ಸ್ವಲ್ಪ ವಿಶ್ಲೇಷಿಸಿ ನೋಡಿದರೂ ಅರ್ಥವಾಗುತ್ತದೆ.

ಸರ್ಕಾರದ ಪ್ರಕಾರ ಇಂದು ಕರ್ನಾಟಕದಲ್ಲಿ 1.37 ಕೋಟಿ ಕುಟುಂಬಗಳಿದ್ದು ಹಾಲಿ 1.67 ಕೋಟಿ ರೇಷನ್ ಕಾರ್ಡುಗಳು ಚಾಲ್ತಿಯಲ್ಲಿವೆ. ಅದರಲ್ಲಿ 1.06 ಕೋಟಿ ಬಡತನ ರೇಖೆಗಿಂತ ಕೆಳಗಿರುವ BPL ಕಾರ್ಡುಗಳು ಮತ್ತು 50 ಲಕ್ಷ ಬಡತನ ರೇಖೆಗಿಂತ ಮೇಲಿರುವ APL ಕಾರ್ಡುಗಳು. ಹೀಗೆ ಸರ್ಕಾರದ ಪ್ರಕಾರ ಇಂದು ರಾಜ್ಯದಲ್ಲಿ ಒಟ್ಟು 30 ಲಕ್ಷ ಬೋಗಸ್ ಕಾರ್ಡುಗಳಿವೆ. ಅದರಲ್ಲಿ 12 ಲಕ್ಷ ಕಾರ್ಡುಗಳು ನಗರ ಪ್ರದೇಶದಲ್ಲೂ - ಅದರಲ್ಲೂ ಅತಿ ಹೆಚ್ಚು ಬೆಂಗಳೂರಿನಲ್ಲಿ 3.23 ಲಕ್ಷ ಕಾರ್ಡುಗಳೂ - ಮತ್ತು ಗ್ರಾಮೀಣ ಪ್ರದೇಶದಲ್ಲಿ 18 ಲಕ್ಷ ಬೋಗಸ್ ಕಾರ್ಡುಗಳು ಇವೆಯಂತೆ. ರೇಷನ್ ಕಾರ್ಡು ಪಡೆದುಕೊಳ್ಳುವುದನ್ನು ಕಂಪ್ಯೂಟರೀಕರಿಸಿ ಆನ್‌ಲೈನ್ ಮಾಡಿಬಿಟ್ಟರೆ ಬೋಗಸ್ ಕಾರ್ಡು ಪಡೆಯಲು ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರದ ತರ್ಕ. ಉದಾಹರಣೆಗೆ ನಗರ ಪ್ರದೇಶದಲ್ಲಿ ರೇಷನ್ ಕಾರ್ಡು ಫಲಾನುಭವಿಯ ವಿಳಾಸ ಅವರ ಮನೆಯ ವಿದ್ಯುತ್ ಮೀಟರ್ ಸಂಖ್ಯೆಯ ಜೊತೆ ತಾಳೆ ಹೊಂದುವುದೋ ಇಲ್ಲವೋ ಎಂದು ಪರಿಶೀಲಿಸಿ ತಾಳೆ ಹೊಂದದಿದ್ದರೆ ತಿರಸ್ಕರಿಸಲಾಗುವುದು. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ರೇಷನ್ ಕಾರ್ಡಿನ ವಿವರವನ್ನು ಗ್ರಾಮ ಪಂಚಾಯತಿಗೆ ನೀಡಲಾಗುವ ಆಸ್ತಿ ತೆರಿಗೆ ಸಂಖ್ಯೆಯ ಜೊತೆ ತಾಳೆ ಹಾಕಲಾಗುವುದು. ಅವೆರಡೂ ತಾಳೆ ಹೊಂದಿರಲಿಲ್ಲ ಎಂದರೆ ರೇಷನ್ ಕಾರ್ಡುಗಳನ್ನು ತಿರಸ್ಕರಿಸಲಾಗುವುದು. ಹೀಗೆ ಈಗಾಗಲೇ ರೇಷನ್ ಕಾರ್ಡು ಪರಿಷ್ಕರಣೆಯ ಸಂದರ್ಭದಲ್ಲಿ 11.98 ರೇಷನ್ ಕಾರ್ಡುಗಳನ್ನು ತಿರಸ್ಕರಿಸಲಾಗಿದೆಯಂತೆ!

ಮೇಲ್ನೋಟಕ್ಕೆ ಸ್ಪಷ್ಟವಾಗಿರುವಂತೆ ರೇಷನ್ ಕಾರ್ಡು ಫಲಾನುಭವಿಯಾಗಬೇಕಾದವರು ಸಂಖ್ಯೆಯಿಂದ ಸೂಚಿತವಾಗಬಹುದಾದ ಯಾವುದಾದರೂ ಆಸ್ತಿಯನ್ನು ಶಾಶ್ವತವಾಗಿಯೋ ಅಥವಾ ತಾತ್ಕಾಲಿಕವಾಗಿಯೋ ಹೊಂದಿರಬೇಕು. ಮನೆ (ಬಾಡಿಗೆಯದದ್ದಾದರೂ ಸರಿ), ಅದಕ್ಕೆ ವಿದ್ಯುತ್ ಸಂಪರ್ಕ - ಅಂದರೆ ನಗರ ಪ್ರದೇಶದಲ್ಲಿ ಆ ಮನೆ ಅಧಿಕೃತ ವಾಸಪ್ರದೇಶಗಳಲ್ಲೇ




ಇರಬೇಕು - ಅಂತ ಅರ್ಥ. ಗ್ರಾಮೀಣ ಪ್ರದೇಶವಾದರೆ ಆಸ್ತಿ ತೆರಿಗೆ ಸಂಖ್ಯೆಯುಳ್ಳ - ಆಸ್ತಿ ಅಂದರೆ ಸ್ವಂತ ಭೂಮಿ ಅಥವಾ ಮನೆ ಇರಬೇಕು - ಎಂಬುದು ಸರ್ಕಾರದ ನಿಬಂಧನೆ.

ಆದರೆ ಸಾಮಾನ್ಯವಾಗಿ ಇವುಗಳನ್ನು ಹೊಂದಬಲ್ಲವರು APL ಗಳೇ ವಿನಃ BPL ಗಳಲ್ಲ. ಉದಾಹರಣೆಗೆ ನಗರ ಪ್ರದೇಶದಲ್ಲಿ ಅತಿ ಹೆಚ್ಚು ಬೋಗಸ್ ರೇಷನ್ ಕಾರ್ಡುಗಳಿರುವುದು ಬೆಂಗಳೂರಿನಲ್ಲಿ. ಅಧಿಕೃತ ವಿದ್ಯುತ್ ಮೀಟರ್‌ನ ಆರ್ ಆರ್ ಸಂಖ್ಯೆಯನ್ನು ವಿಳಾಸದ ಜೊತೆ ತಾಳೆ ಹಾಕಿ ನೋಡಲು ಶುರು ಮಾಡಿದರೆ ಈ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತದೆ. ಕಾರಣವೇನೆಂದು ನೋಡೋಣ. 2010-11 ರ ಜನಗಣತಿಯ ಪ್ರಕಾರ ಮಿಕ್ಕೆಲ್ಲಾ ಬೃಹತ್ ನಗರಗಳ ಜನಸಂಖ್ಯೆ ಅಭಿವೃದ್ಧಿ ದರ ಕಡಿಮೆಯಾಗುತ್ತಿದ್ದರೂ ಬೆಂಗಳೂರಿನ ಅಭಿವೃದ್ಧಿ ದರ ಶೇ.16 ರಷ್ಟಾಗಿದೆ. ಇದಕ್ಕೆ ಬೆಂಗಳೂರು ನಗರದ ವ್ಯಾಪ್ತಿಯ ಭೌಗೋಳಿಕ ವಿಸ್ತೀರ್ಣವನ್ನು ಜಾಸ್ತಿ ಮಾಡಿರುವುದು ಒಂದು ಕಾರಣವಾದರೂ ಕಳೆದ 10 ವರ್ಷಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಜನ ಗ್ರಾಮೀಣ ಪ್ರದೇಶದಿಂದ ಗುಳೇ ಹೊರಟು ಬರುತ್ತಿರುವುದು ಸುಳ್ಳೇನಲ್ಲ. ಹೀಗೆ ಬರುತ್ತಿರುವವರು ಎಲ್ಲಾ BPL ಮಂದಿಯೇ. ಬೆಂಗಳೂರಿನಲ್ಲಿ ಅವರು ಬಿಡಾರ ಹಾಕುವುದು ಈಗಾಗಲೇ ಸುಸಜ್ಜಿತ ವಿದ್ಯುತ್ ಸಂಪರ್ಕ ಎಲ್ಲಾ ಇರುವ ಬಾಡಿಗೆ ಮನೆಗಳಲಲ್ಲ, ಮೋರಿ ಪಕ್ಕದಲ್ಲಿ, ಸೇತುವೆಯ ಕೆಳಗೆ, ನಗರದ ಥಳುಕಿನ ಹಿಂದಿನ ಕತ್ತಲಿನಲ್ಲಿ, ಅಘೋಷಿತ ಸ್ಲಂಗಳಲ್ಲಿ. ಕೊಳಚೆ ನಿರ್ಮೂಲನೆ ಮಂಡಳಿಯ ಪ್ರಕಾರವೇ ಬೆಂಗಳೂರಿನಲ್ಲಿ 70ಕ್ಕೂ ಹೆಚ್ಚು ಅನಧಿಕೃತ ಸ್ಲಂಗಳಿವೆ. ಅವರಿಗೆ ಅಧಿಕೃತವಾದ ವಿದ್ಯುತ್ ಸಂಪರ್ಕವೂ ಇಲ್ಲ, ನೀರಿನ ಸಂಪರ್ಕವೂ ಇಲ್ಲ, ವಾಸ್ತವವಾಗಿ ಸರ್ಕಾರದ ಪ್ರಕಾರ ಈ BPL ಮಂದಿಯ ಅಸ್ತಿತ್ವವೇ ಅನಧಿಕೃತವಾದದ್ದು, ಏಕೆಂದರೆ ಸರ್ಕಾರದ ಪ್ರಕಾರ ಯಾವುದಾದರೂ ಆಸ್ತಿ ಇದ್ದವರು ಮಾತ್ರ ಅಸ್ತಿತ್ವದಲ್ಲಿರುತ್ತಾರೆ ಎಂದರ್ಥ.

ಈಗ ರೇಷನ್ ಕಾರ್ಡು ಕಂಪ್ಯೂಟರೀಕರಣವಾದ ನಂತರ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೈಗಳನ್ನು ಬಿಟ್ಟರೆ ಬೇರೆ ಯಾವ ಆಸ್ತಿಯೂ ಇಲ್ಲದ, ಅದಕ್ಕೆ ಯಾವ ಸಂಖ್ಯಾ ಸೂಚಕವೂ ಇಲ್ಲದ ಲಕ್ಷಾಂತರ ಬಡಜನರು ಹೀಗೆ ಅಸ್ತಿತ್ವವನ್ನೂ ಮತ್ತು ರೇಷನ್ ಕಾರ್ಡನ್ನು ಕಳೆದುಕೊಳ್ಳಲಿದ್ದಾರೆ. ಸರ್ಕಾರದ ಉದ್ದೇಶವೂ ಇದೇ ಆಗಿದೆ.

ಏಕೆಂದರೆ ಈ ಕಂಪ್ಯೂಟರೀಕರಣದಿಂದ ನಿಜಕ್ಕೂ ಪಡಿತರ ವಿತರಣೆಯಲ್ಲಿ ಆಗುತ್ತಿರುವ ಲೀಕೇಜನ್ನು ತಡೆಯಬಹುದೇ? ಸರ್ಕಾರದ ಪ್ರಕಾರವೇ ರೇಷನ್ ಅಂಗಡಿಗಳಲ್ಲಿ ದಾಸ್ತಾನು ಹೆಚ್ಚಾಗಲು APL ಜನ ಅಲ್ಲಿ ಅವರ ಪಾಲಿಗೆ ಬಂದದ್ದನ್ನು ಕೊಳ್ಳಲು ನಿರಾಕರಿಸುತ್ತಿರುವುದು. ರೇಷನ್ ಕಾರ್ಡ್ ಆಹಾರ ಧಾನ್ಯಗಳ ಗುಣಮಟ್ಟ ಆ ಪರಿಯದ್ದು. ಹೀಗಾಗಿ APL ಜನರಿಗೆ ರೇಷನ್ ಕಾರ್ಡು ಬೇಕಿರುವುದು ಆಹಾರ ಧಾನ್ಯಗಳನ್ನು ಕೊಳ್ಳಲಲ್ಲ, ಅವರಿಗೆ ಇತರ ಸರ್ಕಾರಿ ಕೆಲಸಗಳ ನಿಮಿತ್ತ ರೇಷನ್ ಕಾರ್ಡುಗಳು ಬೇಕಿರುತ್ತವೆ. ದೊಡ್ಡ ಮನೆ ಎರಡಾದಾಗ, ಒಬ್ಬರೇ ಬೇರೆಡೆಗೆ ಸ್ಥಳಾಂತರವಾದಾಗ ಬೇಕಿರುವ ದಾಖಲೆಗಳನ್ನು ಕೊಟ್ಟು ಎರಡು ಮೂರು ಕಡೆ ರೇಷನ್ ಕಾರ್ಡುಗಳನ್ನು ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೆಚ್ಚು ರೇಷನ್ ಕಾರ್ಡುಗಳಿರಲು ಇದೂ ಒಂದು ಕಾರಣ ನಿಜ. ಆದರೆ ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವೇನೂ ಇಲ್ಲ, ಏಕೆಂದರೆ ಈ ಜನ ಬೇರೆಬೇರೆ ಕಾರ್ಡುಗಳಿಂದ ರಿಯಾಯತಿ ದರದಲ್ಲಿ ಆಹಾರ ಧಾನ್ಯಗಳನ್ನು ಖರೀದಿಸುವುದೇ ಇಲ್ಲ, ಸರ್ಕಾರದ ರಿಯಾಯತಿ ಆಹಾರ ಧಾನ್ಯ ಖರೀದಿಸುವ



ಶಿವಸುಂದರ್

ಚಾರ್ವಾಕ

ಅಗತ್ಯವಿರುವುದು ಬಡತನ ರೇಖೆಯ ಕೆಳಗಿರುವ ಬಿಪಿಎಲ್ ಮಂದಿಗೇ ಹೊರತು ಎಪಿಎಲ್ ಮಂದಿಗಲ್ಲ, ನಿಜವಾದ ಫಲಾನುಭವಿಗಳಾದ ಬಿಪಿಎಲ್ ಮಂದಿ ಸರ್ಕಾರ ಹಾಕಿರುವ ಶರತ್ತನ್ನು ಪೂರೈಸಲಾಗದೆ ಇದ್ದಕ್ಕಿದ್ದಂತೆ ಬೋಗಸ್ ಬಡವರಾಗಿ ಬಿಡುತ್ತಾರೆ. ಇದೇ ತಂತ್ರಜ್ಞಾನದ ಕೊಡುಗೆ ಬಿಪಿಎಲ್ ಬಡವರಿಗೆ.

ಅದರರ್ಥ ಪಡಿತರ ಪದ್ಧತಿಯಲ್ಲಿ ಲೀಕೇಜ್ ಆಗುತ್ತಿಲ್ಲ ಎಂದಲ್ಲ, ಎರಡು ಸಂದರ್ಭದಲ್ಲಿ ಪಡಿತರದಲ್ಲಿ ಲೀಕೇಜ್ ಆಗುತ್ತದೆ. ಮೊದಲನೆಯದು ಉಗ್ರಾಣದಿಂದ ಪಡಿತರ ಧಾನ್ಯವನ್ನು ಕಾಂಟ್ರಾಕ್ಟರುಗಳು ರೇಷನ್ ಅಂಗಡಿಗಳಿಗೆ ಸರಬರಾಜು ಮಾಡಲು ಲೋಡುಮಾಡಿಕೊಳ್ಳುವಾಗ. ಎರಡನೆಯದು ರೇಷನ್ ಅಂಗಡಿಯಲ್ಲಿ. ಆದರೆ ರೇಷನ್ ಕಾರ್ಡುಗಳ ಕಂಪ್ಯೂಟರೀಕರಣ ಇವೆರಡನ್ನು ತಡೆಯುವ ಉದ್ದೇಶವನ್ನೇ ಹೊಂದಿಲ್ಲ, ಬದಲಿಗೆ ಈಗ ಇರುವ ಬೋಗಸ್ ಕಾರ್ಡಿನಿಂದ ಸರ್ಕಾರದ ಬೊಕ್ಕಸಕ್ಕೆ, ವಿಶೇಷವಾದ ಹೊರೆಯಾಗುತ್ತಿಲ್ಲವಾದರೂ ಅದೇ ಲೀಕೇಜಿಗೆ ಕಾರಣವೆಂದು ಹೊಣೆ ಮಾಡಿ ನಿಜವಾದ ಫಲಾನುಭವಿಗಳು ಪೂರೈಸಲಾಗದ ಶರತ್ತುಗಳನ್ನು ವಿಧಿಸಿ ಫಲಾನುಭವಿಗಳ ಸಂಖ್ಯೆಯನ್ನು ಕಡಿ[…] ಮಾಡುವುದೇ ಈ ಹೊಸ ಕಂಪ್ಯೂಟರೀಕರಣದ ನಿಜ[…] ಉದ್ದೇಶವಲ್ಲವೇ?

ಇದು ಊಹಾಪೋಹದ ಮಾತೇ ಅಲ್ಲ, ಇದ[…] ಸರ್ಕಾರವೇ ತನ್ನ ಹಲವಾರು ಯೋಜನಾ ನೀತಿಗ[…] ಸ್ಪಷ್ಟಪಡಿಸಿದೆ. 2009-10ರ ತನ್ನ ಆಹಾರ ಭ[…] ಸುತ್ತೋಲೆಯಲ್ಲಿ ಯೋಜನಾ ಆಯೋಗವು "For […] proposed law, of crucial importanc[e …] the issue of numerical ceiling for B[…] families who would be entitled to rece[…] a certain minimum quantity […] subsidised foodgrains per month, ಎಂದು ಸ್ಪಷ್ಟವಾಗಿ ಹೇಳಿದೆ. ಈ ಕಾಯಿದೆ ಜಾರಿಗೆ ತ[…] ಫಲಾನುಭವಿಗಳ ಸಂಖ್ಯೆ ಆದಷ್ಟೂ ಕಡಿಮೆ ಮಾಡು[…] ಹೋಗುವುದು ಅತ್ಯಗತ್ಯವೆಂದು ಯಾವ[…] ಮುಚ್ಚುಮರೆಯಿಲ್ಲದೆ ಹೇಳುತ್ತದೆ. ಯಾವುದೇ ಹ[…] ಮಾನದಂಡಗಳನ್ನು ರೂಪಿಸುವ ಮೊದಲೇ ಮತ್ತು ಅ[…] ಆಧರಿಸಿ ಯಾವುದೇ ಕ್ಷೇತ್ರ ಅಧ್ಯಯನ ಮಾಡದೇ ಯೋ[…] ಆಯೋಗ ಈ ದೇಶದಲ್ಲಿರುವ ಕಡು ಬಡವರ ಸಂಖ್ಯೆ[…] ಕೋಟಿಯಲ್ಲ ಬದಲಿಗೆ 5.9 ಕೋಟಿ ಎಂಬ ತೀರ್ಮಾ[…] ಬಂದುಬಿಟ್ಟಿದೆ.

ಹಾಗೆಯೇ ಇದೇ ಸೆಪ್ಟೆಂಬರ್ 2011ರಲ್ಲಿ ಮಂಡಿಸ[…] "ರಾಷ್ಟ್ರೀಯ ಆಹಾರ ಭದ್ರತಾ ನೀತಿ" ಕರಡಿನಲ್ಲಿ […] ಪ್ರದೇಶದಲ್ಲಿ ಶೇ.50 ಕ್ಕಿಂತ ಜಾಸ್ತಿ ಮತ್ತು ಗ್ರಾಮೀ[…] ಪ್ರದೇಶದಲ್ಲಿ ಶೇ.75ಕ್ಕಿಂತ ಜಾಸ್ತಿ ಬಿಪಿಎಲ್ ಫಲಾನುಭ[…] ಇರಲೇ ಬಾರದೆಂಬ ಹೊಸ ಮಾನದಂಡವನ್ನು ವಿಧಿಸಲ[…] ಹೀಗೆ ಒಟ್ಟಿನಲ್ಲಿ ಸರ್ಕಾರ ಬೋಗಸ್ ಕಾರ್ಡಿನ ಹೆ[…] ನಿಜವಾದ ಫಲಾನುಭವಿಗಳ ಸಂಖ್ಯೆಯನ್ನು ಮತ್ತ[…] ಮೂಲಕ ಆ ಕ್ಷೇತ್ರಕ್ಕೆ ಕೊಡಲಾಗುತ್ತಿರುವ ಹ[…] ಮೊತ್ತವನ್ನೂ ಕಡಿತಗೊಳಿಸಲು ಹೊರಟಿದೆ. […] ವಿಶ್ವಬ್ಯಾಂಕಿನ ಆದೇಶದ ಅನ್ವಯ ಸಾಮಾಜಿಕ […] ಕಡಿತಗೊಳಿಸಬೇಕೆಂಬ ಆದೇಶದ ಪರಿಣಾಮ. ಬೋ[…] ಕಾರ್ಡುಗಳನ್ನು ರದ್ದುಗೊಳಿಸಲು ಇರುವ ಪ[…] ಪರಿಣಾಮಕಾರಿ ಉಪಾಯವೆಂದರೆ 1997ಕ್ಕೆ ಮುಂಚ[…] ಸಾರ್ವತ್ರಿಕ ಪಡಿತರ ಪದ್ಧತಿಯನ್ನು ಜಾರಿಗೆ ತರುವುದು. […] ಬಳಿ ಕಾರ್ಡಿದ್ದರೂ ಬಡವರು ಮಾತ್ರ ಪಡಿತರ ಪಡೆಯುತ್ತಿದ್ದರು. ಉಳಿದವರಲ್ಲ. ಆಗ ಬೋ[…] ಇತ್ಯಾದಿಗಳ ಅಗತ್ಯವೇ ಉದ್ಭವಿಸುತ್ತಿರಲಿಲ್ಲ.

ಈಗಲಾದರೂ ಸರ್ಕಾರದ ಪ್ರಕಾರ ಈ ರಾ[…] 1.37 ಕೋಟಿ ಕುಟುಂಬಗಳಿದ್ದು ಅದರಲ್ಲಿ […] ಕೋಟಿ ಕುಟುಂಬಗಳು ಬಡತನ ರೇಖೆಗಿಂತ ಕೆ[…] ಕರ್ನಾಟಕ ಸರ್ಕಾರ ಈ 1.06 ಕೋಟಿ ಕುಟುಂಬ[…] ಪ್ರತೀತಿಂಗಳು ವೆಚ್ಚ ಮಾಡುತ್ತಿರುವುದು ಕೇವಲ 60 […] ರೂ. ಅಂದರೆ ವರ್ಷಕ್ಕೆ 720 ಕೋಟಿ. ಮೊದಲ[…] ಎಲ್ಲರಿಗೂ ರಿಯಾಯತಿ ದರದಲ್ಲೇ ಧಾನ್ಯ ಕೊಡುವ[…] ಬಂದರೆ ಸರ್ಕಾರಕ್ಕೆ ತಿಂಗಳಿಗೆ ಅಧಿಕವಾಗಿ ವೆಚ್ಚವಾಗು[…] 30 ಕೋಟಿ ಅಂದರೆ ತಿಂಗಳಿಗೆ 90 ಕೋಟಿ (ವರ್ಷಕ್ಕೆ […] ಕೋಟಿ) ಮಾತ್ರ. ಗಣಿ ದೊರೆಗಳಿಂದ ಕೇವಲ […] ವರ್ಷಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ 10[…] ಕೋಟಿ. ಅಂದರೆ ವರ್ಷಕ್ಕೆ 3000 ಕೋಟಿಗಿಂತಲೂ […] ಈ ಲೆಕ್ಕ ನೋಡಿದರೆ, ಯಡ್ಡಿ ಅಂಡ್ ಸನ್ಸ್ ಆಸ್ತಿ ಅವ್ಯ[…] ಮಾಡಿ ಸರ್ಕಾರಕ್ಕೆ ಬರಬೇಕಿರುವ ತೆರಿಗೆಯಲ್ಲಿ ಮಾ[…] ವಾರ್ಷಿಕ ಸಾವಿರ ಕೋಟಿ ನಷ್ಟದ ಎದಿರು 1080 […] ಒಂದು ಸಣ್ಣ ಮೊತ್ತ ಅಲ್ಲವೇ?

ಆದರೂ ಸರ್ಕಾರ ಬೊಕ್ಕಸಕ್ಕೆ ಹೊರೆ ಎಂಬ ನ[…] ಬೋಗಸ್ ಕಾರ್ಡುಗಳ ಮೇಲೆ ಬಂದೂಕನ್ನು ಇಟ್ಟು […] ಲಕ್ಷ ಅರ್ಹ ಫಲಾನುಭವಿಗಳ ಬೇಟೆಗೆ ಹೊರಟಿದೆ. […] ವಿರೋಧಿಸಲೇ ಬೇಕು.

ನೋ ಕಾಮೆಂಟ್ಸ್

"ಲೋಕಾಯುಕ್ತ ಹುದ್ದೆಗೆ ಅರ್ಹರಲ್ಲದ ಅಭ್ಯರ್ಥಿಗಳನ್ನು ನೇಮಕ ಮಾಡುವುದು ಸಾಧ್ಯವಿಲ್ಲ, ಇಂತವರನ್ನೇ ನೇಮಕ ಮಾಡಬೇಕು ಎಂದು ಸರ್ಕಾರ ನನ್ನ ಮೇಲೆ ಒತ್ತಡ ಹೇರುವುದು ಸರಿಯಲ್ಲ, ಲೋಕಾಯುಕ್ತ ಹುದ್ದೆಗೆ ರಾಜ್ಯದಲ್ಲಿ ಅರ್ಹರು ಇಲ್ಲ ಎಂದು ಹೇಳುವುದು ಸಾಧ್ಯವಿಲ್ಲ, ಸಾಕಷ್ಟು ಮಂದಿ ನ್ಯಾಯಮೂರ್ತಿಗಳು ಇದ್ದಾರೆ."

- ರಾಜ್ಯಪಾಲ ಹಂಸರಾಜ್ ಭಾರದ್ವಾಜ್

"ಲೋಕಾಯುಕ್ತ ಸಂಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನ ಆಡಳಿತ ಪಕ್ಷದಿಂದಲೇ ನಡೆಯುತ್ತಿದೆ. ಇದಕ್ಕೆ ಬಿಜೆಪಿ ರಾಷ್ಟ್ರೀಯ ಮುಖಂಡರಾಗಲಿ, ಅಣ್ಣಾ ತಂಡದ ಸದಸ್ಯರಾಗಲಿ, ಆಕ್ಷೇಪ ಎತ್ತುತ್ತಿಲ್ಲ, ಬದಲಿಗೆ ಅವರು ಪ್ರಬಲ ಲೋಕ್‌ಪಾಲ್ ಸಂಸ್ಥೆ ಬೇಕೆಂದು ಒತ್ತಾಯಿಸುವುದು ವಿರೋಧಾಭಾಸದಂತೆ ಕಾಣುತ್ತದೆ."

- ವೀರಪ್ಪ ಮೊಯಿಲಿ

"ಭೂ ಹಗರಣಗಳ ಲೋಕಾಯುಕ್ತ ತನಿಖೆಗೆ ಪ್ರತಿಯಾಗಿ, ಸರ್ಕಾರ ನೇಮಿಸಿದ್ದ ಪದ್ಮರಾಜ್ ಆಯೋಗ ನೇಮಕವಾಗಿ ಒಂದು ವರ್ಷವಾಗಿದೆ. ಆದರೆ ಅದರ ಅವಧಿಯನ್ನು ವಿಸ್ತರಿಸದಿರಲು ಸರ್ಕಾರ ನಿರ್ಧರಿಸಿದೆ. ಹೀಗಾಗಿ ದೇಶದ ಇತಿಹಾಸದಲ್ಲೇ ಕಾರ್ಯವನ್ನೇ ಪ್ರಾರಂಭಿಸದೆ ರದ್ದಾದ ಆಯೋಗ ಎಂಬ ಖ್ಯಾತಿ ಈ ಆಯೋಗಕ್ಕೆ ಅಂಟಿಕೊಳ್ಳಲಿದೆ. ಯಾವ ವರದಿಯನ್ನೂ ನೀಡದ, ಯಾವ ಉಪಯೋಗವೂ ಇಲ್ಲದ ಕೇವಲ ರಾಜಕೀಯ ಕಾರಣಕ್ಕೆ ನೇಮಕವಾದ ಈ ಆಯೋಗದಿಂದ ಸರ್ಕಾರದ ಬೊಕ್ಕಸಕ್ಕೆ ಕಳೆದ ಒಂದು ವರ್ಷದಲ್ಲಿ 40 ಲಕ್ಷ ರೂ. ಖರ್ಚಾಗಿದೆ."

- ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಯಾವನಿಗೆ ಬೇಕು ಅಧ್ಯಕ್ಷ ಸ್ಥಾನ. ನಾನು ಅಧ್ಯಕ್ಷನಾಗಿದ್ದವನು ಮತ್ತು ಮುಖ್ಯಮಂತ್ರಿಯೂ ಆಗಿದ್ದವನು. ಜನಸೇವೆಗೆ ಮುಖ್ಯಮಂತ್ರಿ ಸ್ಥಾನ ಬೇಕಿಲ್ಲ, ಪಕ್ಷದ ಸೇವೆಗೆ ಅಧ್ಯಕ್ಷಗಿರಿ ಬೇಕಿಲ್ಲ. ಈ ವಿಷಯದಲ್ಲಿ ನನಗೆದುರಾಗಿರುವ ಪರೀಕ್ಷೆಯಲ್ಲಿ ಗೆಲ್ಲುತ್ತೇನೆ. ಪಕ್ಷ ಎಂದರೆ ಕುಟುಂಬ ಇದ್ದಹಾಗೆ. ಸಣ್ಣಪುಟ್ಟ



ಭಿನ್ನಾಭಿಪ್ರಾಯ ಬಂದಾಗ ಜನರ ಹಿತ ದೃಷ್ಟಿಯಿಂದ ಸುಧಾರಿಸಿಕೊಂಡು ಹೋಗಬೇಕು. ನನ್ನ ವಿರುದ್ಧ ಷಡ್ಯಂತ್ರ ಮಾಡಿದವರು ಹೊರಗಿನವರಲ್ಲ, ಒಳಗಿನವರೇ. ಇನ್ನು ಮುಂದೆ ನಾನೂ ರಾಜಕೀಯ ಚಾಣಾಕ್ಷತನದಿಂದ ನಡೆದುಕೊಳ್ಳುತ್ತೇನೆ."

- ಯಡಿಯೂರಪ್ಪ

ನ್ಯಾಯದಲ್ಲಿ ಸಂಧಾನವಿಲ್ಲ, ಸಂಧಾನದಲ್ಲಿ ನ್ಯಾಯವಿರಲ[…]

"ಇಂದು ದೇಶದ ಅಧೀನ ನ್ಯಾಯಾಲಯಗಳಲ್ಲಿ 2.74 ಕೋಟಿ ಪ್ರಕರಣ[…] ಹೈಕೋರ್ಟುಗಳಲ್ಲಿ 42.92 ಲಕ್ಷ ಪ್ರಕರಣಗಳು ಮತ್ತು ಸುಪ್ರೀಂ ಕೋರ್ಟ[…] 56,000 ಪ್ರಕರಣಗಳು ಬಾಕಿ ಇವೆ. ಅವೆಲ್ಲವನ್ನೂ ನ್ಯಾಯಾಲಯದಿಂ[…] ಬಗೆಹರಿಸಲು ಸಾಧ್ಯವಿಲ್ಲ. ಆದ್ದರಿಂದ ಕಕ್ಷಿದಾರರು ಸಂಧಾನ ಪ್ರಕ್ರಿಯೆ[…] ತಮ್ಮದಾಗಿಸಿಕೊಂಡರೆ ಹಣ ಮತ್ತು ಸಮಯವೂ ಉಳಿತಾಯವಾಗು[…] ನ್ಯಾಯವೂ ತ್ವರಿತವಾಗಿ ಸಿಗುತ್ತದೆ."

- ನ್ಯಾ. ದಲ್ಬೀರ್ ಭಂ[…]

ಎಲುಬಿಲ್ಲ ನಾಲಿಗೆಗೆ, ಪಕ್ಷಬೇಧವಿಲ್ಲ ಕುಮಾರಂಗೆ

"ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೆ ಬಾಗಿಲು ತೆರೆದಿದ್ದೇ ಎಸ್.ಎಂ.[…]



ಸರ್ಕಾರ. ಅವರು ಅಧಿಕಾರದಲ್ಲಿದ್ದಾಗಲೇ ಅಕ್ರಮ ಗಣಿಗ[…] ಆರಂಭವಾಯಿತು. ಅಕ್ರಮ ಗಣಿ ತನಿಖೆ ಮಾಡು[…] ದಾಖಲೆಗಳನ್ನು ನೀಡದೇ ಇರುವುದರಿಂದ ಕಾಂ[…] ನಾಯಕರ ಅಕ್ರಮಗಳನ್ನು ತನಿಖೆ ಮಾಡಲಾಗಲಿಲ್ಲ. ಎ[…] ಅಂದಿನ ಲೋಕಾಯುಕ್ತ ಸಂತೋಷ್ ಹೆಗ್ಡೆ ಹೇಳಿ[…] ಬೇಕಿದ್ದರೆ ನಾನೇ ಅಗತ್ಯವಿದ್ದ ದಾಖಲೆ ಕೊಡುತ್ತಿದ್ದೆ."

- ಕುಮಾರಸ್[…]

ಶುದ್ಧ ಆರ್ಯನ್ನರ ಕತೆ ಮತ್ತು ಅರುಂಧತಿಯ ಮಾತುಗಳು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಆರ್ಯನ್ನರು ಅಂದರೆ ಯಾರು? ಶುದ್ಧ ಆರ್ಯನ್ನರು ನೋಡಲು ಹೇಗಿದ್ದರು? ಅವರ ಅನುವಂಶಿಕ 'ಸಂಕೇತ'ಗಳು ಎಂತಹದ್ದಾಗಿದ್ದವು? ಈ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿಲ್ಲ. ಆದರೂ ಹಿಮಾಯಲದ ತಪ್ಪಲಿನಲ್ಲಿ, ಯಾವುದೋ ಒಂದು ಮೂಲೆಯಲ್ಲಿರುವ ಒಂದು ಪುಟ್ಟ ಹಳ್ಳಿಯಲ್ಲಿ ಇವತ್ತಿಗೂ 'ಶುದ್ಧ' ಆರ್ಯ ಜನಾಂಗ ಇದೆ ಎಂದು ಹಲವರು ನಂಬಿದ್ದಾರೆ. ಅಷ್ಟೇ ಅಲ್ಲ, ಆ ಹಳ್ಳಿಯ ಪುರುಷರಿಗೆ ಹಣ ಕೊಟ್ಟು, ಅವರಿಂದ ತಮ್ಮ ಗರ್ಭವನ್ನು ತುಂಬಿಸಿಕೊಂಡು, 'ಶುದ್ಧ' ಆರ್ಯ ಮಗುವಿಗೆ ಜನ್ಮ ನೀಡಲು ಬಯಸುವ ಬಹಳಷ್ಟು ಮಹಿಳೆಯರು ಜರ್ಮನಿ ದೇಶದಿಂದ ಬರುತ್ತಾರೆಂದು ಓದಿ ಅಚ್ಚರಿ ಆಯಿತು.

ಆ ಹಳ್ಳಿಯ ಹೆಸರು ಡಾರ್ಚಿಕ್. ಅಲ್ಲಿ ವಾಸಮಾಡುತ್ತಿರುವ ಬುಡಕಟ್ಟು ಜನಾಂಗದವರನ್ನು ಬ್ರೋಕ್ಪಾ ಎಂದು ಕರೆಯುತ್ತಾರೆ. ಲಡಾಕ್ ಪ್ರದೇಶದಲ್ಲಿರುವ ಡಾರ್ಚಿಕ್‌ನಲ್ಲಿ ವಾಸಿಸುತ್ತಿರುವ ಈ ಜನ ಇಲ್ಲಿಗೆ ಎಲ್ಲಿಂದ ಬಂದರು, ಯಾವಾಗ ಬಂದರು ಎಂದು ಯಾರಿಗೂ ಗೊತ್ತಿಲ್ಲ. ಬ್ರಿಟಿಷರಿಗೆ ಎಲ್ಲಾ ಸಮುದಾಯಗಳಿಗೆ ವಿವಿಧ ಹಣೆಪಟ್ಟಿ ಕಟ್ಟುವ ಚಪಲವಿತ್ತಾದ್ದರಿಂದ, ಮತ್ತು ಬ್ರೋಕ್ಪಾ ಸಮುದಾಯದ ಭಾಷೆಯ ಹಲವು ಪದಗಳು ಇಂಡೋ-ಆರ್ಯ ಭಾಷೆಯನ್ನು ಹೋಲುತ್ತಿದ್ದರಿಂದ ಈ ಸಮುದಾಯದವರು ಆರ್ಯನ್ನರು ಎಂದು ಬ್ರಿಟಿಷರು ಘೋಷಿಸಿದರು.

ಬ್ರೋಕ್ಪಾ ಸಮುದಾಯದ ಜನಪದಗಳ ಪ್ರಕಾರ ಇವರು ಈಗ ಪಾಕಿಸ್ತಾನದಲ್ಲಿರುವ ಗಿಲ್ಗಿಟ್ ಪ್ರದೇಶದಿಂದ ಬಂದವರು. ಆದರೆ ಹಲವರ ನಂಬಿಕೆ ಪ್ರಕಾರ ಇವರು ಗ್ರೀಸ್ ದೇಶದ ಅಲೆಕ್ಸಾಂಡರ್ ಭಾರತದ ಮೇಲೆ ದಾಳಿ ಇಟ್ಟಾಗ ಆತನ ಗ್ರೀಕ್ ಸೈನಿಕರ ಮತ್ತು ಸ್ಥಳೀಯರ ವಿವಾಹ ಸಂಬಂಧದಿಂದ ಹುಟ್ಟಿದ್ದು ಈ ಸಮುದಾಯ. ಅಷ್ಟೇ ಅಲ್ಲ, ಇವರು ಶತಮಾನಗಳಿಂದ ಇತರೆ ಸಮುದಾಯಗಳಿಂದ ದೂರ ವಾಸಿಸುತ್ತಿರುವುದರಿಂದ ಅವರ ಡಿಎನ್‌ಎ ಹೊರಗಿನವರೊಂದಿಗೆ ಬೆರೆತಿಲ್ಲ. ಈ ಎಲ್ಲ ಕಾರಣಗಳಿಂದ ಈ ಸಮುದಾಯದವರನ್ನು 'ಶುದ್ಧ ಆರ್ಯನ್ನರು' ಎಂದು ಹಲವರು ಭಾವಿಸುತ್ತಾರೆ.



"ನಾನೇನು ಎತ್ತರವೂ ಇಲ್ಲ, ನನ್ನ ಮೂಗು ಉದ್ದವೂ ಇಲ್ಲ. ಆದರೂ ನಾನು ಸಾಕಷ್ಟು ಬಿಳಿ ಮಹಿಳೆಯರಿಗೆ ನನ್ನ ಸೇವೆಯನ್ನು ಕೊಟ್ಟಿದ್ದೇನೆ. ಯಾರಿಗೆ ಗೊತ್ತು, ಮುಂದೊಂದು ದಿನ ನನ್ನ ಮಕ್ಕಳು ಇಲ್ಲಿಗೆ ಬಂದು ನನ್ನನ್ನು ಜರ್ಮನಿಗೆ ಕರೆದುಕೊಂಡು ಹೋಗಬಹುದು" ಎಂದು ಆತ ನಗುತ್ತಾನೆ.

ಇದೆಲ್ಲವನ್ನು ಶಿವನ್ ಅವರು 'ಅಕ್ತುಂಗ್ ಬೇಬಿ: ಇನ್ ಸರ್ಚ್ ಆಫ್ ಪ್ಯೂರಿಟಿ' ಎಂಬ ಸಾಕ್ಷ್ಯಚಿತ್ರದಲ್ಲಿ ತೋರಿಸಿದ್ದರು.

ಈ ಬ್ರೋಕ್ಪಾ ಸಮುದಾಯ ಹಲವು ವಿಚಿತ್ರ ಸಂಪ್ರದಾಯಗಳನ್ನು ಹೊಂದಿರುವುದೂ ಇವರ ಬಗೆಗಿನ ಕುತೂಹಲ ಹೆಚ್ಚುವುದಕ್ಕೆ ಕಾರಣವಾಗಿದೆ. ಇತ್ತೀಚಿಗಿನ ತನಕ ಈ ಸಮುದಾಯದಲ್ಲಿ ಒಬ್ಬಳೊಂದಿಗೆ ಹಲವಾರು ಸಹೋದರರು ಒಮ್ಮೆಗೆ ದಾಂಪತ್ಯ ಜೀವನ ನಡೆಸುತ್ತಿದ್ದರಂತೆ. ಇದನ್ನು ಕೇಳಿ ನನಗೆ ಮಹಾಭಾರತದ ಪಾಂಚಾಲಿ ನೆನಪಾದಳು.



ಇವರ ಸ್ಥಳೀಯ ದೇವತೆಗೆ ಹಸು, ಕೋಳಿಗಳೆಂದರೆ ಇಷ್ಟವಿಲ್ಲ. ಆದ್ದರಿಂದ ಈ ಸಮುದಾಯದವರು ಮಾಂಸವನ್ನಿರಲಿ, ಹಸುವಿನ ಹಾಲನ್ನೂ ಸೇವಿಸುವುದಿಲ್ಲ. ಇನ್ನು ಇವರ ಮಹಿಳೆಯರ ಅಲಂಕಾರವಂತೂ ತುಂಬಾ ಆಕರ್ಷಕವಾಗಿದೆ. ಅವರ ತಲೆ ಮೇಲೆ ಧರಿಸುವ ವಸ್ತ್ರದಲ್ಲಿ ಪುರಾತನ ಕಾಲದ ನಾಣ್ಯಗಳೂ ಇರುತ್ತವೆ. ಇನ್ನು ಇವರ ಹಾಡು ಕೇಳಲು ಇಂಪಾಗಿದ್ದು ಸಾಮೂಹಿಕ ಕುಣಿತವೂ ಸುಂದರವಾಗಿದೆಯಂತೆ. ಒಬ್ಬರ ಅಧ್ಯಯನದ ಪ್ರಕಾರ ಬ್ರೋಕ್ಪಾ ಸಮುದಾಯದವರು ಯಾವುದೇ ಕೆಟ್ಟ ಚಟಗಳನ್ನು ಹೊಂದಿಲ್ಲದಿರುವುದು ಮತ್ತು ಒತ್ತಡ ರಹಿತ ಜೀವನ ನಡೆಸುವುದರಿಂದ ಅವರ ಆಯಸ್ಸು ಬೇರೆ ಸಮುದಾಯಗಳಿಗಿಂತ ಹೆಚ್ಚಾಗಿದೆಯಂತೆ.

ಏನಾಯಿತೆಂದರೆ ಸುಮಾರು ಐದು ವರ್ಷಗಳ ಹಿಂದೆ ಸುಜೀವ್ ಶಿವನ್ ಎಂಬ ಮಲೆಯಾಳಿ ಸಾಕ್ಷ್ಯಚಿತ್ರಗಳ ನಿರ್ದೇಶಕನ ಕಿವಿ ಮೇಲೆ ಈ ಸಮುದಾಯಕ್ಕೆ ಸಂಬಂಧಿಸಿದ ಒಂದಿಷ್ಟು ಮಾಹಿತಿ ಬಿತ್ತು. ಅದೇನೆಂದರೆ 'ಶುದ್ಧ ಆರ್ಯನ್' ಮಗುವನ್ನು ಬಯಸಿ ಜರ್ಮನಿಯಿಂದ ಬಂದಿರುವ ಓರ್ವ ಮಹಿಳೆ ಬ್ರೋಕ್ಪಾ ಸಮುದಾಯದ ಓರ್ವನೊಂದಿಗೆ ವಾಸಿಸುತ್ತಿದ್ದಾಳೆ ಎಂಬುದು. ಶಿವನ್ ಆ ಮಹಿಳೆ ಮತ್ತು ಪುರುಷನನ್ನು ಪತ್ತೆ ಹಚ್ಚಲು ಹೊರಟರು. ಆಗ ಆ ಪುರುಷನ ಊರಾದ ಡಾರ್ಚಿಕ್ ಒಳಗೆ ಹೊರಗಿನವರನ್ನು ಬಿಡುತ್ತಿರಲಿಲ್ಲವಾದ್ದರಿಂದ ಆಕೆ ಆತನನ್ನು ಕರೆದುಕೊಂಡು ಹೋಗಿ ಲೇಹ್‌ದಲ್ಲಿರುವ ಒಂದು ರೆಸಾರ್ಟಿನಲ್ಲಿ ತಂಗಿದ್ದಳು.

ಆಕೆಯನ್ನು ಶಿವನ್ ಮಾತನಾಡಿಸಿದಾಗ ಆಕೆ "ಶುದ್ಧ ಆರ್ಯನ್ ಮಗುವನ್ನು ಬಯಸಿ ಡಾರ್ಚಿಕ್‌ಗೆ ಬಂದ ಮಹಿಳೆಯರಲ್ಲಿ ನಾನು ಮೊದಲನೆಯವಳೂ ಅಲ್ಲ, ಖಂಡಿತವಾಗಿ ಕೊನೆಯವಳೂ ಅಲ್ಲ. ಈತನಿಂದ ನಾನು ಪಡೆಯುವ ಮಗು ದೊಡ್ಡವನಾದ ನಂತರ ನಾನು ಅವನಿಗೆ ಉತ್ತಮವಾದ ಬುದ್ಧಿಶಕ್ತಿ ಇರುವ ಸಮುದಾಯದ ಅನುವಂಶವನ್ನು ಕೊಟ್ಟೆ ಎಂದು ಖಂಡಿತಾ ಸಂತೋಷ ಪಡುತ್ತಾನೆ" ಎಂದಳು. ಅಷ್ಟೇ ಅಲ್ಲ, "ನಾನು ಮಾಡುತ್ತಿರುವುದು ತಪ್ಪಲ್ಲ, ಇದಕ್ಕೆ ನಾನು ಹಣ ಕೊಡುತ್ತಿದ್ದೇನೆ" ಎಂದು ತನ್ನನ್ನು ಸಮರ್ಥಿಸಿಕೊಂಡಳು. ಅವಳ ಮಾತಿನಲ್ಲಿ ಹೀಗೆ ಗರ್ಭಧರಿಸಲು ನೆರವು ನೀಡುವಂತಹ ದೊಡ್ಡ ಜಾಲವೇ ಇದೆ ಎಂಬ ಸೂಚನೆ ಇತ್ತು. ಆದರೆ ಆಕೆ ಆ ಜಾಲದ ಬಗ್ಗೆ ಹೆಚ್ಚು ಬಾಯಿಬಿಡಲಿಲ್ಲ.

ಆದರೆ ಆಕೆಯೊಂದಿಗಿದ್ದ ಬ್ರೋಕ್ಪಾ ಯುವಕ ಆಕೆಯಷ್ಟು ಮುಚ್ಚುಮರೆ ಮಾಡಲಿಲ್ಲ. ತ್ಸೆವಾಂಗ್ ಎಂಬ ಆತ "ಇಂತಹ ಮಹಿಳೆಯರು ಸಾಮಾನ್ಯವಾಗಿ ನಮ್ಮಲ್ಲಿ ಎತ್ತರವಿರುವವರನ್ನು, ಉದ್ದನೆ ಮೂಗು ಹೊಂದಿರುವವರನ್ನು ಅರಸಿ ಬರುತ್ತಾರೆ.

ಆದಕ್ಕೆ ತ್ಸೆವಾಂಗ್ ಅವರಲ್ಲಿ ಒಂದು ಉತ್ತರವಿದೆ. ಅವರ ಪ್ರಕಾರ "ನಮ್ಮಲ್ಲಿ ವರದಕ್ಷಿಣೆ ಪದ್ಧತಿ ಇಲ್ಲ. ಆದ್ದರಿಂದ ಹೆಣ್ಣು ಮಕ್ಕಳು ಜನಿಸಿದರೆ ನಮಗೆ ಯಾವ ಚಿಂತೆಯೂ ಇಲ್ಲ. ನಮಗೆ ಬೇಕಾದ ಆಹಾರವನ್ನು ನಾವೇ ಬೆಳೆಯುವುದರಿಂದ ನಮ್ಮನ್ನು ಹಸಿವು ಕಾಡುವುದಿಲ್ಲ. ನಾವು ಇತರರಂತೆ ಸಾಹುಕಾರರಲ್ಲದಿರಬಹುದು. ಆದರೆ ನಾವು ಖಂಡಿತವಾಗಿಯೂ ಬಡವರಲ್ಲ. ನಮ್ಮ ಹಾಡು ಮತ್ತು ಕುಣಿತ ನಮ್ಮನ್ನು ನೆಮ್ಮದಿಯಾಗಿಟ್ಟಿವೆ. ಅದಕ್ಕೇ ನಮ್ಮ ಜೀವನದಲ್ಲಿ ಒತ್ತಡ ಎಂಬುದೇ ಇಲ್ಲ."

ವಿಚಿತ್ರವೆಂದರೆ ಲಡಾಕಿನ ಜನ ಬ್ರೋಕ್ಪಾ ಸಮುದಾಯವನ್ನು ತಿರಸ್ಕಾರ ಭಾವನೆಯಿಂದ ನೋಡುತ್ತಾರೆ. ಲಡಾಕಿನ ಒಂದು ನಾಣ್ನುಡಿ ಪ್ರಕಾರ "ಯಾರೂ ತಮ್ಮ ತಲೆ ಮೇಲೆ ಕೊಡಲಿಯನ್ನಾಗಲಿ, ಪಕ್ಕದಲ್ಲಿ ಬ್ರೋಕ್ಪಾ ವ್ಯಕ್ತಿಯನ್ನಾಗಲಿ ಇಟ್ಟುಕೊಂಡಿರಬಾರದು". ಅಷ್ಟೇ ಅಲ್ಲ, ಲಡಾಕಿನ ಜನ ಬ್ರೋಕ್ಪಾಗಳು ಗಲೀಜು, ಅನಾಗರಿಕರು ಎಂದು ಪರಿಗಣಿಸುತ್ತಾರೆ.

ಆದರೆ ಇವತ್ತು ಇದೇ ಬ್ರೋಕ್ಪಾ ಸಮುದಾಯದವರು 'ಶುದ್ಧ ಆರ್ಯನ್ನರು' ಎಂದು ಭಾವಿಸಿ ಅವರನ್ನು ಹುಡುಕಿಕೊಂಡು ಬರುವವರು, ಅವರಿಂದ ಮಕ್ಕಳನ್ನು ಪಡೆಯಲು ಇಚ್ಛಿಸುವವರು, ಅವರನ್ನು ನೋಡಲು ಕುತೂಹಲದಿಂದ ಬರುವವರು, ಅವರೆಲ್ಲಾ ಬ್ರೋಕ್ಪಾಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು.... ಇದನ್ನೆಲ್ಲಾ ನೋಡಿ ಲಡಾಕಿನ ಜನರು ಅಚ್ಚರಿ ಪಡುತ್ತಿದ್ದಾರಂತೆ.

ಇದೆಲ್ಲದರಿಂದ ಒಂದಂತೂ ಒಳ್ಳೆಯದಾಗಿದೆ. ಅದೇನೆಂದರೆ ಇಷ್ಟು ದಿನಗಳ ಕಾಲ ತಮ್ಮನ್ನು ಕೀಳಾಗಿ ಭಾವಿಸುತ್ತಿದ್ದ ಬ್ರೋಕ್ಪಾ ಜನರಲ್ಲಿ ಈಗ ಒಂದು ರೀತಿಯ ಹೆಮ್ಮೆ ಹುಟ್ಟಿಸಿದೆ.

ಬ್ರೋಕ್ಪಾ ಸಮುದಾಯದವರು 'ಶುದ್ಧ ಆರ್ಯನ್ನ'ರೋ ಅಲ್ಲವೋ, ಅದನ್ನು ಕಟ್ಟಿಕೊಂಡು ನಮಗೆ ಏನೂ ಆಗಬೇಕಿಲ್ಲ. ಆದರೆ ಈ ವಿಚಿತ್ರ ಮತ್ತು ಕುತೂಹಲಕಾರಿ ಸಮುದಾಯದ ಬಗ್ಗೆ ಅಲ್ಲಲ್ಲಿ ಓದಿದ್ದನ್ನು ನಿಮ್ಮೊಂದಿಗೆ ಸುಮ್ಮನೆ ಹಂಚಿಕೊಂಡಿದ್ದೇನೆ.

****

ಇತ್ತೀಚೆಗೆ ಖ್ಯಾತ ಲೇಖಕಿ ಅರುಂಧತಿ ರಾಯ್ ನ್ಯೂಯಾರ್ಕ್ ನಗರದಲ್ಲಿರುವ ಪೀಪಲ್ಸ್ ಯೂನಿವರ್ಸಿಟಿಯಲ್ಲಿ ಒಂದು ಚಿಕ್ಕದಾದ ಆದರೆ ಮುಖ್ಯವಾದ ಒಂದು ಭಾಷಣವನ್ನು ಮಾಡಿದ್ದಾರೆ. ಅದು ಚೆನ್ನಾಗಿರುವುದರಿಂದ ಅದನ್ನು ಅನುವಾದಿಸಿ ಇಲ್ಲಿ ನಮ್ಮ ಓದುಗರಿಗೆ ನೀಡಿದ್ದೇನೆ.

"ಮಂಗಳವಾರ ಬೆಳಗ್ಗೆ ಪೊಲೀಸರು ಜುಕ್ಕೋಟಿ ಪಾರ್ಕ್‌ನಲ್ಲಿ ಸೇರಿದ್ದ ಜನರನ್ನು ಓಡಿಸಿದರು. ಆದರೆ ಇವತ್ತು ಮತ್ತೆ ಜನ ಆ ಪಾರ್ಕ್‌ನಲ್ಲಿ ಸೇರಿದ್ದಾರೆ. ಈ ಯುದ್ಧ ನಡೆಯುತ್ತಿರುವುದು ಯಾವುದೇ ಪ್ರದೇಶದ ಮೇಲೆ ಹಕ್ಕು ಸ್ಥಾಪಿಸುವುದಕ್ಕಲ್ಲ ಎಂದು ಪೊಲೀಸರು ಅರ್ಥ ಮಾಡಿಕೊಳ್ಳಬೇಕು. ನಾವು ಹೋರಾಡುತ್ತಿರುವುದು ಅಲ್ಲೊಂದು ಪಾರ್ಕ್, ಇಲ್ಲೊಂದು ಪಾರ್ಕ್‌ಗಳನ್ನು ಆಕ್ರಮಿಸಿಕೊಳ್ಳುವುದಕ್ಕಲ್ಲ. ಬದಲಾಗಿ ನಾವು ಹೋರಾಡುತ್ತಿರುವುದು ನ್ಯಾಯಕ್ಕಾಗಿ. ಬರೀ ಅಮೆರಿಕದ ಜನರ ನ್ಯಾಯಕ್ಕಾಗಿ ಅಲ್ಲ, ಎಲ್ಲ ಜನರ ನ್ಯಾಯಕ್ಕಾಗಿ.

ಸೆಪ್ಟೆಂಬರ್ 17ರಂದು ಅಮೆರಿಕದಲ್ಲಿ ಪ್ರಾರಂಭವಾದ 'ವಾಲ್ ಸ್ಟ್ರೀಟ್‌ಅನ್ನು ವಶಪಡಿಸಿಕೊಳ್ಳಿ' ಹೋರಾಟದ ಮೂಲಕ ನೀವು ಸಾಧಿಸಿರುವುದು ಏನನ್ನೆಂದರೆ, ಚಕ್ರಾಧಿಪತ್ಯದ ಹೃದಯದಿಂದಲೇ ನೀವು ಒಂದು ಹೊಸ ಪರಿಕಲ್ಪನೆಯನ್ನು, ಹೊಸ ರಾಜಕೀಯ ಪರಿಭಾಷೆಯನ್ನು ಪರಿಚಯಿಸಿದ್ದೀರಿ. ತಿಳಿಗೇಡಿ ಕೊಳ್ಳುಬಾಕ ಸಂಸ್ಕೃತಿಯನ್ನೇ ಸುಖದೊಂದಿಗೆ ಸಮೀಕರಿಸುತ್ತಿದ್ದ ದ್ರಾಬೆಗಳನ್ನು ಸೃಷ್ಟಿಸುತ್ತಿದ್ದ ವ್ಯವಸ್ಥೆಯಲ್ಲಿ ನೀವು ಕನಸು ಕಾಣುವ ಹಕ್ಕನ್ನು ಪರಿಚಯಿಸಿದ್ದೀರಿ.

ಲೇಖಕಿಯಾಗಿ ನಾನು ನಿಮಗೆ ಹೇಳುತ್ತೇನೆ ಇದೊಂದು ಅದ್ಭುತ ಸಾಧನೆ. ಅದಕ್ಕೆ ನಿಮಗೆ ನಾನು ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲದು.

ನಾವೆಲ್ಲ ನ್ಯಾಯದ ಬಗ್ಗೆ ಮಾತನಾಡುತ್ತಿದ್ದೇವೆ. ಇವತ್ತು, ನಾವೆಲ್ಲ ಇಲ್ಲಿ ನ್ಯಾಯದ ಬಗ್ಗೆ ಮಾತನಾಡುತ್ತಿರುವಾಗಲೇ,



ಅಮೆರಿಕದ ಸೈನ್ಯ ಇರಾಕ್ ಮತ್ತು ಅಫಘಾನಿಸ್ತಾನವನ್ನು ಆಕ್ರಮಿಸಿಕೊಳ್ಳುವುದಕ್ಕೆಂದು ಯುದ್ಧ ನಡೆಸುತ್ತಿದೆ. ಅಮೆರಿಕದ ಯುದ್ಧ ವಿಮಾನಗಳು ಪಾಕಿಸ್ತಾನ ಮತ್ತು ಅದರಾಚೆಗಿನ ಪ್ರದೇಶಗಳಲ್ಲಿನ ಅಮಾಯಕ ಜನರನ್ನು ಕೊಲ್ಲುತ್ತಿವೆ. ಸಾವಿರಾರು ಅಮೆರಿಕನ್ ಸೈನಿಕರು ಮತ್ತು ಕೊಲೆಗಡುಕ ತುಕಡಿಗಳು ಆಫ್ರಿಕಾವನ್ನು ಪ್ರವೇಶಿಸುತ್ತಿವೆ. ನಿಮ್ಮ ಲಕ್ಷಕೋಟಿ ಡಾಲರ್‌ಗಳನ್ನು ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ಈಗಾಗಲೇ ಆಕ್ರಮಿಸಿಕೊಂಡಿರುವ ಪ್ರದೇಶಗಳಲ್ಲಿ ಆದಳಿತ ನಡೆಸಲು ವ್ಯಯಮಾಡುತ್ತಿರುವುದು ಸಾಲದೆಂಬಂತೆ ಈಗ ಇರಾನ್ ಮೇಲೆ ಯುದ್ಧ ಸಾರುವ ಮಾತುಗಳೂ ಕೇಳಿಬರುತ್ತಿವೆ.

ಮೂವತ್ತರ ದಶಕದಲ್ಲಿ ಅಮೆರಿಕದಲ್ಲಿ ಸಂಭವಿಸಿದ ಬೃಹತ್ ಆರ್ಥಿಕ ಕುಸಿತದ ನಂತರ ಶಸ್ತ್ರಾಸ್ತ್ರಗಳ ತಯಾರಿಕೆ ಮತ್ತು ಯುದ್ಧಗಳ ರಫ್ತುವಿನ ಮೂಲಕ ಅಮೆರಿಕ ತನ್ನ ಆರ್ಥಿಕ ವ್ಯವಸ್ಥೆಯನ್ನು ಉದ್ದೀಪಿಸುತ್ತಾ ಬಂದಿದೆ. ಇತ್ತೀಚೆಗೆ, ಅಧ್ಯಕ್ಷ ಬರಾಕ್ ಒಬಾಮ ಅವರ ನೇತೃತ್ವದಲ್ಲಿ ಅಮೆರಿಕ ಸರ್ಕಾರ ಸೌದಿ ಅರೆಬಿಯಾದೊಂದಿಗೆ 60 ಬಿಲಿಯನ್ ಡಾಲರ್‌ಗಳ ಶಸ್ತ್ರಾಸ್ತ್ರ ಒಪ್ಪಂದವನ್ನು ಮಾಡಿಕೊಂಡಿದೆ. ಬಂಕರ್‌ಗಳನ್ನು ಛಿದ್ರಮಾಡುವ ಸಾವಿರಾರು ಅಸ್ತ್ರಗಳನ್ನು ಸೌದಿಗೆ ರಫ್ತು ಮಾಡಲು ಅಮೆರಿಕ ಆಶಿಸುತ್ತಿದೆ. ಆಫ್ರಿಕಾದ ಎಲ್ಲ ದೇಶಗಳಲ್ಲಿರುವ ಒಟ್ಟು ಬಡವರ ಸಂಖ್ಯೆಗಿಂತ ಹೆಚ್ಚು ಬಡವರಿರುವ ನನ್ನ ದೇಶ ಭಾರತಕ್ಕೂ ಐದು ಬಿಲಿಯನ್ ಡಾಲರ್ ಮೌಲ್ಯದ ಯುದ್ಧ ವಿಮಾನಗಳನ್ನು ಅಮೆರಿಕ ಮಾರಿದೆ. ಹಿರೋಷಿಮಾ-ನಾಗಾಸಾಕಿ ಮೇಲೆ ನಡೆದ ಬಾಂಬ್ ದಾಳಿಗಳಿಂದ ಹಿಡಿದು ವಿಯಟ್ನಾಂ, ಕೊರಿಯಾ, ಲ್ಯಾಟಿನ್ ಅಮೆರಿಕಗಳ ಮೇಲೆ ಅಮೆರಿಕ ನಡೆಸಿರುವ ಯುದ್ಧಗಳಲ್ಲಿ ಲಕ್ಷಾಂತರ ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಅವರೆಲ್ಲ ಸತ್ತಿದ್ದು 'ಅಮೆರಿಕದ ಜೀವನ ಶೈಲಿ'ಯನ್ನು ರಕ್ಷಿಸುವುದಕ್ಕೆ.

ಆದರೆ ಇವತ್ತು ಇತರೆ ದೇಶದವರೂ ಆಶಿಸುವ ಮಾದರಿಯಾದ 'ಅಮೆರಿಕದ ಜೀವನ ಶೈಲಿ'ಯಿಂದಾಗಿ ಅಮೆರಿಕದ ಅರ್ಧದಷ್ಟು ಸಾರ್ವಜನಿಕ ಆಸ್ತಿ ಕೇವಲ ನಾನೂರು ಜನರ ಪಾಲಾಗಿರುವುದು ನಮಗೆ ಗೊತ್ತಾಗಿದೆ. ಇದರಿಂದಾಗಿ ಸಾವಿರಾರು ಅಮೆರಿಕನ್ನರು ತಮ್ಮ ಮನೆ ಮತ್ತು ಕೆಲಸಗಳನ್ನು ಕಳೆದುಕೊಳ್ಳುವಂತಾಗಿದೆ. ಆದರೂ ಅಮೆರಿಕ ಸರ್ಕಾರ ಈ ಅವನತಿಗೆ ಕಾರಣವಾದ ಬ್ಯಾಂಕುಗಳನ್ನು ಮತ್ತು ಕಾರ್ಪೊರೇಟ್ ಕಂಪನಿಗಳನ್ನು ರಕ್ಷಿಸಿದೆ. ಅಮೆರಿಕ ಇಂಟರ್‌ನ್ಯಾಷನಲ್ ಗ್ರೂಪ್ ಎಂಬ ಕಂಪನಿಯನ್ನು ಉಳಿಸಲು ಅಮೆರಿಕದ ಸರ್ಕಾರ 182 ಬಿಲಿಯನ್ ಡಾಲರ್‌ಗಳನ್ನು ನೀಡಿದೆ.

ಅಮೆರಿಕದ ಇಂತಹ ಆರ್ಥಿಕ ನೀತಿಯನ್ನು ಭಾರತ ಸರ್ಕಾರ ಆರಾಧಿಸುತ್ತದೆ. ಕಳೆದ ಇಪ್ಪತ್ತು ವರ್ಷಗಳಿಂದ ಅನುಸರಿಸುತ್ತಾ ಬಂದಿರುವ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯಿಂದಾಗಿ ನಮ್ಮ ದೇಶದ ಒಟ್ಟು ಜಿಡಿಪಿಯ ನಾಲ್ಕನೆ ಒಂದು ಭಾಗದಷ್ಟು ಆಸ್ತಿಯನ್ನು ಭಾರತದ ಕೇವಲ 100 ಕೋಟ್ಯಾಧಿಪತಿಗಳು ಅನುಭವಿಸುವಂತಾಗಿದೆ. ಇದೇ ಸಮಯದಲ್ಲಿ ನಮ್ಮ ದೇಶದ ಶೇಕಡ 80ಕ್ಕಿಂತಲೂ ಹೆಚ್ಚು ಜನ 20 ರೂಪಾಯಿಗಳಿಗಿಂತಲೂ ಕಡಿಮೆ ದಿನಗೂಲಿಯಲ್ಲಿ ಬದುಕುತ್ತಿದ್ದಾರೆ. ಅಷ್ಟೇ ಅಲ್ಲ, 2,50,000 ರೈತರು ಸಾಲದ ಸುರಳಿಯಲ್ಲಿ ಸಿಕ್ಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದನ್ನು ನಾವು ಅಭಿವೃದ್ಧಿ ಎಂದು ಕರೆಯುತ್ತಿದ್ದೇವೆ; ನಾವೀಗ ಸೂಪರ್‌ಪವರ್ ಎಂದು ಹೆಮ್ಮೆ ಪಡುತ್ತಿದ್ದೇವೆ. ನಿಮ್ಮಂತೆಯೆ ನಾವು ಕೂಡ ಈಗ ಸೂಪರ್‌ಪವರ್‌ಗಳಾಗಲು ಅರ್ಹರಾಗಿದ್ದೇವೆ. ಯಾಕೆಂದರೆ ನಾವೂ ಅಣುಬಾಂಬ್‌ಗಳನ್ನು ಹೊಂದಿದ್ದೇವೆ ಮತ್ತು ನಿಮ್ಮಂತೆಯೇ ನಮ್ಮ ದೇಶದಲ್ಲೂ ಅಸಹ್ಯ ಹುಟ್ಟಿಸುವಷ್ಟು ಅಸಮಾನತೆ ಇದೆ.

5...

ಸೋರುತಿಹುದು ಸೋಸಲೆ ಮಠ


ವಿದ್ಯಾಮನೋಹರ ತೀರ್ಥಸ್ವಾಮಿ

ಏನೆಲ್ಲಾ ಅವ್ಯವಹಾರಗಳನ್ನು ಮಾಡಿ ಹಣ ಲಪಟಾಯಿಸಿ ಸ್ವಾಮಿಗಳು ಅದನ್ನು ವ್ಯಯಿಸುತ್ತಿರುವ ರೀತಿಯನ್ನು ನೋಡಿ ಭಕ್ತಾದಿಗಳಲ್ಲಿ ಹೇಸಿಗೆ ಹುಟ್ಟಿದೆ. ಹೇಳಿಕೇಳಿ ೨೭ ವರ್ಷದ ಬಿಸಿರಕ್ತದ ವಯಸ್ಸು. ಸ್ವಾಮಿಯಾಗಿ ಸರ್ವಸಂಗ ಪರಿತ್ಯಾಗಿಯಾಗಿ ಪರಲೋಕದ ಬಗ್ಗೆ ಆಸಕ್ತಿ ತೋರಬೇಕಾಗಿದ್ದ ಇವರಿಗೆ ಅಂಥ ಯಾವ ಆಸಕ್ತಿಯೂ ಇದ್ದಂತಿಲ್ಲ. "ಇಲ್ಲೇ ಸ್ವರ್ಗ, ಇಲ್ಲೇ ನರಕ ಮೇಲೇನಿಲ್ಲಾ ಸುಳ್ಳು" ಎಂಬ ತತ್ವವನ್ನು ಆಚರಿಸುತ್ತಾ ಇಹಲೋಕವನ್ನು ತಮ್ಮ ಪಾಲಿನ ಸ್ವರ್ಗವನ್ನಾಗಿ ಮಾಡಿಕೊಂಡಿದ್ದಾರೆ. ದೈವೇಚ್ಛೆಯಿಂದ ಎಲ್ಲವೂ ಸರಿಯಾದ ದಿಕ್ಕಿನಲ್ಲಿ ನಡೆದರೆ ವ್ಯಾಸರಾಜ ಮಠಕ್ಕೆ ಉಳಿಗಾಲ. ಅದನ್ನ ಪವಿತ್ರ ಕ್ಷೇತ್ರವೆಂದು ನಂಬಿರುವ ಭಕ್ತಾದಿಗಳಿಗೂ ನೆಮ್ಮದಿ.


ದೊಡ್ಡಿಪಾಳ್ಯ ನರಸಿಂಹಮೂರ್ತಿ

ಶ್ರೀ ಶ್ರೀ ವ್ಯಾಸರಾಜ ಮಠದ ವೃತ್ತಾಂತವನ್ನು ಪ್ರಾರಂಭಿಸುವ ಮುಂಚೆ ಒಂದು ಸಾಮಾನ್ಯ ಪ್ರಶ್ನೆಗೆ ಉತ್ತರ ಕಂಡುಕೊಂಡು ಮುಂದುವರೆಯಬೇಕೆಂದು ಶ್ರೀಮಠದ ಭಕ್ತಾದಿಗಳಲ್ಲಿ ಮನವಿ. ಪ್ರಶ್ನೆ ಇಷ್ಟೇ. ಇಲ್ಲೊಬ್ಬ ವ್ಯಕ್ತಿಯಿದ್ದಾನೆ. ವಯಸ್ಸು ಕೇವಲ 27 ವರ್ಷ. ಆತ ಚೆಕ್ ಬೌನ್ಸ್ ಮಾಡುವುದರಲ್ಲಿ ನಿಸ್ಸೀಮ. ಈ ಕಾರಣಕ್ಕಾಗಿ ಬಂಧನಕ್ಕೂ ಒಳಗಾಗಿದ್ದ. ಹಾಗೇ ಒಂದೇ ಆಸ್ತಿಯನ್ನು (ಅದೂ ಸಹ ತನ್ನದಲ್ಲ) ಮೂರು ನಾಲ್ಕು ಜನರಿಗೆ GPA ಅಥವಾ ಮಾರಾಟ ಒಪ್ಪಂದ ಮಾಡಿಕೊಡುವುದರಲ್ಲೂ ಆತ ಪ್ರವೀಣ. ಇತರೆ ಮೂರನೇ ದರ್ಜೆಯ ಶೋಕಿಗಳಲ್ಲಿ ಆತ ಎತ್ತಿದ ಕೈ. ಅಮಾಯಕ ಹೆಣ್ಣುಮಕ್ಕಳಿಗೆ ಕಿರುಕುಳ ಕೊಟ್ಟಿದ್ದರಿಂದ ಆತನ ವಿರುದ್ಧ ಮಹಿಳಾ ಆಯೋಗಕ್ಕೂ ದೂರು ಹೋಗಿತ್ತು. ಇಂಥ ಎಲ್ಲಾ ಅವಗುಣಗಳನ್ನು ಮೈಗೂಡಿಸಿಕೊಂಡಿರುವ ಈ ಪ್ರಭೃತಿ ಯಾರಿರಬಹುದು?

ಈತ ಪರಪ್ಪನ ಅಗ್ರಹಾರದಲ್ಲಿರುವ ಅಥವಾ ಆದಷ್ಟು ಶೀಘ್ರವಾಗಿ ಅಲ್ಲಿಗೆ ಪ್ರವೇಶಾತಿ ಪಡೆದುಕೊಳ್ಳಲೇಬೇಕಿರುವ ಒಬ್ಬ ಕ್ರಿಮಿನಲ್ ಎಂದು ಸಹಜವಾಗಿ ನಾವು ಯೋಚಿಸುತ್ತೇವೆ. ಆದರೆ ನಮ್ಮ ಅಂದಾಜು ತಪ್ಪು, ಆತ ಬೇರಾರೂ ಅಲ್ಲ, ಜಗದ್ಗುರು ಶ್ರೀಮಾನ್ ಮಧ್ವಾಚಾರ್ಯರ ಮೂಲ ಸಂಸ್ಥಾನಗಳಲ್ಲೊಂದಾದ ಸೋಸಲೆ ವ್ಯಾಸರಾಜ ಮಠದ ಪೀಠಾಧಿಪತಿಯಾಗಿ ಪ್ರತಿಷ್ಠಾಪಿತರಾಗಿರುವ ಶ್ರೀ ವಿದ್ಯಾಮನೋಹರ ತೀರ್ಥ ಸ್ವಾಮೀಜಿಗಳು!

ಹಾಗಂತ ಈ ಮಠ ಯಾವುದೋ ಮೂಲೆಯಲ್ಲಿರುವ ಪಡಪೋಶಿ ಮಠವಿರಬಹುದೆಂದು ನೀವು ಭಾವಿಸುವಂತಿಲ್ಲ. ಮಠದ ಇತಿಹಾಸ, ಖ್ಯಾತಿ ಮತ್ತು ಹೆಗ್ಗಳಿಕೆಗಳನ್ನು ಹೇಳುತ್ತಾ ಹೋದರೆ ಅದೇ ಒಂದು ಕತೆಯಾಗಿಬಿಡುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಮೂಲತಃ ತಮಿಳುನಾಡಿನ


ನೆಕ್ಕಣ್ಣ-ಮುಕ್ಕಣ್ಣ!

ಕುಂಭಕೋಣಂನಲ್ಲಿದ್ದ ಈ ಮಠದ ಅಂದಿನ ಸ್ವಾಮಿ ವಿದ್ಯಾವಲ್ಲಭರನ್ನು ಮೈಸೂರಿನ ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ್ 1824 ರಲ್ಲಿ ಕರ್ನಾಟಕಕ್ಕೆ ಕರೆ ತಂದರು. ಅವರಿಗೆ ರಾಜಗುರುಗಳ ಸ್ಥಾನಮಾನವನ್ನು ಕಲ್ಪಿಸಿ ಮೈಸೂರು ಜಿಲ್ಲೆ ಟಿ. ನರಸೀಪುರದ ಬಳಿಯ ಸೋಸಲೆ ಎಂಬ ಗ್ರಾಮವನ್ನು ಉಂಬಳಿಯಾಗಿ ನೀಡಿ ಅಲ್ಲಿ ಈ ಮಠವನ್ನು ಸ್ಥಾಪಿಸಿದರು. ರಾಜಾಶ್ರಯದಲ್ಲಿ ಸೊಂಪಾಗಿ ಬೆಳೆದ ಈ ಸೋಸಲೆ ಮಠದ ಅಡಿಯಲ್ಲಿ ಈಗ ಕರ್ನಾಟಕ, ತಮಿಳುನಾಡು, ಆಂಧ್ರಗಳನ್ನೊಳಗೊಂಡು ಒಟ್ಟಾರೆ ಸುಮಾರು 58 ಶಾಖೆಗಳಿವೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲೇ ಬಸವನಗುಡಿ, ವಿವಿಪುರಂ, ಚಿಕ್ಕಪೇಟೆ, ಸುಬ್ರಹ್ಮಣ್ಯಪುರ ಮತ್ತು ಮಹಾಲಕ್ಷ್ಮಿ ಲೇಔಟ್‌ಗಳಲ್ಲಿ ಈ ಮಠದ ಐದು ಶಾಖೆಗಳಿವೆ. ಈ ಎಲ್ಲಾ ಮಠಗಳ ಒಟ್ಟು ಆಸ್ತಿಪಾಸ್ತಿ ಮೌಲ್ಯವನ್ನು ಲೆಕ್ಕ ಹಾಕಿದರೆ ಸಾವಿರಾರು ಕೋಟಿಗಳಷ್ಟಾಗುತ್ತದೆ . ಇಷ್ಟೊಂದು ವ್ಯಾಪಕವಾಗಿರುವ ವ್ಯಾಸರಾಜ ಸಂಸ್ಥಾನಕ್ಕೆ ಏಕೈಕ ಸಿಂಹಾಸನಾಧೀಶ್ವರರಾಗಿರುವವರೇ 'ಪರಮಪೂಜ್ಯ 1008 ಶ್ರೀ ವಿದ್ಯಾ ಮನೋಹರ ತೀರ್ಥ ಶ್ರೀ ಪಾದಂಗಳು.' ಇದು ಶ್ರೀಮಠದ ಕರಪತ್ರ ಇತ್ಯಾದಿಗಳಲ್ಲಿ ಅಧಿಕೃತವಾಗಿ ಅಚ್ಚಾಗುವ ಬಿರುದು.

ಮಠದ ಆಸ್ತಿ ಪಾಸ್ತಿಗಳು, ಶಾಖೋಪ ಶಾಖೆಗಳು, ಅವುಗಳ ವಹಿವಾಟು ಎಲ್ಲವನ್ನೂ ಪರಿಗಣಿಸಿದರೆ ಅದನ್ನು


ತಂದೆ ಉಧ್ವಾಚಾರ್

ಮಠ ಎನ್ನುವುದಕ್ಕಿಂತ ಒಂದು ಸಂಸ್ಥಾನ ಎಂದು ಕರೆಯುವುದೇ ಉತ್ತಮ.

ಇಂಥ ಸಂಸ್ಥಾನದ ಗ್ರಹಗತಿಗಳು ಕೆಡಲು ಶುರುವಾಗಿದ್ದು 1997 ರಲ್ಲಿ. ಚೆಕ್‌ಬೌನ್ಸ್ ಖ್ಯಾತಿಯ ಈಗಿನ ಸ್ವಾಮಿಗಳ ಪಿತಾಮಹರಾದ ಶ್ರೀ ವಿದ್ಯಾವಾಚಸ್ಪತಿ ಸ್ವಾಮಿಗಳು 1997 ರಲ್ಲಿ ಪೀಠಸ್ಥರಾದಾಗಿನಿಂದ ಮಠದ ಆಸ್ತಿಯ ಹಾಗೂ ಹಣದ ದುರುಪಯೋಗ ವ್ಯಾಪಕವಾಯಿತೆಂದು ಭಕ್ತಾದಿಗಳು ಅಳಲು ತೋಡಿಕೊಳ್ಳುತ್ತಾರೆ. ಸದರಿ ವಿದ್ಯಾವಾಚಸ್ಪತಿಗಳು ಪೀಠಾಧಿಪತಿಯಾಗುವ ವೇಳೆಗಾಗಲೇ ಅವರಿಗೆ ಸುಮಾರು 70 ವರ್ಷ ದಾಟಿ "ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ" ಎಂಬಂಥ ಸ್ಥಿತಿ. 10 ಜನ ಮಕ್ಕಳು ಹಾಗೂ ಮೊಮ್ಮಕ್ಕಳನ್ನೊಳಗೊಂಡ ತುಂಬು ಜೀವನವನ್ನು ಸವೆಸಿ ಆಗಿತ್ತು. ಆದರೆ ಅದೇನು ಕರಾಮತ್ತು ಮಾಡಿದರೋ ಏನೋ ಅಂಥ ವೃದ್ಧಾಪ್ಯದಲ್ಲಿ "ಸರ್ವ ಸಂಗ ಪರಿತ್ಯಕ್ತ"ರೆಂಬ ಹಣೆಪಟ್ಟಿ ಹಚ್ಚಿಕೊಂಡು ಮಠದ ಪೀಠವನ್ನು ಹಿಡಿದೇಬಿಟ್ಟರು. ಸೀಟಿನಲ್ಲಿ ಕೂತಿದ್ದೇ ತಡ ಈಗಿನ ಯಾವ ರಾಜಕಾರಣಿಗೂ ಕಮ್ಮಿ ಇಲ್ಲದಂತೆ ತನಗೆ ಬೇಕಾದವರನ್ನು, ಹೆಚ್ಚಾಗಿ ತನ್ನ ಮಕ್ಕಳು ಮರಿಗಳನ್ನೇ ವಿವಿಧ ಮಠಗಳಿಗೆ ಮ್ಯಾನೇಜರ್‌ಗಳನ್ನಾಗಿ ನೇಮಿಸಿಕೊಂಡರು. ತನ್ನ ಮಗ ಸುಖಾಚಾರ್ ಎಂಬುವವರನ್ನು ಇಡೀ ಸಂಸ್ಥಾನದ ಆಡಳಿತಾಧಿಕಾರಿಯನ್ನಾಗಿ ಪ್ರತಿಷ್ಠಾಪಿಸಿದರು.

ಸಂತಾನ ಲಕ್ಷ್ಮಿಯ ಅನುಗ್ರಹ ಪಡೆದು ಭಾರತದ ಜನಸಂಖ್ಯೆಗೆ ತಮ್ಮ ಶಕ್ತಿ ಮೀರಿ ಕೊಡುಗೆ ನೀಡಿದ್ದ ಜಯತೀರ್ಥಾಚಾರ್ (ಪೂರ್ವಾಶ್ರಮದ ಹೆಸರು) ಅಲಿಯಾಸ್ ವಿದ್ಯಾವಾಚಸ್ಪತಿ ಸ್ವಾಮಿಗಳು ತಮ್ಮ ಜಾಣ್ಮೆಯನ್ನೆಲ್ಲಾ ಬಳಸಿ ಸಿಕ್ಕ ಸದಾವಕಾಶವನ್ನು ಯಥೇಚ್ಛವಾಗಿ ದುರುಪಯೋಗಪಡಿಸಿಕೊಂಡರು. ತಮ್ಮ ಈ ಕುಖ್ಯಾತಿಗೆ ಕಳಶವಿಟ್ಟಂತೆ ತಮ್ಮ ಹಿರಿಯ ಮಗ ಉಧ್ವಾಚಾರ್‌ನ ಮಗ ಶರತ್ ಎಂಬುವವನನ್ನೇ ತನ್ನ ಉತ್ತರಾಧಿಕಾರಿಯೆಂದು ರಾತ್ರೋರಾತ್ರಿ ಘೋಷಿಸಿಬಿಟ್ಟರು. ಆದರೆ ಮಠದ ನಿಯಮಾವಳಿಗಳ ಪ್ರಕಾರ ಪೀಠಾಧಿಪತಿಗಳ ಸ್ವಂತ ಮಕ್ಕಳನ್ನು ಅಥವಾ ಹತ್ತಿರದ ಬಂಧುಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸುವಂತಿಲ್ಲ. ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮಾಧ್ವ ಬ್ರಾಹ್ಮಣರ ಮಠದ ನಾಶಕ್ಕೆ ನಾಂದಿ ಹಾಡಿದ ಸ್ವಾಮಿಗಳು 2007 ರಲ್ಲಿ ಸತ್ತು .... ಸೇರಿದರು. ಕ್ಷಮಿಸಿ! ಸತ್ತು ಸ್ವರ್ಗ ಸೇರಿದರು ಎಂದರೆ ಮಠದ ಭಕ್ತಾದಿಗಳೇ ಒಪ್ಪುತ್ತಿಲ್ಲ.


ತಾಯಿ ಶ್ರೀಮತಿ

ಇಲ್ಲಿಗೆ ಒಂದು ಅಧ್ಯಾಯ ಮುಗಿದಂತಾಯಿತು. ಇನ್ನೂ ಮುಂದಿನ ಅಧ್ಯಾಯದ ಕೇಂದ್ರ ವ್ಯಕ್ತಿ ಶ್ರೀಮಾನ್ ಶರತ್‌ರವರು. ಈತ ತನ್ನ ಇತರ ಬ್ರಾಹ್ಮಣ ಸಹಪಾಠಿಗಳಂತೆ "ಪೂರ್ವಜನ್ಮದ ಸುಕೃತಫಲ"ವಾಗಿ ದೊರೆತ ಸದಾವಕಾಶವನ್ನು ಸದ್ವಿನಿಯೋಗ ಪಡಿಸಿಕೊಂಡು ಸರಿಯಾಗಿ ವ್ಯಾಸಂಗ ಮಾಡಿದ್ದರೆ ಐಟಿ ಇಂಜಿನಿಯರ್ರೋ, ಎಂಬಿಎನೋ ಮಾಡಿ ಲಕ್ಷಗಟ್ಟಲೆ ಸಂಬಳ ಪಡೆದು, ಪಬ್ಬು-ಕ್ಲಬ್ಬುಗಳನ್ನೆಲ್ಲಾ ಸುತ್ತಿ ಇಹಲೋಕದ ಸಕಲ ಸುಖಗಳನ್ನೂ ಅನುಭವಿಸಿ ತಮ್ಮ ನರಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬಹುದಿತ್ತು. ಆದರೆ ವ್ಯಾಸಂಗಕ್ಕೂ ಒಂದಷ್ಟು ಪರಿಶ್ರಮದ ಅಗತ್ಯವಿರುತ್ತದೆ. ಆದ್ದರಿಂದ ಅವರ ಶೈಕ್ಷಣಿಕ ಜೀವನ ಏಳ್ಗೆಯಾಗಲಿಲ್ಲ. ಇದು ಹೇಳಿಕೇಳಿ ಫೇಲ್ ಕ್ಯಾಂಡಿಡೇಟು! ಈ ದಾರಿತಪ್ಪಿದ ಮಗನಿಗೆ ಸಕಲ 'ಶೋ[ಕಿ]'ಗಳೂ ಆಗಲೇ ಮೈಗೂಡಿದ್ದವು.

ಇಂಥ ಹಿನ್ನೆಲೆಯಿದ್ದ ಶರತ್‌ರವರು 2007 ರ ... ವ್ಯಾಸರಾಜಮಠದ 58 ಮಠಗಳ ಸಂಸ್ಥಾನ ಪೀಠಾಧಿಪತಿಯಾದಾಗ ಕೇವಲ 23 ರ ಹರೆಯ ... ಆಚಾರವಿಚಾರಗಳು, ಪೀಠಾಧಿಪತಿ ಸ್ಥಾನಕ್ಕೆ ತಕ್ಕ ಸಂಸ್ಕಾರಗ[ಳು] ಯಾವುವೂ ಇರಲಿಲ್ಲ. "ಎಲ್ಲಿಯೂ ಸಲ್ಲದವನು ವ್ಯಾಸಮ[ಠದಲ್ಲಿ] ಸಲ್ಲುವನಯ್ಯಾ" ಎಂದು ವಾಚಸ್ಪತಿ ಸ್ವಾಮಿಗಳು ಈತನ[ನ್ನು] ಪೀಠಕ್ಕೇರಿಸಿದಾಗ ಮಠದ ಅನುಯಾಯಿಗಳು ಒಮ್ಮೆ ಬೆಚ್ಚಿಬಿದ್ದರು. ವಿರೋಧ ತೋರಿದರು. ಆದರೆ ಅ[ವರ] ವಿರೋಧಕ್ಕೆ ಕವಡೆಕಾಸಿನ ಕಿಮ್ಮತ್ತೂ ಸಿಗಲಿಲ್ಲ. ಕಾ[ರಣ] ಮಠಗಳಲ್ಲಿನ ನಿಯಮಾವಳಿಗಳು ಪ್ರಜಾತಂತ್ರ ಆಶಯಗಳಿಗೋ ಅಥವಾ ಇನ್ನಾವುದೇ ಸಾಮಾ[ಜಿಕ] ಬದ್ಧತೆಗಳಿಗೋ ಒಳಪಟ್ಟು ರೂಪುಗೊಂಡಂತಹುಗಳ[ಲ್ಲ]. ಊಳಿಗಮಾನ್ಯ ಮೌಲ್ಯಗಳು ಯಥೇಚ್ಛವಾಗಿ ಜಾರಿಯಲ್ಲಿರ[ುವ] ಇಂಥ ಮಠಗಳಲ್ಲಿ ಪೀಠಾಧಿಪತಿಯ ತೀರ್ಮಾನವೇ ಅಂತಿ[ಮ].

ಹೋಗಲಿ ಮಠಾಧಿಪತಿಯಾದ ನಂತರವಾದರೂ ಭಕ್ತಾದಿಗಳ ಅಭಿಷ್ಟೆಗೆ ತಕ್ಕಂತೆ ನಡೆದುಕೊಂಡು ಮಠವ[ನ್ನು] ನಡೆಸಿಕೊಂಡು ಹೋಗಿದ್ದರೆ ಎಲ್ಲರೂ ನಿಟ್ಟುಸಿರು ಬಿಡುತ್ತಿದ್ದರು. ಆದರೆ ಆಗಿದ್ದೇ ಬೇರೆ. ಸನ್ಯಾಸಿಯವರು ಕಳೆದ ನಾಲ್ಕು ವರ್ಷಗಳಲ್ಲಿ ಮಠದ ಮಾನ ಮರ್ಯಾದೆಯನ್ನು ಮೂರು ಕಾಸಿಗೂ ಬೆಲೆಯಿಲ್ಲದಂತೆ ಮಾಡಿಯೇ ತೀರುತ್ತೇನೆಂದು ಪಣತೊಟ್ಟ ನಿಂತವರಂತೆ ಹಗಲಿರುಳು ಶ್ರಮಿಸುತ್ತಿದ್ದಾ[ರೆ]. ಪರಿಸ್ಥಿತಿ ಹೀಗೇ ಮುಂದುವರೆದರೆ ಮುಂದೊಂದು ದಿನ ರೋಸಿಹೋದ ಭಕ್ತರು ಮಠಕ್ಕೆ ಬೀಗ ಜಡಿಯುವ ಕಾಯಕಕ್ಕೆ ಮುಂದಾದರೂ ಆಶ್ಚರ್ಯವಿ[ಲ್ಲ].

ಮಠದ ಪ್ರಮುಖ ಐ... ಆಸ್ತಿಪಾಸ್ತಿಗಳನ್ನು ಪರಭಾರೆ ಮಾಡ[ಲು] ಹವಣಿಸುತ್ತಿರುವ ಇವರ 'ಪಂಚಕರ್ಮಕಾಂಡ'ಗಳು ಹೀ[ಗಿವೆ]:


1. ತಮಿಳುನಾಡಿನ ಶ್ರೀರಂಗಂನಲ್ಲಿರುವ ಮಠಕ್ಕೆ ಸೇ[ರಿದ] ಚಂದ್ರಿಕಾ ಮಂಟಪ ಮತ್ತು ಉತ್ತರ ಬೀದಿಯ ... ಸುಮಾರು 18,000 ಚದರ ಅಡಿಗಳ ಆಸ್ತಿಗಳನ್ನು ಡಿ... ಕಾರ್ಯಕರ್ತರಾದ ರಾಜಪೆರುಮಾಳ್ ಮತ್ತು ಜ... ರಾಜು ಎಂಬುವವರಿಗೆ ಲೀಸ್ ಅಗ್ರಿಮೆಂ[ಟ್] ಮಾಡಿಕೊಟ್ಟಿದ್ದಾನೆ.
   ಈ ಬಗ್ಗೆ ದಾಖಲಾಗಿರುವ ಕೇಸು ಸಿಓಡಿ ತನಿಖೆಯ[ಲ್ಲಿ] ತಮ್ಮಿಂದ 70 ಲಕ್ಷ ರೂಪಾಯಿಗಳನ್ನು ಲಿ... ಮೊತ್ತವಾಗಿ ಸ್ವಾಮೀಜಿ ಪಡೆದುಕೊಂಡಿದ್ದಾರೆಂದು ಲಿ... ಅಗ್ರಿಮೆಂಟ್ ಪಡೆದುಕೊಂಡವರೇ ಸಿಓಡಿ ತನಿಖೆ ... ಒಪ್ಪಿಕೊಂಡಿದ್ದಾರೆ.
2. ತಿರುಪತಿಯ ಗೋವಿಂದರಾಜ ಪಟ್ಟಣದಲ್ಲಿರುವ ಸ್ವ... ಈ ಹಿಂದೆ ಎಸ್.ಸಿ. ಹರಿಯೆಂಬುವವರಿಗೆ 15 ... ರೂ.ಗಳನ್ನು ಪಡೆದು 30 ವರ್ಷಗಳ ಕಾಲ ಲೀ[ಸ್] ಅಗ್ರಿಮೆಂಟ್ ಮಾಡಿಕೊಟ್ಟಿದ್ದ ಇದೇ ಕಾವಿಧಾರಿ ನ... ಅದೇ ಆಸ್ತಿಯನ್ನು ಮತ್ತೆ ಬೇರೆ ಇನ್ನಿಬ್ಬರಿಗೂ ... ಮಾಡಿಕೊಟ್ಟು ಬಿಟ್ಟರು. ಹೀಗಾಗಿ ಈ ಪ್ರಕರ[ಣ] ಪೊಲೀಸ್ ಠಾಣೆಯ ಮೆಟ್ಟಿಲೇರಿ ಸ್ವಾಮಿಗಳನ್ನು ಅ... ಮಾಡಬೇಕಾಯ್ತು.
3. ತಿರುಮಲದಲ್ಲಿರುವ ಮಠದ ಕಟ್ಟಡವನ್ನು ಭಗನ್‌ಲ... ಮತ್ತು ಸಂಪತ್‌ಕುಮಾರ್ ಜೈನ್ ಎಂಬುವ[ರಿಗೆ] ಲೀಸ್‌ಗೆ ನೀಡಿ ದರ ಮುಂಗಡವಾಗಿ 35 ಲಕ್ಷ ರೂ.ಗ[ಳನ್ನು] ಪಡೆದುಕೊಂಡಿದ್ದಾನೆ. ಈಗ ಮಠದ ಸದರಿ ... ಪ್ರವಾಸಿ ಲಾಡ್ಜ್ ಆಗಿ ಬದಲಾಗಿದೆ.
4. ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಆ... ಅವ್ಯವಹಾರವನ್ನು ನೋಡಿದರೆ ಈ ಸ್ವಾಮಿಗೂ ... ದುಷ್ಟ ಪಟಾಲಂಗೂ ಯಾವುದೇ ನೀತಿ ನಿಯಮ... ಎಂಬುದು ನಿಚ್ಚಳವಾಗುತ್ತದೆ. ತಾ. 18.6.1987

ಅಸಹಾಯಕ ಹೆಣ್ಣಿನ ಗೋಳು

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮಠದ ಆವರಣದಲ್ಲಿರುವ ಮಠಕ್ಕೆ ಸೇರಿದ ಮನೆಯೊಂದರಲ್ಲಿ ಎಂ.ಎಸ್. ಶ್ರೀದೇವಿ ಎಂಬ ಅಸಹಾಯಕ ಮಹಿಳೆಯೊಬ್ಬಳು ತನ್ನ ಎರಡು ಚಿಕ್ಕ ಮಕ್ಕಳೊಂದಿಗೆ ವಾಸವಾಗಿದ್ದಾಳೆ. ಆಕೆಯ ಗಂಡ ಸನ್ಯಾಸತ್ವ ದೀಕ್ಷೆ ಪಡೆದು ಮನೆಬಿಟ್ಟು ಹೋಗಿ ಬಹಳ ದಿನಗಳಾಗಿವೆ. ಈಗ ಆಕೆ ವಾಸವಿರುವ ಮನೆಯನ್ನು 2005 ರಲ್ಲಿ 15 ವರ್ಷಗಳ ಅವಧಿಗೆ 75,000 ರೂ.ಗಳನ್ನು ನೀಡಿ ಭೋಗ್ಯ ಕರಾರು ಮಾಡಿಕೊಂಡಿದ್ದಾಳೆ. ಹೀಗಿರುವಾಗ ಸ್ವಾಮೀಜಿ ಹಾಗೂ ಆಡಳಿತಾಧಿಕಾರಿ ನಟರಾಜ ಜೋಯಿಸನ ವಕ್ರದೃಷ್ಟಿ ಈಕೆಯ ಮೇಲೆ ಬಿದ್ದಿದೆ. ಅವರ ಮಾತಿಗೆ ಬಗ್ಗದಿದ್ದಾಗ ಆಕೆಯ ಮನೆಗೆ ನೀರು, ವಿದ್ಯುತ್ ಕಡಿತಗೊಳಿಸಿದರು. ಇಲ್ಲದ ಕಿರುಕುಳ ನೀಡಲು ಪ್ರಾರಂಭಿಸಿದರು. ಆಕೆ ಮೈಸೂರು ಪೊಲೀಸರಿಗೆ ದೂರು ಸಲ್ಲಿಸಿದಳು. ಯಾವ ಪ್ರಯೋಜನವೂ ಆಗಲಿಲ್ಲ. ಕೊನೆಗೆ ಆಕೆ ರಾಜ್ಯ ಮಹಿಳಾ ಆಯೋಗಕ್ಕೆ ತಾ. 14.1.2011 ರಂದು ದೂರು ಸಲ್ಲಿಸಿ ಈ ಆಸಾಮಿಗಳಿಗೆ ಐಪಿಸಿ 420, 425, 427 ಮತ್ತು 430 ರ ಪ್ರಕಾರ ಶಿಕ್ಷೆ ಕೊಡಿಸಿ ತನಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಂಡಳು. ಈ ಸಂಬಂಧ ಮಹಿಳಾ ಆಯೋಗವು ಮೈಸೂರು ಪೊಲೀಸರಿಗೆ ಸೂಚನೆ ನೀಡಿ ಅಮಾಯಕ ಹೆಣ್ಣಿಗೆ ರಕ್ಷಣೆ ನೀಡುವಂತೆ ತಿಳಿಸಿದೆ. ಈ ಎಲ್ಲದರಿಂದ ಬೇಸತ್ತ ಮಹಿಳೆ ಇವರ ಸಹವಾಸವೇ ಬೇಡವೆಂದು ಇತ್ತೀಚೆಗೆ ಮೈಸೂರನ್ನೇ ಬಿಟ್ಟು ಬೆಂಗಳೂರಿಗೆ ಬಂದು ನೆಲೆಸಿದ್ದಾರೆ.


ಜನ್ಮದಾತರ ಜಾತಕ

ಶ್ರೀಮಾನ್ ಉದ್ವಾಚಾರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿಯವರು ನಮ್ಮ ಚೀಫ್ ಬೌಸ್ಸ್ ಸ್ವಾಮೀಜಿಯ ಪೂಜ್ಯ ಮಾತಾಪಿತೃಗಳು. ಮಠದ ಉದ್ಧಾರಕ್ಕಾಗಿ ಕೈಲಾದಷ್ಟು ಹೆಚ್ಚಿನ ಸೇವೆ ಸಲ್ಲಿಸಬೇಕೆಂಬ ಸೇವಾಕಾಂಕ್ಷಿಗಳು. ಇದರ ಭಾಗವಾಗಿ ದೇವರಿಗೆ ಸೇರಿದ ಬೆಳ್ಳಿ ತಟ್ಟೆ, ಉದ್ಧರಣೆ, ದೀಪ ಮುಂತಾದ ಬೆಳ್ಳಿ ಪದಾರ್ಥಗಳನ್ನು ಸಾಗಿಸಿ ಮೈಸೂರಿನ ಚಾಮರಾಜಪುರಂನಲ್ಲಿರುವ 'ಅಗಸ್ತ್ಯಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ'ಯಲ್ಲಿ ಅಡವಿಟ್ಟು ಪುಣ್ಯ ಕಟ್ಟಿಕೊಂಡಿದ್ದಾರೆ. ಹೀಗೆ ಅಡಮಾನದಿಂದ ಅವರು ಪಡೆದುಕೊಂಡಿರುವ ಒಟ್ಟು ಮೊತ್ತ ಸುಮಾರು ಒಂದು ಲಕ್ಷ ರೂ.ಗಳು!



ಮೈಸೂರಿನ ನಗರಾಭಿವೃದ್ಧಿ ಪ್ರಾಧಿಕಾರ 'ಸಂಸ್ಕೃತ ಪಾಠಶಾಲೆ'ಯು ನಿರ್ಮಾಣಕ್ಕಾಗಿ ವಿಶಾಲವಾದ ನಿವೇಶನವೊಂದನ್ನು ವ್ಯಾಸರಾಜ ಮಠಕ್ಕೆ ನೀಡಿತ್ತು. ಅದೂ ನಿಗದಿಯಾಗಿದ್ದ ಅಂದಿನ ದರದಲ್ಲಿ ಶೇ. 40 % ರಷ್ಟು ರಿಯಾಯಿತಿಯನ್ನು ನೀಡಿತ್ತು. ಈಗ ಮಠಕ್ಕೆ ಹೊಂದಿಕೊಂಡಂತಿದ್ದ ವಿಶಾಲ ನಿವೇಶನವನ್ನು 15 ಲಕ್ಷ ಹಣ ಪಡೆದು ಸೂರ್ಯನಾರಾಯಣ ಎಂಬುವವರಿಗೆ ಜಿಪಿಎ ಮಾಡಿಸಿಕೊಟ್ಟರು ಇದೇ ಮಹಾನುಭಾವ. ಜಿಪಿಎ ಮಾಡಿಸಿಕೊಂಡ ಸೂರ್ಯನಾರಾಯಣ ಆ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭಿಸಿದ್ದನ್ನು ಕಂಡು ಕೆರಳಿದ ಸ್ಥಳೀಯ ನಾಗರಿಕರು ಅದರ ವಿರುದ್ಧ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಕೋರ್ಟ್‌ನ ಮಧ್ಯೆ ಪ್ರವೇಶದಿಂದ ಸಧ್ಯಕ್ಕೆ ಆ ಸ್ವತ್ತು ಉಳಿದಂತಾಗಿದೆ.

ಇನ್ನು ಐದನೇ ಕರ್ಮಕಾಂಡ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ 'ವಿದ್ಯಾ ಪಯೋನಿಧಿ' ಕಲ್ಯಾಣ ಮಂಟಪಕ್ಕೆ ಸಂಬಂಧಿಸಿದ್ದು. ಈ ಕಲ್ಯಾಣ ಮಂಟಪದ ನವೀಕರಣದ ಹೆಸರಿನಲ್ಲಿ ಸೌಮ್ಯ ಮತ್ತು ಸಂಧ್ಯಾರಾಣಿ ಎಂಬ ಫೈನಾನ್ಸಿಯರ್‌ಗಳಿಂದ 25 ಲಕ್ಷ ರೂ.ಗಳನ್ನು ಸ್ವಾಮಿಯವರು ಪಡೆದುಕೊಂಡು ಅವರೊಂದಿಗೆ ಒಂದು ಕರಾರನ್ನು ಮಾಡಿಕೊಂಡಿದ್ದಾರೆ. ಆ ಕರಾರಿನ ಪ್ರಕಾರ ಕಲ್ಯಾಣ ಮಂಟಪದ ಬಾಡಿಗೆಯಿಂದ ಬರುವ ವರಮಾನದಲ್ಲಿ ಶೇ. 50 ಭಾಗವನ್ನು ಫೈನಾನ್ಸಿಯರ್‌ಗಳಿಗೆ ನೀಡಬೇಕಾಗುತ್ತದೆ. ಹೀಗೆ ಮಠದ



Date 12/12/2008
PAY Sri Sri Vidhya manodamthirthara Sri vysaraja Mutta, C Sosale) ... या धारक को OR BEARER
रुपये RUPEES Twenty five only lakhs only ... ₹Rs. 25,00,000/-
इण्डियन ओवरसीज़ बैंक
Indian Overseas Bank
KUVEMPU NAGAR BRANCH(1888)
170, Aniketana Road, Mysore - 570 023.
2006/MSP/CA 24 IOBA0001888
KVP
For. AISHWARYA DEVELOPERS
Partners.
⑈817148⑈ 570020009⑆

ಡೀಲ್‌ನಲ್ಲಿ ಪಡೆದ 25ಲಕ್ಷದ ಚೆಕ್

ಆಸ್ತಿಯನ್ನು ಪರಭಾರೆ ಮಾಡಿ ಪಡೆದುಕೊಂಡ 25 ಲಕ್ಷ ರೂ.ಗಳ ಚೆಕ್ ನಂ. 817148 ನ್ನು ಮಠದ ಅಕೌಂಟ್‌ಗೆ ಹಾಕದೆ ಶ್ರೀಯುತರು ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಕೆ.ಆರ್. ಮೊಹಲ್ಲಾ ಶಾಖೆಯಲ್ಲಿರುವ ತಮ್ಮ ಪರ್ಸನಲ್ ಅಕೌಂಟ್‌ಗೆ ಹಾಕಿಕೊಂಡು ತಮಗೆ ಮನಬಂದಂತೆ ದುರುಪಯೋಗ ಪಡಿಸಿಕೊಂಡಿದ್ದಾರೆ.

ಈ ಎಲ್ಲಾ ವ್ಯವಹಾರಗಳಲ್ಲೂ ಸ್ವಾಮಿಗಳ ಪಿತಾಶ್ರೀ ಉದ್ವಾಚಾರ್‌ರವರು ಪ್ರತ್ಯಕ್ಷ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ. ಹೇಗಿದೆ ನೋಡಿ ತಂದೆ ಮಕ್ಕಳ ಅನುಬಂಧ!?

ಇವರ ಧರ್ಮೋದ್ಧಾರ ಕಾರ್ಯಗಳು ಇಲ್ಲಿಗೆ ಮುಗಿಯುವುದಿಲ್ಲ. ಮಧುರೈನಲ್ಲಿರುವ ಮಠದ ಶಾಖೆಗೆ ಸುಮಾರು 90 ಸಾವಿರ ಚದರ ಅಡಿಗಳಷ್ಟು ಜಾಗದ ಒಡೆತನವಿದೆ. ಆ ಜಾಗದಲ್ಲಿ ಸುಮಾರು 50-60 ವರ್ಷಗಳಿಂದಲೂ ನೂರಾರು ಬಡಕುಟುಂಬಗಳು ವಾಸಿಸುತ್ತಿದ್ದಾರೆ. ಈ ಹಿಂದೆ ಇದ್ದ ಸ್ವಾಮಿಗಳು ಸ್ಥಳೀಯ ಬಡವರು ಮನೆ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟಿದ್ದರು. ಆದರೆ ಈಗಿನ ಗಂಟುಗಳ್ಳ ಸ್ವಾಮಿಯ ಕಣ್ಣು ಆ ಬಡವರ ಜಾಗದ ಮೇಲೂ ಬಿತ್ತು. ಆ ಬಡಬಗ್ಗರಿಂದಲೂ ಹಣ ಲಪಟಾಯಿಸಲು ಮನೋಹರ ಸ್ವಾಮಿ ಹೀನ ತಂತ್ರವೊಂದನ್ನು ಹೂಡಿದ. ಕೆ. ರಾಮಲಿಂಗಂ ಮತ್ತು ಪಿ. ಪಾಂಡೆ ಎಂಬ ರಿಯಲ್ ಎಸ್ಟೇಟ್ ಡೀಲರ್‌ಗಳೊಂದಿಗೆ ಒಪ್ಪಂದವೊಂದನ್ನು ಮಾಡಿಕೊಂಡ. ಆ ಪ್ರಕಾರ ಒಟ್ಟು 79,000 ಚದರ ಅಡಿಗಳ ಜಾಗಕ್ಕೆ ಅಡಿಗೆ 100 ರೂ.ಗಳಂತೆ ಒಟ್ಟು 79 ಲಕ್ಷ ರೂ.ಗಳನ್ನು ಆ ಡೀಲರ್‌ಗಳು ಸ್ವಾಮೀಜಿಗಳ ಪಾದಕ್ಕೆ ಒಪ್ಪಿಸಬೇಕು. ಆ ಜಮೀನನ್ನು ಮಾರಲು ಅನುಕೂಲವಾಗುವಂತೆ ಆ ಡೀಲರ್‌ಗಳ ಹೆಸರಿಗೆ ಸ್ವಾಮಿಯವರು ಜನರಲ್ ಪವರ್ ಆಫ್ ಅಟಾರ್ನಿ ರಿಜಿಸ್ಟರ್ ಮಾಡಿಸಿಕೊಟ್ಟರು. ಹೀಗೆ ಸುಮಾರು 14 ಜನರಿಗೆ ಮಠದಿಂದ ದಾನ ನೀಡುತ್ತಿರುವುದಾಗಿ ದಾನಪತ್ರಗಳು ರಿಜಿಸ್ಟರ್ ಆದವು. ಈ ವಿದ್ಯಮಾನದಿಂದ ಎಚ್ಚೆತ್ತ ಭಕ್ತಾದಿಗಳು ಮತ್ತು ಮಠದ ಹಿತೈಷಿಗಳು ಕೋರ್ಟ್‌ನಲ್ಲಿ ದಾವೆ ಹೂಡಿದರು. ಅಲ್ಲಿಯೂ ಕೋರ್ಟು ತಡೆಯಾಜ್ಞೆ ನೀಡಿದ್ದರಿಂದ ಈ ಹಗರಣಕ್ಕೆ ತಾತ್ಕಾಲಿಕ ತಡೆ ಬಿದ್ದಂತಾಗಿದೆ.

ಆಂಧ್ರದ ಮದನಪಲ್ಲಿಯ ಕಂದಕೂರು ಬಳಿ ಮಠಕ್ಕೆ ಒಂದೇ ಕಡೆ 727 ಎಕರೆ ಕೃಷಿ ಜಮೀನಿದೆ. ಆ ಜಮೀನು ಯಾವುದೋ ರಾಜರು ಮಠಕ್ಕೆ ದಾನವಾಗಿ ಕೊಟ್ಟಿದ್ದು. ಈಗ ಆ ಜಮೀನಿನಲ್ಲಿ ನೂರಾರು ಸಣ್ಣ ರೈತರು ಉಳುಮೆ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಹೀಗಿರುವೇ ಮಠದ ಒಡೆತನದಲ್ಲಿರುವ ಜಮೀನನ್ನು ನಗದನ್ನಾಗಿ ಪರಿವರ್ತಿಸಿ ಲಪಟಾಯಿಸುವುದು ಪೀಠಾಧಿಪತಿಗಳ ಎಣಿಕೆ. ಆಚಾರ-ವಿಚಾರಗಳನ್ನೆಲ್ಲಾ ಬದಿಗೊತ್ತಿ ದುಷ್ಟ ವ್ಯವಹಾರಕ್ಕೆ ಇಳಿದುಬಿಟ್ಟರು. ಪಪ್ಪುರಾಜ ರೆಡ್ಡಿ ಎಂಬ ವ್ಯಕ್ತಿಯನ್ನು ಹಿಡಿದು ಆತನಿಂದ ಅದೆಷ್ಟು ಗಂಟು ಪಡೆದರೋ ಗೊತ್ತಿಲ್ಲ, ಅವರ ಹೆಸರಿಗೆ 727 ಎಕರೆ ಪೈಕಿ 560 ಎಕರೆ ಭೂಮಿಯನ್ನು ಜಿಪಿಎ (30.7.10) ಮಾಡಿ ಕೊಟ್ಟರು. ಆದರೆ ಈ ಒಳವ್ಯವಹಾರದಲ್ಲಿ ಏನು ಎಡವಟ್ಟಾಯಿತೋ ಏನೋ ಎರಡು ತಿಂಗಳು ತುಂಬುವ ಮೊದಲೇ ಅಂದರೆ ತಾ. 27.9.10 ರಂದು ಆ ಜಿಪಿಎಯನ್ನು ರದ್ದು ಪಡಿಸಿಬಿಟ್ಟರು.

ಅಷ್ಟಕ್ಕೇ ಮುಗಿಯಿತು ಎಂದುಕೊಳ್ಳಬೇಡಿ. ಯುವ ಸ್ವಾಮಿಯು ಅಷ್ಟೇ ಚುರುಕಾಗಿ ಕೆಲಸ ಮಾಡಿ ಮುಂದಿನ ಎರಡೇ ವಾರದಲ್ಲಿ ಅಂದರೆ 14.10.2010 ರಂದು ಬೆಂಗಳೂರಿನ ಆರ್. ಬಾಲಾಜಿ ಎಂಬುವವರಿಗೆ ಜಿಪಿಎ ಕೊಟ್ಟುಬಿಟ್ಟರು. ಲಾಗಾಯ್ತಿನಿಂದ ತಾವು ನಂಬಿಕೊಂಡಿರುವ ಮಠದ ಭೂಮಿ ಹೀಗೆ ಪರಭಾರೆಯಾಗುತ್ತಿರುವುದನ್ನು ತಿಳಿದ ರೈತರು ಬೀದಿಗಿಳಿದು ಪ್ರತಿಭಟಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಜಿಲ್ಲಾಧಿಕಾರಿಯವರು ಸಂಬಂಧಪಟ್ಟ ಸಬ್ ರಿಜಿಸ್ಟರ್ ಆಫೀಸಿಗೆ ಆದೇಶವೊಂದನ್ನು ಕಳಿಸಿ ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಕ್ರಯಪತ್ರ ಅಥವಾ ಇತರೆ ಪರಭಾರೆ ಪತ್ರಗಳನ್ನು ನೋಂದಣಿ ಮಾಡದಂತೆ ಸೂಚಿಸಿದ್ದಾರೆ.

ಇಲ್ಲೂ ಮುಖಭಂಗ ಅನುಭವಿಸಿದ ಪೀಠಿಗಳು ಸುಮ್ಮನೆ ಕೂತಿಲ್ಲ. ಆಡಳಿತಾರೂಢ ಬಿಜೆಪಿ ಪಕ್ಷದ ಪ್ರಭಾವಿ ರಾಜಕಾರಣಿಯೊಬ್ಬರೊಂದಿಗೆ ಡೀಲ್ ಕುದುರಿಸಲು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆಂದು ಸುದ್ದಿ. ಈ ಹಿಂದೆ ಸ್ವಾಮಿಯನ್ನು ನಂಬಿ ಹಣ ಕೊಟ್ಟು ಕೈ ಸುಟ್ಟುಕೊಂಡಿರುವ ರಾಜರೆಡ್ಡಿ ಹಣ ವಸೂಲಿಗಾಗಿ ಈಗ ಸ್ವಾಮೀಜಿ ಹಿಂದೆ ಬಿದ್ದಿದ್ದಾರೆ ಎಂಬುದು ಲೇಟೆಸ್ಟ್ ಸುದ್ದಿ.


ಈ ಸ್ವಾಮಿಗೆ ಬಲಗೈ ಭಂಟನಂತಿರುವವರು ನಟರಾಜ್ ಜೋಯಿಸ್‌ನೆಂಬ ಸ್ಮಾರ್ತ ಬ್ರಾಹ್ಮಣ ವ್ಯಕ್ತಿ. ಈಗ ಹಾಲಿ ಮಠದ ಆಡಳಿತಾಧಿಕಾರಿ. ಹಾಗೆ ನೋಡಿದರೆ ಈ ಮನುಷ್ಯನಿಗೂ ಮಠಕ್ಕೂ ಯಾವ ರೀತಿಯ ಸಂಬಂಧವೂ ಇರಲಿಲ್ಲ. ಅದು ಯಾವ ಕೆಟ್ಟಗಳಿಗೆಯಲ್ಲಿ ಮಠಕ್ಕೆ ವಕ್ಕರಿಸಿಕೊಂಡನೋ ಗೊತ್ತಿಲ್ಲ, ಅಂದಿನಿಂದ ಮಠದ ದುರಾಡಳಿತ ಮೇರೆಮೀರಿ ಹೋಗಿದೆ. ಈತನ ಜೊತೆಗೆ ಸ್ವಾಮಿಯ ಆಪ್ತ ವಲಯದಲ್ಲಿರುವ ಮತ್ತೊಬ್ಬ ವ್ಯಕ್ತಿ ಎಂದರೆ ಸುದರ್ಶನ ಅಲಿಯಾಸ್ ಸೌದೆ ಸುದರ್ಶನ್. ಈ ಹಿಂದೆ ಮಠಕ್ಕೆ ಸೌದೆ ಸಪ್ಲೈ ಮಾಡುತ್ತಿದ್ದರಿಂದ ಆತನಿಗೆ ಆ ಅನ್ವರ್ಥ ನಾಮ ಬಂದುಬಿಟ್ಟಿದೆ. ಈತ ಸ್ವಾಮಿಯವರ ಕೃಪಾಕಟಾಕ್ಷದಿಂದ ವಿ.ವಿ.ಪುರಂನಲ್ಲಿರುವ ಮಠದ ಮ್ಯಾನೇಜರ್ ಆಗಿ ನೇಮಕವಾಗಿದ್ದರು. ಸ್ವಾಮಿಗಳ ಮನದ ಇಂಗಿತವನ್ನು ಸರಿಯಾಗಿ ಅರಿತು ಸ್ವಾಮಿಗಳ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ನೆರವೇರಿಸುತ್ತಿರುವುದರ ಫಲವಾಗಿ ಆತನನ್ನು ಸದ್ಯ ಇನ್ನೂ ಹೆಚ್ಚಿನ ವರಮಾನವಿರುವ ಗಾಂಧಿ ಬಜಾರ್ ಶಾಖೆಯ ಮ್ಯಾನೇಜರ್ ಆಗಿ ಪ್ರಮೋಷನ್ ನೀಡಿದ್ದಾರೆ.

ಇಷ್ಟಕ್ಕೂ ಏನೆಲ್ಲಾ ಅವ್ಯವಹಾರಗಳನ್ನು ಮಾಡಿ ಹಣ ಲಪಟಾಯಿಸಿ ಸ್ವಾಮಿಗಳು ಅದನ್ನು ವ್ಯಯಿಸುತ್ತಿರುವ ರೀತಿಯನ್ನು ನೋಡಿ ಭಕ್ತಾದಿಗಳಲ್ಲಿ ಹೇಸಿಗೆ ಹುಟ್ಟಿದೆ. ಹೇಳಿಕೇಳಿ 27 ವರ್ಷದ ಬಿಸಿರಕ್ತದ ವಯಸ್ಸು. ಸ್ವಾಮಿಯಾಗಿ ಸರ್ವಸಂಗ ಪರಿತ್ಯಾಗಿಯಾಗಿ ಪರಲೋಕದ ಬಗ್ಗೆ ಆಸಕ್ತಿ ತೋರಬೇಕಾಗಿದ್ದ ಇವರಿಗೆ ಅಂಥ ಯಾವ ಆಸಕ್ತಿಯೂ ಇದ್ದಂತಿಲ್ಲ. "ಇಲ್ಲೇ ಸ್ವರ್ಗ, ಇಲ್ಲೇ ನರಕ ಮೇಲೇನಿಲ್ಲಾ ಸುಳ್ಳು" ಎಂಬ ತತ್ವವನ್ನು ಆಚರಿಸುತ್ತಾ ಇಹಲೋಕವನ್ನು ತಮ್ಮ ಪಾಲಿನ ಸ್ವರ್ಗವನ್ನಾಗಿ ಮಾಡಿಕೊಂಡಿದ್ದಾರೆ.

ಇಂಥ ಅವಾಂತರಿ ಸ್ವಾಮಿಯನ್ನು ಸಹಿಸಿಕೊಂಡು ಭಕ್ತರೇನೂ ಸುಮ್ಮನೆ ಕುಳಿತಿಲ್ಲ. ಸಾವಿರಾರು ಭಕ್ತಾದಿಗಳು ಸೇರಿ ವ್ಯಾಸರಾಜ ಸೇವಾ ಸಮಿತಿ ಎಂಬ ರಿಜಿಸ್ಟರ್ಡ್ ಸಂಸ್ಥೆಯನ್ನು ಮಾಡಿಕೊಂಡಿದ್ದಾರೆ. ಆ ಸಂಸ್ಥೆಯವರು ಮಠದ ಹಗರಣಗಳನ್ನು ತಡೆದು ಭಕ್ತರಿಗಾಗಿ ಮಠವನ್ನು ಉಳಿಸಬೇಕೆಂದು ವಿವಿಧ ಕೋರ್ಟ್, ಕಚೇರಿಗಳಿಗೆ ಸುತ್ತುತ್ತಿದ್ದಾರೆ.

ಆ ಎಲ್ಲಾ ಪ್ರಯತ್ನದ ಫಲವಾಗಿ ಮುಜರಾಯಿ ಇಲಾಖೆಯ ಎಂಡೋಮೆಂಟ್ ಕಮಿಷನರ್‌ರಿಂದ ತನಿಖೆ ನಡೆಸಬೇಕೆಂದು ಕೋರ್ಟು ಆದೇಶಿಸಿತ್ತು. ಅದರಂತೆ ತನಿಖೆ ಕೈಗೊಂಡ ಕಮಿಷನರ್ ವ್ಯಾಪಕ ಅವ್ಯವಹಾರ ನಡೆದಿದೆಯೆಂದೂ, ಸರ್ಕಾರದಿಂದ ಕೂಡಲೇ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆಂದೂ ಶಿಫಾರಸ್ಸು ಮಾಡಿದ್ದಾರೆ. ಈ ಸೇವಾ ಸಮಿತಿಯ ಪ್ರಯತ್ನದ ಫಲವಾಗಿ ರಾಜ್ಯಪಾಲರ ಕಚೇರಿಯಿಂದ ಪೊಲೀಸ್ ಮಹಾ ನಿರ್ದೇಶಕರಿಗೆ ಒಂದು ಪತ್ರ ರವಾನೆಯಾಗಿ ಮಠದ ಅವ್ಯವಹಾರಗಳಿಗೆ ಸಂಬಂಧಪಟ್ಟು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಅದರಂತೆ ಪೊಲೀಸ್ ಮಹಾ ನಿರ್ದೇಶಕರು ಸಿಓಡಿಗೆ ಈ ಬಗ್ಗೆ ಮರು ತನಿಖೆ ನಡೆಸುವಂತೆ ಆದೇಶ ಹೊರಡಿಸಿದ್ದಾರೆ.

ದೈವೇಚ್ಛೆಯಿಂದ ಎಲ್ಲವೂ ಸರಿಯಾದ ದಿಕ್ಕಿನಲ್ಲಿ ನಡೆದರೆ ವ್ಯಾಸರಾಜ ಮಠಕ್ಕೆ ಉಳಿಗಾಲ. ಅದನ್ನ ಪವಿತ್ರ ಕ್ಷೇತ್ರವೆಂದು ನಂಬಿರುವ ಭಕ್ತಾದಿಗಳಿಗೂ ನೆಮ್ಮದಿ. ಇಲ್ಲವಾದರೆ ಈ ದುಷ್ಟಪಟಾಲಂ ಮಠವನ್ನು ಅದರ ಮಾನಮರ್ಯಾದೆಯನ್ನು ಹರಾಜಾಕುವುದು ಶತಸ್ಸಿದ್ಧ.



ಕರ್ನಾಟಕ ಸರ್ಕಾರ

ಸಂಖ್ಯೆ:ಎಡಿ.ಎಂ 7/ಡಬ್ಲ್ಯೂಪಿ 37/01-02

ಆಯುಕ್ತರ ಕಾರ್ಯಾಲಯ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ
ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು.
ದಿನಾಂಕ:24-01-2007.

ಗೆ,
ಪೀಠಾಧಿಪತಿಗಳು,
ಶ್ರೀ ಸೋಸಲೆ ವ್ಯಾಸರಾಜ ಮಠ,

ವಿಷಯ: ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಸೋಸಲೆ ಗ್ರಾಮದ ಶ್ರೀ ಸೋಸಲೆ ವ್ಯಾಸರಾಜ ಮಠಕ್ಕೆ ಸೇರಿದ ಸ್ಥಿರಾಸ್ತಿಗಳ ಪರಭಾರೆ ಬಗ್ಗೆ ವಿಚಾರಣೆ ನಡೆಸುವ ಕುರಿತು.

^^^^^

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಸೋಸಲೆ ಗ್ರಾಮದ ಶ್ರೀ ಸೋಸಲೆ ವ್ಯಾಸರಾಜ ಮಠಕ್ಕೆ ಸೇರಿದ ಸ್ಥಿರಾಸ್ತಿಗಳ ಪರಭಾರೆ ಬಗ್ಗೆ ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಚಾರಣೆ ನಡೆಸುತ್ತಿದ್ದು, ಈ ಬಗ್ಗೆ ಉಭಯ ಪಕ್ಷಕಾರರಿಗೆ ಹಾಗೂ ವಿಚಾರಣಾ ಸಮಿತಿಯ ಸದಸ್ಯರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ ವ್ಯಾಸರಾಜ ಮಠಕ್ಕೆ ಸೇರಿದ ಸ್ಥಿರಾಸ್ತಿಗಳನ್ನು ತಾವು ಪರಭಾರೆ ಮಾಡುತ್ತಿದ್ದು, ಸದರಿ ಪರಭಾರೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಶ್ರೀ ವ್ಯಾಸರಾಜ ಸೇವಾ ಸಮಿತಿ (ರಿ), ಬೆಂಗಳೂರು ಇದರ ಅಧ್ಯಕ್ಷರು ಉಲ್ಲೇಖ (2)ರ ಮನವಿಯಲ್ಲಿ ಕೋರಿರುತ್ತಾರೆ.

ಶ್ರೀ ಸೋಸಲೆ ವ್ಯಾಸರಾಜ ಮಠಕ್ಕೆ ಸೇರಿದ ಸ್ಥಿರಾಸ್ತಿಗಳ ಪರಭಾರೆ ವಿಚಾರದ ಬಗ್ಗೆ ಈ ಪ್ರಾಧಿಕಾರವು ವಿಚಾರಣೆ ನಡೆಸುತ್ತಿದ್ದು, ವಿಚಾರಣೆಯು ನಡೆಯುತ್ತಿರುವುದರಿಂದ ತಾವು ಶ್ರೀ ಸೋಸಲೆ ವ್ಯಾಸರಾಜ ಮಠಕ್ಕೆ ಸೇರಿದ ಯಾವುದೇ ಸ್ಥಿರಾಸ್ತಿಯನ್ನು ಸರ್ಕಾರದ ಅನುಮತಿ ಇಲ್ಲದೆ ಪರಭಾರೆ/ಮಾರಾಟ ಮಾಡದಾರದೆಂದು ಈ ಮೂಲಕ ತಮಗೆ ತಿಳಿಸಲಾಗಿದೆ.

ತಮ್ಮ ನಂಬುಗೆಯ
(ಎಸ್.ಟಿ. ಸುಧಾ)
ಕೇಂದ್ರ ಸ್ಥಾನಿಕ ಸಹಾಯಕರು,

(ಕರಡು ಪ್ರತಿ ಆಯುಕ್ತರಿಂದ ಅನುಮೋದಿಸಿ)

ಅವ್ಯವಹಾರಗಳನ್ನು ತಡೆಗಟ್ಟಲು ಆಡಳಿತಾಧಿಕಾರಿಯನ್ನು ನೇಮಿಸಬೇಕೆಂದು ಸರ್ಕಾರಿ ಆದೇಶ...

ತಟ್ಟೆಕಾಸು ತಿಂಗಳಿಗೆ ಒಂದೂವರೆ ಲಕ್ಷ!

ಆಶ್ಚರ್ಯಪಡಬೇಡಿ! ಇದು ಬೆಂಗಳೂರಿನ ಬಸವನಗುಡಿಯಲ್ಲಿರುವ ಮಠದ ಕಳೆದ ತಿಂಗಳ ತಟ್ಟೆಕಾಸು + ಹುಂಡಿಕಾಸಿನ ಲೆಕ್ಕಾಚಾರ. ಆಡಳಿತಾಧಿಕಾರಿ ನಟರಾಜ ಜೋಯಿಸ್‌ರು 3.11.2011 ರಂದು ಲೆಕ್ಕ ಹಾಕಿ ತೆಗೆದುಕೊಂಡ ಮೊತ್ತ ಒಟ್ಟು 1,58,140 ರೂಪಾಯಿಗಳು! ಇಷ್ಟು ಮಾತ್ರವಲ್ಲದೆ ಇನ್ನಿತರ ಮಠಗಳಿಂದ, ಮಠದ ಆಸ್ತಿಪಾಸ್ತಿಗಳ, ಕಲ್ಯಾಣ ಮಂಟಪ ಇತ್ಯಾದಿಗಳ ಬಾಡಿಗೆ ವಗೈರೆಗಳಿಂದ ಏನಿಲ್ಲವೆಂದರೂ ತಿಂಗಳಿಗೆ ಸುಮಾರು 15 ಲಕ್ಷ ರೂಪಾಯಿ ನಿವ್ವಳ ವರಮಾನವಿದೆ. ಶರತ್ ಎಂಬ ಯುವಕ ವಿದ್ಯಾಮನೋಹರ ತೀರ್ಥರನ್ನಾಗಿಸಿದ್ದು ಇದೇ ಆಕರ್ಷಣೆಯಿಂದ ಎಂದು ಭಕ್ತರು ಶ್ರೀಮಠದ ಪಟ್ಟದ ದೇವರಾದ ಗೋಪಾಲಕೃಷ್ಣ ಸ್ವಾಮಿಯ ಮೇಲೆ ಆಣೆ ಮಾಡಲು ಸಿದ್ಧರಿದ್ದಾರೆ!

....3

ಶುದ್ಧ ಆರ್ಯನ್ನರ ಕತೆ ಮತ್ತು ಅರುಂಧತಿಯ ಮಾತುಗಳು

ಒಳ್ಳೆಯ ಸುದ್ದಿ ಏನೆಂದರೆ ಈಗ ಜನರಿಗೆ ಇದೆಲ್ಲಾ ಸಾಕಾಗಿದೆ, ಇದನ್ನು ಸಹಿಸಲು ಅವರು ನಿರಾಕರಿಸುತ್ತಿದ್ದಾರೆ. ಜಗತ್ತಿನಾದ್ಯಂತ ಕಡುಬಡವರು ಎದ್ದು ನಿಂತು ಬಲಿಷ್ಠ ಕಾರ್ಪೊರೇಟ್ ಕಂಪನಿಗಳಿಗೆ ತೊಡರು ಗಾಲಾಗುತ್ತಿರುವಾಗಲೇ ನೀವು 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ' ಆಂದೋಲನದ ಮೂಲಕ ಅಂತಹ ಸಾವಿರಾರು ಹೋರಾಟಗಳೊಂದಿಗೆ ಕೈಜೋಡಿಸಿದ್ದೀರಿ. ನಮ್ಮಲ್ಲಿ ಕೆಲವರು ನೀವು ಕೂಡ ಈ ಆಂದೋಲನದ ಭಾಗವಾಗುವ ಮೂಲಕ ನಮ್ಮ ಪರ ನಿಲ್ಲುತ್ತೀರಿ, ಸಾಮ್ರಾಜ್ಯದ ಹೃದಯದಲ್ಲೇ ಬಂಡೇಳುತ್ತೀರಿ ಎಂದು ಆಶಿಸಿದ್ದೆವು. ನೀವು ನಮ್ಮ ಹೋರಾಟದ ಭಾಗವಾಗಿರುವುದರ ಅಗಾಧತೆಯನ್ನು ಬಣ್ಣಿಸಲು ನನಗೆ ಸಾಧ್ಯವಾಗುತ್ತಿಲ್ಲ.

ನಮ್ಮೆಲ್ಲರ ವಿರುದ್ಧ ನಿಂತಿರುವ ಬಂಡವಾಳಶಾಹಿ ಶೇಕಡ ಒಂದರಷ್ಟು ಜನರು ನಮ್ಮಲ್ಲಿ ಹಕ್ಕೊತ್ತಾಯಗಳು ಇಲ್ಲ ಎನ್ನುತ್ತಿದ್ದಾರೆ. ಆದರೆ ಅವರಿಗೆ ಗೊತ್ತಿಲ್ಲ, ನಮ್ಮೆಲ್ಲರ ಕೋಪ ಅವರನ್ನು ನಾಶ ಮಾಡಬಲ್ಲದೆಂದು. ಆದರೆ ಅಂತಹ ಕ್ರಾಂತಿಯ ಮುನ್ನ ನಿಮ್ಮೊಂದಿಗೆ ನನ್ನ ಹಲವು ಯೋಚನೆಗಳನ್ನು ಹಂಚಿಕೊಳ್ಳಬೇಕೆನಿಸುತ್ತಿದೆ.

ಇಂತಹ ಅಸಮಾನತೆಯನ್ನು ಸೃಷ್ಟಿಸುವ ವ್ಯವಸ್ಥೆಯ ಮೇಲೆ ನಾವು ಒಂದು ಮುಚ್ಚಳವನ್ನು ಹಾಕಬಯಸುತ್ತಿದ್ದೇವೆ. ಕೆಲವು ವ್ಯಕ್ತಿಗಳು ಮತ್ತು ಕಾರ್ಪೊರೇಟ್ ಕಂಪನಿಗಳು ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡುವುದನ್ನು ನಾವು ತಡೆಯಬೇಕೆಂದು ಬಯಸುತ್ತಿದ್ದೇವೆ.

ಈ 'ಮುಚ್ಚು' ಮತ್ತು 'ತಡೆ'ಯ ನಿಟ್ಟಿನಲ್ಲಿ ನಮ್ಮ



ಆಗ್ರಹಗಳು ಹೀಗಿವೆ:

- ವಿವಿಧ ಉದ್ಯಮಗಳ ಮೇಲಿನ ಹಲವರ ಸ್ವಾಮ್ಯವನ್ನು ತಡೆಯುವುದು. ಉದಾಹರಣೆಗೆ ಶಸ್ತ್ರಾಸ್ತ್ರ ತಯಾರಕರು ಟಿವಿ ಚಾನೆಲ್‌ಗಳನ್ನು ಹೊಂದುವಂತಿಲ್ಲ; ಗಣಿಗಾರಿಕೆಯಲ್ಲಿ ತೊಡಗಿರುವವರು ಪತ್ರಿಕೆಗಳ ಮಾಲೀಕರಾಗುವಂತಿಲ್ಲ; ಉದ್ಯಮಿಗಳು ವಿಶ್ವವಿದ್ಯಾಲಯಗಳಿಗೆ ದೇಣಿಗೆ ನೀಡುವಂತಿಲ್ಲ; ಔಷಧಿಗಳನ್ನು ತಯಾರಿಸುವ ಕಂಪನಿಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಹಿಡಿತ ಹೊಂದುವಂತಿಲ್ಲ.
- ನೈಸರ್ಗಿಕ ಸಂಪತ್ತು ಮತ್ತು ಸಾರ್ವಜನಿಕ ಮೂಲಭೂತ ಸೌಲಭ್ಯಗಳಾದಂತಹ ಕುಡಿಯುವ ನೀರು, ವಿದ್ಯುತ್, ಆರೋಗ್ಯ ಮತ್ತು ಶಿಕ್ಷಣ ವ್ಯವಸ್ಥೆಗಳನ್ನು ಖಾಸಗೀಕರಣಗೊಳಿಸುವಂತಿಲ್ಲ.
- ಪ್ರತಿಯೊಬ್ಬರಿಗೂ ವಸತಿ, ವಿದ್ಯೆ ಮತ್ತು ಆರೋಗ್ಯ ವ್ಯವಸ್ಥೆ ಮೂಲಭೂತ ಹಕ್ಕಾಗಿರಬೇಕು.
- ಸಾಹುಕಾರರ ಮಕ್ಕಳು ತಮ್ಮ ತಂದೆ ತಾಯಂದಿರ ಆಸ್ತಿಪಾಸ್ತಿಗೆ ಹಕ್ಕುದಾರರಾಗಕೂಡದು.


ಈ ಹೋರಾಟವು ನಮ್ಮ ಕಲ್ಪನಾಶಕ್ತಿಯನ್ನು ಎಚ್ಚರಿಸಿದೆ. ಬಂಡವಾಳಶಾಹಿ ವ್ಯವಸ್ಥೆಯು ನ್ಯಾಯವೆಂದರೆ ಕೇವಲ 'ಮಾನವ ಹಕ್ಕುಗಳು' ಎಂಬ ಸಂಕುಚಿತ ಧೋರಣೆಯನ್ನು ಬೆಳೆಸಿತ್ತಲ್ಲದೆ, ಸಮಾನತೆಗಾಗಿ ಆಶಿಸುವುದನ್ನೇ ವ್ಯವಸ್ಥೆಯ ನಿಂದನೆ ಎಂಬ ಮನೋಭಾವವನ್ನು ಹೆಚ್ಚಿಸಿತ್ತು. ಆದರೆ ನಾವೀಗ ಈ ವ್ಯವಸ್ಥೆಯಲ್ಲಿನ ದೋಷಗಳನ್ನು ರಿಪೇರಿ ಮಾಡಬೇಕೆಂದು ಆಶಿಸುತ್ತಿಲ್ಲ, ಬದಲಾಗಿ ಈ ವ್ಯವಸ್ಥೆಯನ್ನೇ ಬದಲಾಯಿಸಬೇಕೆಂದು ಹೋರಾಡುತ್ತಿದ್ದೇವೆ.

ನಿಮ್ಮೊಂದಿಗೆ ಈ 'ಮುಚ್ಚು' ಮತ್ತು 'ತಡೆ'ಯ ಹೋರಾಟಗಾರ್ತಿಯಾದ ನಾನು ನಿಮ್ಮ ಈ ಆಂದೋಲನಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಲಾಮ್ ಮತ್ತು ಜಿಂದಾಬಾದ್."


• ಗೌರಿ ಲಂಕೇಶ್

ಮಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಮಚ್ಚು ಮಸೆಯುವ ಸದ್ದು!



ಕ್ಯಾಂಡಲ್ ಸಂತು

• ನಹುಶ

ಕರಾವಳಿಯ ಹೈಟೆಕ್ ಪಾತಕ ಪ್ರಪಂಚದಲ್ಲಿ ಕೋಮು ಕ್ರೌರ್ಯದ ಸೂತ್ರ-ಸಮೀಕರಣದ ಆಧಾರದಲ್ಲೇ ದೋಸ್ತಿ-ದುಷ್ಮನಿ ನಿರ್ಧರಿತವಾಗುತ್ತಿದೆ! ಸರಿ ಸುಮಾರು ಒಂದು ದಶಕದ ಹಿಂದೆಯೇ ಕರಾವಳಿಯ ಭೂಗತ ಲೋಕದಲ್ಲೂ ಮತಾಂಧತೆಯೇ ಮೂಲ ಮಂತ್ರವಾಗಿ ಹೋಗಿದೆ. ಕರ್ನಾಟಕ ಕರಾವಳಿಯನ್ನು ಹಿಂದೂತ್ವದ ಪ್ರಯೋಗ ಶಾಲೆ ಮಾಡಲು ಸಂಘಪರಿವಾರ ಶುರುಹಚ್ಚಿಕೊಂಡಿರುವ ರಕ್ತ ರಾಜಕಾರಣದ ಅನಾಹುತಕಾರಿ ಅಡ್ಡಪರಿಣಾಮವಿದು.


ವಾಮಂಜೂರು ರೋಹಿ

ಕಮ್ಯುನಲೀಕರಣಗೊಂಡಿರುವ ದಕ್ಷಿಣ ಕನ್ನಡದ ಅಂಡರ್‌ವರ್ಲ್ಡ್ ಈಗ ಮಗ್ಗಲು ಬದಲಿಸುತ್ತಿದೆ. ಶಾರ್ಪ್ ಶೂಟರ್ ಶಾಜಿ, ಬುಲೆಟ್ ಸುಧೀರ್, ಮುಲ್ಕಿ ರಫೀಕ್‌ನಂಥ ನಟೋರಿಯಸ್ ರೌಡಿಗಳು ಸಾಲುಸಾಲಾಗಿ ನಕಲಿ ಎನ್‌ಕೌಂಟರ್‌ಗೆ ಬಲಿಬಿದ್ದ ತರುವಾಯ ಕಂಗೆಟ್ಟು ಸುಮ್ಮನಾಗಿದ್ದ ಮಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಮಚ್ಚು ಮಸೆಯುವ ಆವಾಜ್ ಕೇಳಿಸುತ್ತಿದೆ. ಒಂದೆಡೆ ಗ್ಯಾಂಗ್ ವಾರ್‌ಗೆ ರಣರಂಗ ಅಣಿಯಾಗುತ್ತಿದೆ. ಮತ್ತೊಂದೆಡೆ ಆರೆಸ್ಸೆಸ್ ನಿರ್ದೇಶಿತ ಪೊಲೀಸರು ಬೇಟೆಗೆ ಹೊಂಚುಹಾಕಿ ಸಂಚು ಹೂಡುತ್ತಿದ್ದಾರೆ. ಪೊಲೀಸ್ ಪ್ರಪಂಚ, ರೌಡಿ ರಂಗ ಮತ್ತು ಚೆಡ್ಡಿ ಸಂಘದ ಹಿಕಮತ್ತು ಸೂಕ್ಷ್ಮವಾಗಿ ಗಮನಿಸಿದರೆ ಕಡಲ ತಡಿಯಲ್ಲಿ ರಕ್ತದೋಕುಳಿ ಆಗುವ ಆತಂಕ ಅನುಮಾನ ಮೂಡುತ್ತದೆ....


ಪೊಳಲಿ ಅನಂತು

ಈ ಬಾರಿ ಹೆಣ ಬೀಳೋದು ರೌಡಿಗಳ ಮಚ್ಚಿನೇಟಿಗೋ? ಮುಸ್ಲಿಂ ರೌಡಿಗಳ ಕೊಲ್ಲಲ್ಲೆಂದೇ ನಕಲಿ ಎನ್‌ಕೌಂಟರ್ ಮಾಡುತ್ತಿರುವ ಪೊಲೀಸರ ಸ್ಕೆಚ್ಚಿಗೋ? ಶ್ರೀರಾಮಸೇನೆ ಕಂಡರಾಗದ ಆರೆಸ್ಸೆಸ್ 'ಡಾನ್'ನ ದಾಯಾದಿ ದ್ವೇಷಾಸೂಯೆಗೋ? ಇಂಥದೊಂದು ಭೀಷಣ ಚರ್ಚೆ ಕರಾವಳಿಯ ಉದ್ದಗಲಕ್ಕೆ ನಡೆದಿದೆ. ಒಟ್ಟಿನಲ್ಲಿ ಮಂಗಳೂರಿನ ಪೊಲೀಸ್-ಪಾತಕ ಮತ್ತು ಘಾತುಕ ಚೆಡ್ಡಿ ಗ್ಯಾಂಗ್ ಜೊತೆಜೊತೆಯಾಗೇ ತಲ್ಲಣಿಸುತ್ತಿವೆ. ದಿವಂಗತ ಹಿಂದೂ ರೌಡಿ ಪೊಳಲಿ ಆನಂತುನ ಸಹಚರರಾದ ಆಲ್ವಿನ್ ಪಿಂಟೋ ಯಾನೆ ಅನಿಲ್ ಬಂಗೇರಾ, ಬೆಂಡ್ ಸಂತುರ ರುಂಡ ಚೆಂಡಾಡಲು ಮುಸ್ಲಿಂ ಪಾತಕಿ ಬಿತ್ತಪಾದೆ ರೆಹಮತ್ ಪಡೆ ಹಗಲಿರುಳೂ ತಹತಹಿಸುತ್ತಿದೆ ಎಂಬ ಸುದ್ದಿಗಳೇ ಕರಾವಳಿಯನ್ನು ಕಂಗಾಲಾಗಿಸಿಬಿಟ್ಟಿದೆ!

ಭೂಗತಲೋಕದಲ್ಲಿ ಪಳಗಿದ ಬಿತ್ತಪಾದೆ ರೆಹಮತ್‌ಗೆ ಗುರು ಒಂದು ಕಾಲದಲ್ಲಿ ಮಂಗಳೂರನ್ನು ನಡುಗಿಸಿದ ಪಾತಕಿ ವಾಮಂಜೂರು ರೋಹಿ. ಈಗಾತನ 'ಆಟ' ಇಲ್ಲದಿದ್ದರೂ ಆತನ ಶಿಷ್ಯರ ಹಾವಳಿ ಇದೆ. ಮಂಗಳೂರಲ್ಲಿ ಗಲ್ಲಿಗೊಂದು-ಬೀದಿಗೊಂದು ರೌಡಿ ಪಡೆ ಹುಟ್ಟಿಕೊಳ್ಳುತ್ತಿದ್ದ ಕಾಲವದು. ಬರ್ಕೆ ಯದ್ದು ಯಾನೆ ಯತೀಶ್ ಶೆಟ್ಟಿ ಗ್ಯಾಂಗಿಗೆ ವಿರುದ್ಧವಾಗಿದ್ದ ಬಲ್ಲಾಳ್ ಬಾಗ್ ರಘು ಪಡೆಯಲ್ಲಿ ರೋಹಿದಾಸ್ ಶೆಟ್ಟಿ ಎಂಬ ಸಣ್ಣ ಸೈಜಿನ ರೌಡಿಯೊಬ್ಬನಿದ್ದ. ಆತ ಆ ನಂತರ ವಾಮಂಜೂರನ್ನು 'ಕರ್ಮಕ್ಷೇತ್ರ' ಮಾಡಿಕೊಂಡು ವಾಮಂಜೂರು ರೋಹಿ ಎಂತಲೇ ಕುಖ್ಯಾತನಾಗಿ ಹೋದ. ರಕ್ತಪಾತ-ಸುಲಿಗೆಯಿಂದ ಮಂಗಳೂರನ್ನು ಕಂಗೆಡಿಸಿಬಿಟ್ಟಿದ್ದ. ಈಗೀತನ ಬಲಗೈ ಬಂಟ ಬಿತ್ತಪಾದೆ ರೆಹಮತ್ ಭೂಗತ ಹಿಂದೂ ಪುಂಡರ ಬೆನ್ನಿಗೆ ಬಿದ್ದು ಕಾಡುತ್ತಿದ್ದಾನೆ.

ಅತ್ತ ಹಿಂದೂ ಅಂಡರ್ ವರ್ಲ್ಡ್‌ನಲ್ಲಿ ಮೊಟ್ಟಮೊದಲು ಜನ್ಮವೆತ್ತಿದ್ದೇ ಭಜರಂಗಿ ಪೊಳಲಿ ಅನಂತು. ಹಿಂದೂತ್ವದ ಅಮಲೇರಿಸಿಕೊಂಡು ಕೈಕಂಬ-ಗುರುಪುರ-ಬಂಟ್ವಾಳ- ಪೊಳಲಿ ಏರಿಯಾದಲ್ಲಿ ಸಾಬರ ಅಟ್ಟಾಡಿಸಿ ಸತಾಯಿಸುತ್ತಿದ್ದ ಪೊಳಲಿ ಅನಂತುಗೆ ಭಜರಂಗಿ ದೀಕ್ಷೆ ಕೊಟ್ಟಿದ್ದೇ ಆರೆಸ್ಸೆಸ್ ರಿಂಗ್ ಮಾಸ್ಟರ್ ಕಲ್ಲಡ್ಕ ಪ್ರಭಾಕರ ಭಟ್ಟ! ಆರೆಸ್ಸೆಸ್‌ನ ಹಿಂಸಾವಾದಿಯ ಪರೋಕ್ಷ ಬೆಂಬಲ ಸಿಕ್ಕನಂತರ ಪೊಳಲಿ ಅನಂತು ನರರಕ್ತ ರುಚಿ ಹತ್ತಿದ ಹಿಂದೂ ಹುಲಿಯಾಗಿ ಹೋಗಿದ್ದ. ಹಿಂದೂ ಪುಂಡರದೇ ಒಂದು ಪಡೆ ಕಟ್ಟಿಕೊಂಡು ಸಾಬರ ಕಡಿವ-ಸುಲಿವ 'ಭಜರಂಗಿ ಬಲಿ' ಕಾರ್ಯಾಚರಣೆ ಶುರುಹಚ್ಚಿಕೊಂಡು ಬಿಟ್ಟಿದ್ದ. ಅಂತಿಮವಾಗಿ ಈ ಪೋಲಿ ಪುಂಡನನ್ನು ಬಿತ್ತಪಾದೆ ರೆಹಮತ್‌ನೇ ಕೊಚ್ಚಿ ಕೊಲೆ ಮಾಡಿಬಿಟ್ಟಿದ್ದ. ಆಗ ಪೊಳಲಿ ಪಡೆಯಲ್ಲಿದ್ದ ಆಲ್ವಿನ್ ಪಿಂಟೋ ಮತ್ತು ಬೆಂಡ್ ಸಂತು ಎಂಬಿಬ್ಬರು ಈಗ ಪ್ರಮೋದ್ ಮುತಾಲಿಕನ ಶ್ರೀರಾ(ಮಾ)ಮಸೇನೆಯ ಸರದಾರರಾಗಿ ಕೋಮು ಕ್ರೌರ್ಯ-ಕರಾಮತ್ತಿನಲ್ಲಿ ತೊಡಗಿಕೊಂಡಿದ್ದಾರೆ.

ಈಗ ಆದ್ಯಾಕೋ ಮುಸ್ಲಿಂ ರೌಡಿ ಬಿತ್ತಪಾದೆ ರೆಹಮತ್ ಮತ್ತು ಹಿಂದೂ ಪಾತಕಿಗಳಾದ ಆಲ್ವಿನ್ ಪಿಂಟೋ ಹಾಗೂ ಬೆಂಡ್ ಸಂತು ನಡುವಿನ ದುಷ್ಮನಿ ಕೆರಳಿದೆ. ರೆಹಮತ್ ಎದುರಾಳಿಗಳ ನೆತ್ತರು ಹರಿಸಲು ಮಚ್ಚು ಮಸೆಯುತ್ತಿದ್ದಾನೆ. ತೀರಾ ಈಚೆ ಪೊಳಲಿ ರಾಜರಾಜೇಶ್ವರಿ ಫ್ರೆಂಡ್ಸ್ ಕ್ಲಬ್ ನಡೆಸಿದ್ದ ಕ್ರಿಕೆಟ್ ಮ್ಯಾಚ್‌ಗೆ ಆಲ್ವಿನ್ ಯಾನೆ ಅನಿಲ್-ಬೆಂಡ್ ಸಂತು ಹೋಗಿದ್ದರು. ಬರೋಬ್ಬರಿ 95 ಟೀಮುಗಳ ಈ ಕ್ರಿಕೆಟ್ ಮ್ಯಾಚ್ ನೋಡಲು ದೊಡ್ಡ ಪ್ರಮಾಣದಲ್ಲೇ ಜನ ಜಮೆಯಾಗಿದ್ದರು. ಆ ಜನಸಂದಣಿಯಲ್ಲಿ ಆಲ್ವಿನ್ ಮತ್ತು ಸಂತುಗಾಗಿ ರೆಹಮತ್‌ನ ಹಂತಕ ಪಡೆ ತಡಕಾಡಿದೆ. ಹುಡುಕಿದರೂ ಸಿಗದಿದ್ದಾಗ ಅವರು ಬಂದಿದ್ದ ವಾಹನ ಪರೀಕ್ಷಿಸಿ ಗುರುತು ಹಾಕಿಕೊಂಡಿದೆ. ಕೆಲವರನ್ನು ಕರೆದು ಸಂತು-ಆಲ್ವಿನ್‌ರನ್ನು ತೋರಿಸಿದರೆ 'ಇನಾಮು' ಕೊಡುವ ಆಮಿಷವೊಡ್ಡಿದೆ.


ಎಂ.ಡಿ. ಜಬ್ಬಾರ್

ಇದೆಲ್ಲ ತಿಳಿಯುತ್ತಿದ್ದಂತೆಯೇ ಆಲ್ವಿನ್ ಮತ್ತು ಸಂತು ಅಲ್ಲಿಂದ ಕಾಲ್ಕಿತ್ತು ಬಚಾವಾಗಿದ್ದಾರೆ. ಆದರೆ ಇದರಲ್ಲಿ ನಾಳೆ ಅನಂತೂನ ಹಿಂಬಾಲಕರಾದ ಮುಸ್ಲಿಂ ವಿರೋಧಿ ಸಂತು-ಆಲ್ವಿನ್‌ರ ಕೊಲ್ಲದೇ ಬಿಡಲಾರೆನೆಂದು ರೆಹಮತ್ ಭೂಗತ ಲೋಕದಲ್ಲಿ ಬೊಬ್ಬೆ ಹೊಡೆಯುತ್ತಿದ್ದಾನೆ. ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಭೂಗತ ಕಾರ್ಯಾಚರಣೆ ನಡೆಸಿರುವ ರೆಹಮತ್ ಗೇಮ್ ಮಾಡಿಯೇ ತೀರುತ್ತೇನೆಂದು ಹೊಂಚುಹಾಕಿ ಕುಂತಿದ್ದಾನೆ. ಹಾಗಂತ ಸಂತು-ಆಲ್ವಿನ್ ಕಂಡಕಂಡಲ್ಲಿ ಹೇಳುತ್ತಿದ್ದಾರೆ. ಇದಕ್ಕೊಂದು 'ಧರ್ಮಕಾರಣ'ದ ಹಿನ್ನೆಲೆ ಇದೆ. ಹಿಂದೂ ಧರ್ಮಕ್ಕೆ ಮತಾಂತರವಾಗಿರುವ ಕ್ರೈಸ್ತ ಕುಲದ ಆಲ್ವಿನ್ ಪಿಂಟೋ ತನ್ನ ಹೆಸರನ್ನು ಅನಿಲ್ ಬಂಗೇರಾ ಎಂದು ಬದಲಾಯಿಸಿ ಕೊಂಡಿದ್ದಾನೆ. ಹಿಂದೂ ಹರಾಮಿ ಪೊಳಲಿ ಅನಂತುನ ಹಿಂದೂತ್ವದ ಗರಡಿಯಲ್ಲಿ ಪಳಗಿದ ಪಿಂಟೋ ಪಕ್ಕಾ ಭಜರಂಗಿ ಆಗಿಹೋಗಿದ್ದ. ಆದರೆ ಅನಂತು ರೆಹಮತ್‌ನಿಂದ ಹತನಾದ ನಂತರ ಪಿಂಟೋ ಮತ್ತು ಅವನ ಹಿಂದೂ ಪುಂಡರು ಅನಾಥರಾಗಿದ್ದರು.


ಸೀಮಂತ್ ಕುಮಾರ್

ಆರೆಸ್ಸೆಸ್ ದೊರೆ ಕಲ್ಲಡ್ಕ ಭಟ್ಟರೂ ಈ ಹುಡುಗರನ್ನು ಬಳಸಿಕೊಂಡು ಕೈಬಿಟ್ಟಿದ್ದರು. ಬಿಜೆಪಿ-ಆರೆಸ್ಸೆಸ್-ಭಜರಂಗದಳದ ಬ್ರಾಹ್ಮಣಶಾಹಿ ಹಿಕಮತ್ತಿಗೆ ಬಲಿಯಾಗಿದ್ದ ಈ ಹುಂಬ ಹುಡುಗರು ಆ ನಂತರ ಗತಿಯಿಲ್ಲದೇ ಪ್ರಮೋದ್ ಮುತಾಲಿಕ್‌ನ ಶ್ರೀರಾಮಸೇನೆ ಸೇರಿದ್ದರು. ಅನಿಲ್ ಬಂಗೇರಾನಾದ ಆಲ್ವಿನ್ ಪಿಂಟೋ ಮಂಗಳೂರು ನಗರದ ಶ್ರೀರಾಮಸೇನೆಯ ಪ್ರಮುಖ ಸಂಚಾಲಕನೂ ಆಗಿಹೋದ. ಇದು ಮುತಾಲಿಕನ ದಾಯಾದಿ ಕಲ್ಲಡ್ಕ ಭಟ್ಟನ ಬಣವನ್ನು ಕೆರಳಿಸಿಬಿಟ್ಟಿತ್ತು! ಹೇಗಾದರೂ ಮಾಡಿ ಈ ಶ್ರೀರಾಮಸೇನೆಯ ಶೂರರ ಹಣಿಯಬೇಕೆಂದು ಪಣತೊಟ್ಟಿದ್ದ ಕಲ್ಲಡ್ಕ ಟೋಳಿ ಪೊಲೀಸರ ಛೂಬಿಟ್ಟಿತ್ತು. ಇನ್ನೊಂದೆಡೆ ಮುಸ್ಲಿಮ್ ಪಾತಕಿಗಳನ್ನೇ ಪ್ರಚೋದಿಸಿತ್ತು. ಹಾಗೆಂಬುದು ಮಂಗಳೂರಿನ ಅಂಡರ್‌ವರ್ಲ್ಡ್‌ನಲ್ಲಿ ಮೊಳಗುತ್ತಿರುವ ರಹಸ್ಯ ರೋಚಕ ಸುದ್ದಿ!

ಹೀಗಾಗಿ ಶ್ರೀರಾಮ ಸೇನೆಯ ರೌಡಿಗಳಾದ ಆಲ್ವಿನ್ ಮತ್ತು ಪಿಂಟೋ ಗಂಡಾಂತರಕ್ಕೆ ಸಿಲುಕಿದ್ದಾರೆ. ಜೀ[...] ಉಳಿಸಿಕೊಳ್ಳಲು ಅಥವಾ ಪ್ರತೀಕಾರಕ್ಕೆ ಎದುರಾಳಿಗಳ ಮೇ[...] ಬಿದ್ದರೆ ಪೊಲೀಸರು ಎನ್‌ಕೌಂಟರ್ ಮಾಡುವ ಭೀತಿ ಒಂ[...] ಕಡೆ; ಇನ್ನೊಂದೆಡೆ ಸುಮ್ಮನುಳಿದರೆ ಬಿತ್ತಪಾದೆ ರೆಹಮತ್ ಗ್ಯಾಂಗ್ ಕಡಿದುರುಳಿಸುವ ಭಯ. ಕಮ್ಯುನ[...] ಗೂಂಡಾಗಳೆಂದು ಹಣೆಪಟ್ಟಿ ಕಟ್ಟಿ ಆರೆಸೆಸ್-ಭಜರಂಗಿಪ[...] ತಮ್ಮನ್ನು ಜೈಲಿಗಾದರೂ ಅಟ್ಟದೇ ಬಿಡದೆಂಬುದು ಈ[...] ಶ್ರೀ ರಾಮಸೇನೆಯ ಭೂಗತ ಜೀವಿಗಳಿಬ್ಬರಿಗೆ ಖಾತ್ರಿಯಾ[...] ಹೋಗಿದೆ. ಮಂಗಳೂರಿನ ಶ್ರೀರಾಮ ಸೇನೆ ಮ[...] ಆರೆಸೆಸ್-ಭಜರಂಗ ದಳದ ಭೂಗತ ದೊರೆಗಳ ದಾಯಾ[...] ಮತ್ಸರ ಆದೆಲ್ಲಿಗೆ ತಲುಪಿದೆಯೆಂದರೆ, ಭೂಗತ ಪಾತಕಿಗಳ[...] ಪ್ರಚೋದಿಸಿ ಗ್ಯಾಂಗ್ ವಾರ್‌ಗೆ ನಿಲ್ಲಿಸುವಷ್ಟು ಕ್ರಿಮಿನ[...] ಕಾರ್ಯಾಚರಣೆ ಆಗಿಬಿಟ್ಟಿದೆ!

ಈಗ ಜೀವ ಭಯದಲ್ಲಿರುವ ಕನ್‌ವರ್ಟೆಡ್ ಹಿಂದ[...] ಆಲ್ವಿನ್ ಪಿಂಟೋ ಮತ್ತವನ ಸಹಚರ ಬೆಂಡ್ ಸಂ[...] ಮಚ್ಚು-ಚಾಕು-ತಲವಾರ್ ತ್ಯಜಿಸಿ ಕಮ್ಯೂನ[...] ಗೂಂಡಾಗಳಾಗಿ ಪರಿವರ್ತನೆಗೊಂಡಿರುವವರು. ಹಿಂದೂ ರೌಡಿಗಳ ಜಾತಕದ ತುಂಬ ರಕ್ತದ ಕಲೆಗ[...] ತುಂಬಿವೆ. ಕಾಲು ಕೆರೆದು ಜಗಳ ಕಡಿದು ಸಾ[...] ಮೇಲ್ಹೋಗಿ ಬೀಳುತ್ತಿದ್ದ ಪೊಳಲಿ ಅನಂ[...] ತಂಡದಲ್ಲಿದ್ದಾಗ ಇವರಿಬ್ಬರೂ ಮಾಡದ ಪಾತಕವಿ[...] ಈ ಸಂತು-ಆಲ್ವಿನ್ ಹೆಸರು ಮೊದಲು ಭೂ[...] ಲೋಕದಲ್ಲಿ ಕೇಳಿಬಂದಿದ್ದು ಹಮೀದ್ ಎಂಬಾ[...] ಹತ್ಯೆ ಹೊತ್ತಲ್ಲಿ. ಕ್ರಿಕೆಟ್ ಆಟದ ಸಂದರ್ಭದ [...] ಸಂಘರ್ಷದಲ್ಲಿ ಹಮೀದ್‌ನನ್ನು ಈ ಪಾಪಿಷ್ಠಯ[...] ಬಾಸ್ ಪೊಳಲಿ ಅನಂತುನ ಆಣತಿಯಂತೆ ಕೆ[...] ಮಾಡಿದ್ದರು. ಇದಾಗಿದ್ದು ಏಪ್ರಿಲ್ 2000 ರ[...] ಅದೇ ವರ್ಷದ ಡಿಸೆಂಬರ್‌ನಲ್ಲಿ ಬಂಟರ ಹುಡುಗಿಯೊ[...] ಮೈ-ಕೈ ತಡವಿ ಪೋಲಿ ಪುಂಡರೆಂದು ಕುಖ್ಯಾತರಾಗಿದ್ದ[...]

ಜಾನುವಾರು ಸಾಗಿಸುತ್ತಿದ್ದ ಮುಸ್ಲಿಮರ ಮೇಲೆರ[...] ಹಿಂದೂ ಹರಾಮಿ ಪಡೆ ಕೈಕಂಬ ಮಸೀದಿ ಬಳಿ ದ[...] ದೊಂಬಿ-ಮಾರಾಮಾರಿಯೇ ಮಾಡಿತ್ತು. ಆ ಪ್ರಕರಣ[...] ರಿಕ್ಷಾ ರಫೀಕ್ ಎಂಬಾತನನ್ನು ಈ ಸಂತು-ಆಲ್ವಿನ್ ಕೆ[...] ಮಾಡಿದ್ದರು. ಆಗಿವರಿಗೆ ಕ್ಯಾಂಡಲ್ ಸ[...] ಎಂಬ ನಟೋರಿಯಸ್ ಭೂಗತ ಪಾತಕಿ ಸಾ[...] ಕೊಟ್ಟಿದ್ದ. 2004 ರ ಮೇ 16 ರಂ[...] ಮಂಗಳೂರು ತಾಪಂ ಅಧ್ಯಕ್ಷನಾಗಿದ್ದ ಎಂ[...] ಜಬ್ಬಾರ್‌ನನ್ನು ಹಾಡುಹಗಲೇ ಕೆ[...] ಬೀಸಾಡಿದಾಗ ಈ ಹರಾಮಿ ಹುಡುಗರ[...] ಹೆಸರು ಕೇಳಿಬಂದಿತ್ತು. ಮುಸ್ಲಿಂ ಗೂಂಡಾ[...] ರಕ್ಷಕನಾಗಿದ್ದ ಜಬ್ಬಾರ್‌ನ ಕಂಡರೆ ಪೊ[...] ಅನಂತುಗೆ ಆಗುತ್ತಿರಲಿಲ್ಲ. ತಾ[...] ಕಚೇರಿಯಲ್ಲೇ ಜಬ್ಬಾರ್‌ನ ಕಡಿದುರುಳಿ[...] ಅನಂತು ಗ್ಯಾಂಗಿನಲ್ಲಿ ಈ ಸಂತು-ಆ[...] ಇದ್ದಿದ್ದರು. ಆಗ ಇಡೀ ಮುಸ್ಲಿಮ್ ಅಂಡರ್‌ವರ್ಲ್ಡ್ ಇವರ[...] ವಿರುದ್ಧ ತಿರುಗಿಬಿದ್ದಿತ್ತು!

ಭೂಗತಲೋಕದ ತನ್ನ ದೊರೆ ವಾಮಂಜೂ[...] ರೋಹಿಗೆ ಎಷ್ಟು ಆಪ್ತನಾಗಿದ್ದನೋ ಅಷ್ಟೇ ಸ್ನೇಹ-ಸ[...] ಕಾಂಗ್ರೆಸ್ ರಾಜಕಾರಣಿ-ಮುಸ್ಲಿಮ್ ಪುಂಡರ ಲೀ[...] ಜಬ್ಬಾರ್ ಜೊತೆ ಬಿತ್ತಪಾದೆ ರೆಹಮತ್‌ಗೆ ಇತ್ತು. ಪೊ[...] ಅನಂತು ರಿಕ್ಷಾಚಾಲಕ ರಫೀಕನನ್ನು ಪೊಳಲಿ ರಾಜರಾಜೇ[...] ದೇವಸ್ಥಾನದ ಪ್ರವೇಶದ್ವಾರದ ಬಳಿಯೇ ಕೊಲೆ ಮಾಡಿ[...] ಜಬ್ಬಾರ್‌ನನ್ನು ಕೆರಳಿಸಿತ್ತು. ಇಂದಲ್ಲ ನಾಳೆ ಈ ಜಬ್ಬಾರ್[...] ತನಗೆ ರಿಸ್ಕ್ ತಪ್ಪಿದ್ದಲ್ಲ ಎಂದು ಭಾವಿಸಿದ್ದ ಅನಂತು [...] ತಲೆತೆಗೆಯಲು ಪ್ಲಾನ್ ಹಾಕಿದ್ದ. ಆ ಸ್ಕೆಚ್‌ನಂತೆ[...] ಜಬ್ಬಾರ್‌ನನ್ನು ಮುಗಿಸಿದ ಸಂತು-ಆಲ್ವಿನ್ ಆರು [...] ಎರಡು ತಿಂಗಳು ಜೈಲು ಅನ್ನ ತಿಂದು 2009 [...] ಹೊರಬಂದಿದ್ದಾರೆ.

ತನ್ನ ಖರ್ಚು-ವೆಚ್ಚ ನೋಡಿಕೊಂಡು ಸಲಹು[...] ಜಬ್ಬಾರ್‌ನ ಹತ್ಯೆಯ ಸೇಡು ತೀರಿಸಿಕೊಳ್ಳದೇ ಬಿತ್ತ[...]

ರಾಜಿರಗಳೆ

ರಕ್ತದಾಹದಿಂದ ಹಪಹಪಿಸುತ್ತಿರುವ ಹಿಂದೂ, ಮುಸ್ಲಿಂ ಕಮ್ಯೂನಲ್ ಗೂಂಡಾಗಳ ನಡುವೆ ರಾಜೀ ಮಾಡಿಸಲು ಎಂಎಲ್‌ಎ ಆಕಾಂಕ್ಷಿ ಬಿಜೆಪಿ ಲೀಡರ್ ಒಬ್ಬನೇನಾದರೂ ಪ್ರಯತ್ನಿಸುತ್ತಿದ್ದಾನಾ? ಅಥವಾ ಈ ಭೂಗತ ಜೀವಿಗಳ ಜೊತೆ ನಿಕಟ ನಂಟಿರುವ ಪೊಲೀಸ್ ಅಧಿಕಾರಿ ಏನಾದರೂ ರೌಡಿ ಸಂಧಾನಕ್ಕೆ ಮುತುವರ್ಜಿ ವಹಿಸಿದ್ದಾನಾ? ಇಂತಹದ್ದೊಂದು ಕುತೂಹಲಕಾರಿ ಚರ್ಚೆ ಮಂಗಳೂರಿನ ಪಾತಕ-ಪಾಲಿಟಿಕ್ಸ್ ಮತ್ತು ಪೊಲೀಸ್ ವಲಯದಲ್ಲಿ ನಡೆದಿದೆ.

ಮಂಗಳೂರು ಶ್ರೀರಾಮಸೇನೆಯ ಸೇನಾಧಿಪತಿ ಅಲ್ವಿನ್ ಪಿಂಟೋ ಯಾನೆ ಅನಿಲ್ ಬಂಗೇರ, ತನಗೆ ಮುಸ್ಲಿಂ ರೌಡಿ ಬಿತ್ತಲ್‌ಪಾದೆ ರೆಹಮತ್‌ನಿಂದ ಜೀವಭಯವಿದೆಯೆಂದು ಪೊಲೀಸರಿಗೆ ದೂರಿದ್ದ. 'ಈ ಕಂಪ್ಲೇಂಟು ಕಥೆ' ಎಲ್ಲೆಡೆ ಹಬ್ಬುತ್ತಿದ್ದಂತೆಯೇ ಅಲರ್ಟ್ ಆದ ರೆಹಮತ್ ರಾಜಿಗೆ ರೆಡಿ ಎಂಬ ಸಂದೇಶ ಕಳುಹಿಸಿದ್ದಾನಂತೆ. ಹಳೆಯಂಗಡಿಯ ಬಿಜೆಪಿ ಮುಖಂಡ ಸತೀಶ್ ಭಟ್ ಮಧ್ಯಸ್ತಿಕೆಯಲ್ಲಿ ಕದನ ವಿರಾಮ ಘೋಷಣೆಗೆ ರೆಹಮತ್ ಮನಸ್ಸು ಮಾಡಿದ್ದಾನೆ. ಈ ಸತೀಶ್ ಭಟ್ ಮುಲ್ಕಿ-ಮೂಡಬಿದಿರೆ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ರೆಹಮತ್‌ನಿಂದ ಕೊಲೆಗೀಡಾದ ಸುಖಾನಂದ ಶೆಟ್ಟಿ ಮತ್ತು ಈ ಭಟ್ಟನ ನಡುವೆ ಬಿಜೆಪಿ ಟಿಕೆಟ್‌ಗಾಗಿ ಹಿಂದೆ ಸ್ಪರ್ಧೆ ಏರ್ಪಟ್ಟಿತ್ತು. ಹೀಗಾಗಿ ಭಟ್ಟ ಸುಖಾನಂದನ ಕತಂ ಮಾಡಲು ರೆಹಮತ್‌ಗೆ ಹೆಲ್ಪ್ ಮಾಡಿದ್ದನೆಂಬ ಗುಲ್ಲು ಈವತ್ತಿಗೂ ಚೆಡ್ಡಿ, ಬಿಜೆಪಿ ಬಿಡಾರದಲ್ಲಿದೆ. ರೆಹಮತ್-ಸತೀಶ್ ಭಟ್ಟನ ನಡುವೆ ನಿಗೂಢ ನಂಟಿರುವುದಂತೂ ಖರೆ.

ಇತ್ತ ಹಿಂದೂ ರೌಡಿಗಳಾದ ಆಲ್ವಿನ್ ಮತ್ತು ಬೆಂಡ್‌ಸಂತು ತಾವು ಬಿತ್ತಪಾದೆ ರೆಹಮತ್ ಜೊತೆ ರಾಜಿ ಆಗುವುದಿದ್ದರೆ ಅದು ತಮ್ಮ ಪರಮಾಪ್ತ ಪೊಲೀಸ್ ಅಧಿಕಾರಿಯೊಬ್ಬರ ಎದುರಷ್ಟೇ ಎನ್ನುತ್ತಿದ್ದಾರೆ. ಆದರೆ ಪೊಲೀಸರ ಕಣ್ತಪ್ಪಿಸಿ ಭೂಗತ ಕಾರ್ಯಾಚರಣೆ ಮಾಡುತ್ತಿರುವ ರೆಹಮತ್‌ಗೆ ಇದು ಒಪ್ಪಿಗೆ ಇಲ್ಲದ ಪ್ರಸ್ತಾಪ. ರಾಜಿಯಾಗುವುದೋ? ರಕ್ತಬೀಳುವುದೋ?

ರೆಹಮತ್ ಬಿಡಲಿಲ್ಲ. ಜಬ್ಬಾರ್ ಹತನಾದ ಆರೇ ಆರು ತಿಂಗಳಲ್ಲಿ ಪೊಳಲಿ ಅನಂತುನನ್ನು ರೆಹಮತ್ ಪಡೆ ಹತ್ಯೆ ಮಾಡಿ ಹಾಕಿತು. ಆ ಬಳಿಕ ಜಬ್ಬಾರ್ ಕೊಲೆಗೆ ಸಹಕರಿಸಿದ್ದ ಕ್ಯಾಂಡಲ್ ಸಂತುನನ್ನೂ ಮುಗಿಸಿತು. ಅನಂತು ಕೊಲೆ ಕೇಸಲ್ಲಿ ರೆಹಮತ್ ಜೈಲು ಪಾಲಾದರೂ ಅಲ್ಲಿಂದಲೇ ಹಿಂದೂ ರೌಡಿಗಳ ಮೇಲೆರಗಲು ತನ್ನ ತಂಡಕ್ಕೆ ಆದೇಶ-ಆಜ್ಞೆ ನೀಡುತ್ತಿದ್ದ. ಜಬ್ಬಾರ್ ಹತ್ಯೆಯಲ್ಲಿ ಪೊಳಲಿ ಅನಂತುಗೆ ನೆರವಾಗಿದ್ದ ಬಿಜೆಪಿ ಮುಖಂಡ-ಗ್ರಾನೈಟ್ ಡೀಲರ್ ಮುಲ್ಕಿಯ ಸುಖಾನಂದ ಶೆಟ್ಟಿಯನ್ನು ಮುಗಿಸಲು ಜೈಲಲ್ಲೇ ರೆಹಮತ್ ಸ್ಕೆಚ್ ಹಾಕಿದ್ದ. ಅಂತೆಯೇ ಕ್ಯಾಂಡಲ್ ಸಂತು ಮರ್ಡರ್ ಕೇಸಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಕಬೀರ್ ಎಂಬಾತನನ್ನು ಛೂ ಬಿಟ್ಟು ಸುಖಾನಂದ ಶೆಟ್ಟಿಯ ಕೊಲ್ಲಿಸಿದ್ದ!

"ಹಿಂದೂ ವೈಟ್ ಹ್ಯಾಂಡ್ ಲೀಡರ್" ಎಂಬ ಬಿರುದಿನ ಸುಖಾನಂದ ಶೆಟ್ಟಿ ಮುಲ್ಕಿ-ಮೂಡಬಿದಿರೆ ಕ್ಷೇತ್ರದ ಬಿಜೆಪಿ ಭಾವಿ ಎಮ್ಮೆಲ್ಲೆ ಎಂದೇ ಪ್ರಚಾರ ಪಡೆದಿದ್ದ ಖತರ್‌ನಾಕ್ ಭಜರಂಗಿ ಆಗಿದ್ದ. ಈತನ ಕೊಲೆಯಾದಾಗ ದೊಡ್ಡ ದೊಂಬಿಯೇ ಆಗಿತ್ತು. ಈ ಕೊಲೆ ಮಾಡಿದ್ದು ಮುಲ್ಕಿ ರಫೀಕ್ ಎಂಬ 'ಡಮ್ಮಿ' ರೌಡಿ ಎಂದು ಗುಲ್ಲೆಬ್ಬಿಸಲಾಗಿತ್ತು. ಆದರೆ ಸುಖಾನಂದ ಶೆಟ್ಟಿಯಂತ ಶಕ್ತಿಶಾಲಿ ಬಿಜೆಪಿಗನನ್ನು ಕೊಲ್ಲಿಸುವ ಧೈರ್ಯ ಈ ಪೊಕ್ಕು ಪುಂಡನಿಗೆ ಇರಲೇ ಇಲ್ಲವೆಂದು ಪಾತಕ ಲೋಕವೇ ಅಂದು ಅಭಿಪ್ರಾಯ ಪಟ್ಟಿತ್ತು. ಈ ರಫೀಕ್ ಪೊಲೀಸರ ನಕಲಿ ಎನ್‌ಕೌಂಟರ್‌ಗೆ ಬಲಿಯಾಗಿ ಹೋದ. ಕಳೆದ ಫೆಬ್ರವರಿಯಲ್ಲಿ ಸುಖಾನಂದನನ್ನು ಮುಗಿಸಿದ್ದ ಕಬೀರ್ ಕೂಡ ಖತಂ ಆಗಿಹೋದ.

ಬಿಜೆಪಿ-ಭಜರಂಗದಳದ ಜೀವ-ಜೀವಾಳವಾಗಿದ್ದ ಪೊಳಲಿ ಅನಂತು-ಸುಖಾನಂದ ಶೆಟ್ಟಿ ಹತರಾದ ನಂತರ ಬದುಕುಳಿದಿರುವ ಹಿಂದೂ ರೌಡಿಗಳೆಂದರೆ ಬೆಂಡ್ ಸಂತು ಮತ್ತು ಆಲ್ವಿನ್ ಪಿಂಟೋ ಮಾತ್ರ. ಇವರಿಬ್ಬರನ್ನು ಹೇಗಾದರೂ ಮಾಡಿ ಮುಗಿಸಲೇಬೇಕೆಂಬ ಹಠ ಬಿತ್ತಾಪಾದೆ ರೆಹಮತ್ ಎಂಬ ಮುಸ್ಲಿಮ್ ಪಾತಕರದು. ಅನಂತು ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದ ರೆಹಮತ್ ಹೊರಬಂದ ಕ್ಷಣದಿಂದಲೇ ಆಲ್ವಿನ್-ಸಂತುರ ನೆತ್ತರಿಗಾಗಿ ತಹತಹಿಸುತ್ತಲೇ ಇದ್ದಾನೆ. ಸುಖಾನಂದ ಶೆಟ್ಟಿಯನ್ನು ಹತ್ಯೆ ಮಾಡಿದ್ದ ಕಬೀರ್‌ನನ್ನು ಕೊಲೆ ಮಾಡಿದ್ದು ಇದೇ ಸಂತು ಮತ್ತು ಆಲ್ವಿನ್ ಎಂಬ ಹಿಂದೂ ಹರಾಮಿಗಳೆಂಬ ಸೇಡು ರೆಹಮತ್‌ನಲ್ಲಿ ಕೊತಗುಡುತ್ತಿದೆ!

ಹೀಗಾಗಿ ಖುದ್ದು ರೆಹಮತ್‌ನೇ ಅಖಾಡಕ್ಕೆ ಇಳಿದು ಮಚ್ಚು ಮಸೆಯುತ್ತಿದ್ದಾನೆ. ಸುಮಾರು ಹದಿನೈದು ದಿನಗಳ ಹಿಂದೆ ಹಿಂದೂ, ಮುಸ್ಲಿಂ ಕಮ್ಯೂನಲ್ ರೌಡಿಗಳ ಅಡ್ಡೆಯಂತಾಗಿರುವ ಕೈಕಂಬದಲ್ಲಿ ಭಜರಂಗಿ ರವಿ ಎಂಬಾತನ ಕೊಲೆಗೆ ಪ್ರಯತ್ನವಾಗಿತ್ತು. ಇದನ್ನು ಮಾಡಿದ್ದು ರೆಹಮತ್ ಪಡೆಯ ಹುಡುಗರು. ಈ ಹಂತಕ ಪಡೆಯಲ್ಲಿ ಹಿಂದೂ ರೌಡಿ ಕ್ಯಾಂಡಲ್ ಸಂತು ಕೊಲೆ ಆರೋಪಿ ಅಬ್ದುಲ್ ರೆಹಮಾನ್, ಸುಖಾನಂದ ಶೆಟ್ಟಿ ಕೊಲೆ ಕೇಸಲ್ಲಿದ್ದ ಕಬೀರ್ ಎಂಬ ದಿವಂಗತ ಭೂಗತ ಜೀವಿಯ ತಮ್ಮ ಅಬ್ದುಲ್ ವಜೀದ್ ಇದ್ದಿದ್ದರು. ಇವರ ಟಾರ್ಗೆಟ್ ಆಲ್ವಿನ್ ಮತ್ತು ಸಂತು ಆಗಿದ್ದರು. ಆದರೆ ಬೇಟೆ ತಪ್ಪಿದ ಹತಾಶೆಯಲ್ಲಿ ಹಿಂದೂ ಪುಂಡರ ಗ್ಯಾಂಗಲ್ಲಿದ್ದ ರವಿಗೆ ಕಡಿದು ಎದುರಾಳಿಗೆ ರೆಹಮತ್ ಎಚ್ಚರಿಕೆ ರವಾನಿಸಿದ್ದ.

ಇದೆಲ್ಲಾ ಗೊತ್ತಾಗಿರುವ ಚಡ್ಡಿ ಗ್ಯಾಂಗ್ ಮುಸ್ಲಿಮ್ ರೌಡಿ ಕೈಲೇ ಶ್ರೀರಾಮ ಸೇನೆಯ ಪಂಟರ್‌ಗಳ ಪ್ರಾಣ ಹರಣ ವಾಗಲೆಂದು ಷಡ್ಯಂತ್ರ ಮಾರುತ್ತಿದೆ. ಬಿಜೆಪಿ ಸರ್ಕಾರವನ್ನು ನಿಯಂತ್ರಿಸುತ್ತಿರುವ ಕರಾವಳಿ ಚಡ್ಡಿ 'ಡಾನ್' ಒಳಗೊಳಗೇ ಮುಸ್ಲಿಮ್ ಪಾತಕಿಗಳಿಗೆ ನೆರವಾಗುತ್ತಿದ್ದಾನೆ. ಗ್ಯಾಂಗ್‌ವಾರ್ ಆಗುವ ಸಂಕೇತಗಳು ಗೋಚರಿಸಿದರೂ ಆಳ್ವಿಕರ, ರಾಜಪುರೋಹಿತರ ಒಳ ಆಸೆ ತಿಳಿದು ಪೊಲೀಸರು ಏನೂ ಆಗದಂತೆ ಉದಾಸೀನದಲ್ಲಿದ್ದಾರೆ. ಇದು ಕರಾವಳಿಯಲ್ಲಿ ಟಾಕ್ ಆಫ್ ದಿ ಟೌನ್!

ಒಟ್ಟಿನಲ್ಲಿ ಕರಾವಳಿಯ ಆರೆಸ್ಸೆಸ್ ಪ್ರಣೀತ ಹಿಂದೂತ್ವ ಭೂಗತ ಲೋಕಕ್ಕೂ ಹೋಗಿ ನಿಂತಿದೆ! ಹೇಗಿದೆ ಚಡ್ಡಿಗಳ ಧರ್ಮೋದ್ಧಾರದ 'ಕರ್ಮ'?! ಪೊಲೀಸ್ ಕಮಿಷನರ್ ಸೀಮಂತ್‌ಕುಮಾರ್ ಸಿಂಗ್ ಇನ್ನಾದರೂ ಎಚ್ಚೆತ್ತುಕೊಂಡು ಕರ್ತವ್ಯ ನಿಭಾಯಿಸದಿದ್ದರೆ ಅನಾಹುತ ಗ್ಯಾರಂಟಿ!!

ಮುಂದೆ ರೆಡ್ಡಿ ಕುಟುಂಬ, ದೇವು ಕುಟುಂಬ ರಾಜ್ಯ ಆಳುತ್ತೆ!

ದೇವರ ಆಪ್ಪಣೆ ಪಡೆದು ಬಳ್ಳಾರಿ ಚುನಾವಣೆಗೆ ನುಗ್ಗಿದ ಎಡೂರಪ್ಪ ಇನ್ನೂ ಪರಪ್ಪನ ಅಗ್ರಹಾರದ ಗುಂಗಿನಲ್ಲೇ ಇರುವುದಲ್ಲದೆ ನ್ಯಾಯಮೂರ್ತಿ ಸಂತೋಷ್ ಹೆಗಡೆಯ ಟೀಕೆಯಲ್ಲಿ ಕಾಲಕಳೆಯುತ್ತಿರುವುದು ಚೆಡ್ಡಿಗಳಿಗೆ ತಲೆನೋವಾಗಿದೆಯಂತಲ್ಲಾ. ಬಿಜೆಪಿಗೆ ಮತ ಕೇಳುವುದು ಬಿಟ್ಟು ಸಂತೋಷ ಹೆಗಡೆಗೆ ಪ್ರಶ್ನೆ ಕೇಳುತ್ತ ಹೋಗುತ್ತಿರುವ ಎಡೂರಪ್ಪನ ಹಿಂದೆ ಹೋದ ಪಿಂಜರಾ ಪೋಲು ಪತ್ರಕರ್ತರು ಸದರಿ ಪ್ರಶ್ನೆಗಳನ್ನೆಲ್ಲ ಕೌಂಟ್ ಮಾಡಿ ಅದನ್ನು ಗಣಿಕಪ್ಪದ ಪಾಲು ಪಡೆದ ಪತ್ರಕರ್ತನಿಗೆ ಕಳುಹಿಸಿದರಂತಲ್ಲಾ. ಆತ ಭೋಜನದ ಎದುರು ಕುಳಿತ ಪುಳುಜುಟ್ಟನಂತೆ ಪುಳಕಿತನಾಗಿ ಅದನ್ನೇ ಕಲರ್‌ಫುಲ್ಲಾಗಿ ಕೆರೆಯುತ್ತಾ ಕುಳಿತಿದ್ದಾನಂತಲ್ಲಾ. ಇತ್ತ ರಾಮುಲು ಎದುರು ನಿಂತ ರಕ್ಕಸ ಸೇನಾ ಲೀಡರ್ ಈಶ್ವರಪ್ಪ ಎಡೂರಪ್ಪ ವಕ್ಕರಿಸಿದಾಗಿನಿಂದ ಶಾನೆ ಡಲ್ಲಾಗಿ ಮುಂದೆ ಚುನಾವಣೆಯಲ್ಲಿ ಸೋತರೆ ಅದನ್ನು ಅನಾಮತ್ತಾಗಿ ಎತ್ತಿ ಎಡೂರಪ್ಪನ ಮೇಲೆ ಹಾಕಲು ಸಂಚುರೂಪಿಸಿದ್ದಾನಂತಲ್ಲಾ, ಥೂತ್ತೇರಿ!

* * * * * *

ಥೂತ್ತೇರಿ

-ಯಾಹೂ

ಸದಾನಂದಗೌಡನನ್ನು ಸೈಡಿಗೆ ಸರಿಸಿದ್ದರೂ ಇನ್ನು ಮುಖ್ಯಮಂತ್ರಿಯ ಗುಂಗಿನಲ್ಲೇ ಇರುವ ಯಡ್ಡಪ್ಪ 'ನಾವು ಮಂತ್ರಿಗಳನ್ನು ಹದ್ದುಬಸ್ತಿನಲ್ಲಿಡದೇ ಹೋದದ್ದು ನಮ್ಮೆಲ್ಲರ ತಪ್ಪು' ಎಂದುಬಿಟ್ಟರಂತಲ್ಲಾ. "ಎಡೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ರೆಡ್ಡಿಗಳು ಮಾತು ಕೇಳಲಿಲ್ಲ. ಈಗ ಸದಾನಂದಗೌಡನ ಮಾತನ್ನ ಯಾರೂ ಕೇಳುತಿಲ್ಲ. ಇಂತಹ ಸಮಸ್ಯೆಯೊಂದನ್ನು ಕಾಸು ತೆಗೆದುಕೊಂಡು ಓಟುಮಾಡುವ ಜನರ ಮುಂದೆ ಹೇಳಿದರೆ ಏನು ಪ್ರಯೋಜನ. ಈ ಎಡೂರಪ್ಪ ಇನ್ನೂ ಬುದ್ಧಿ ಕಲಿಯಲಿಲ್ಲವಲ್ಲಾ" ಎಂದು ಚೆಡ್ಡಿಗಳು ಗಾಢವಾಗಿ ಚಿಂತಿಸುತ್ತಿದ್ದಾರಂತಲ್ಲಾ. ಈ ಮಧ್ಯೆ ನಮ್ಮ ವಜ್ರದಂತಿ ಜಾಹೀರಾತಿನ ಸದಾನಂದಗೌಡರು ಮೊದಲಬಾರಿಗೆ ನಗು ಕಳೆದುಕೊಂಡು "ರಾಮುಲು ಗೆಲ್ಲಲಿ ಸೋಲಲಿ, ಸರ್ಕಾರ ಉಳಿದರೆ ಸಾಕು. ಹಾಗಾಗಿ ಅವರನ್ನು ಟೀಕೆ ಮಾಡುವುದು ಬೇಡ" ಎಂದು ನಯಗಾರಿಕೆಯಲ್ಲೇ ಮಾತನಾಡುತ್ತಿರುವಾಗ ಒಡೆದ ಸೈಲೆನ್ಸರ್ ಪೈಪಿನಂತೆ ಸದ್ದು ಮಾಡುವ ಈಶ್ವರಪ್ಪ ರಾಮುಲು ಮೇಲೆ ವಾನರನಂತೆ ದಾಳಿಮಾಡಿದರಂತಲ್ಲಾ. ಇದರಿಂದ ಬಳ್ಳಾರಿ ಚುನಾವಣೆ ಬಿಜೆಪಿ V/s ರಾಮುಲುವಾಗಿ ಕಾಂಗ್ರೆಸ್ಸಿನವರು ಕಾಣೆಯಾಗಿದ್ದಾರಂತಲ್ಲಾ, ಥೂತ್ತೇರಿ!!

* * * * * *

ಬಳ್ಳಾರಿಯ ಭೀಕರ ಕದನದ ಸಂದರ್ಭದಲ್ಲಿ ಮಾಜಿ ಪ್ರಧಾನಿಗಳಾದ ದೇವೇಗೌಡರನ್ನು ಮಾತನಾಡಿಸಿದರೆ ಹೇಗೆ ಅನಿಸಿತಲ್ಲಾ. ಒಂದಿಷ್ಟು ಯೋಚಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್ :"ಬಲೆ ಚಾನ್ಸಿದೆ, ಲಕ್ಕಿ ಚಾನ್ಸಿದೆ, ಲಲ್ಲಲಾವ್ ಲಲ್ಲಲ್ಲಾವ್ ಲಕ್ಕಿ ಚಾನ್ಸಿದೆ...."

"ಹಲೋ ಯಾರು?"

"ನಾನು ಸಾರ್ ಯಾಹು ಅಂತ ಪತ್ರಕರ್ತ."

"ಗೌಡ್ರು ಮನಿಗ್ಯವ್ರೆ ಸಾ. ಎದ್ದು ಮ್ಯಾಲೆ ಮಾಡಿ."

"ಹಾಸಿಗೆ ಮೇಲೆ ಮಲಗಿದಾರೋ, ಕುಂತಗೊಂಡಿದಾರೊ?"

"ಕುರ್ಚಿಮೇಲೆ ಕುಂತವ್ರೆ. ತಲೆವಾಲಿಕಂಡದೆ. ಕಣ್ಣುಮುಚ್ಚವ್ರೆ."

"ಹಾಗಾದ್ರೆ ಅವರ ಮನಸ್ಸು ಬಳ್ಳಾರಿಲಿ ಸಂಚರಿಸ್ತಾಯಿದೆ. ಪತ್ರಕರ್ತ ಯಾಹು ಪೋನ್ ಮಾಡಿದಾರೆ ಅಂತ ಕಿವಿಲೇಳ್ತಿರಾ?"

"ಆಗ್ಲಿ ಸಾ. ಅಪ್ಪಾರೇ ಯಾರೋ ಯಾವ್ರೂ ಅಂತ ಪೋನು ಮಾಡ್ಯವ್ರೆ. ಮಾತಾಡ್ಬೇಕಂತೆ ತಗಳಿ."

"ಹಲೋ ಯಾರೂ?"

"ನಾನು ಯಾಹು ಸಾರ್. ಗೌರಿ ಮೇಡಂ ಪೋನು ಮಾಡಿ ಮಾತಾಡ್ಸಿ ಅಂದ್ರು."

"ಆಯ್ತು ಮಾತಾಡಿ."

"ಕಡೆಗೂ ನೈಸ್ ರಸ್ತೆ ಒಬ್ಬನ ಬಲಿತ ಗೊಂಡೇ ಬಿಡ್ತಲ್ಲ ಸಾರ್."

"ಅದನ್ನ ಬಲಿ ಅನ್ನದಕ್ಕಿಂತ, ಆತ ಹುತಾತ್ಮನಾಗಿದ್ದಾನೆ. ಅವನ ಆತ್ಮಕ್ಕೆ ಶಾಂತಿ ಸಿಗ ಬೇಕಾದ್ರೆ, ನಾವೂ ಪ್ರಾಮಾಣಿಕವಾಗಿ ಹೋರಾಟ ಮಾಡಬೇಕಾಗ್ತದೆ. ಅದಕ್ಕೆ ನಾನೂ ಗಾಂಧಿ ಪ್ರತಿಮೆ ಬಳಿ ಸದರಿ ಪ್ರಕರಣವನ್ನಾ ಸಿಬಿಐಗೆ ವಹಿಸಬೇಕು ಅಂತ ಹೇಳಿ ಸತ್ಯಾಗ್ರಹ ಮಾಡಿದೆ"

"ಈ ಸಿಬಿಐನ ನೀವೇ ಹಿಂದೊಮ್ಮೆ ಚೋರ್ ಬಚಾವ್ ಇನ್‌ಸ್ಟಿಟ್ಯೂಷನ್ ಅಂತ ಹೇಳಿದ್ರಿ. ಅಂಗಾಗಿ ಈ ಹತ್ಯಾಕಾಂಡದ ಚೋರ ಬಚಾವಾಗ್ತನಲ್ಲವ ಸಾರ್?"

"ಒಳ್ಳೆ ಅಧಿಕಾರಿಗಳಿದ್ರೆ ಬಚಾವಾಗಕ್ಕೆ ಸಾಧ್ಯವಾಗಲ್ಲ."

"ಅಂದ್ರೆ, ಸಂತೋಷ್ ಹೆಗಡೆ ತರದವದ್ರೆ ಬಚಾ ವಾಗಕ್ಯಾಗಲ್ಲ ಅನ್ನಿ."

"ಸಂತೋಷ್ ಹೆಗಡೆಯವರು ನಿವೃತ್ತರಾಗಿರೊದ್ರಿಂದ ಅವರ ವಿಷಯನ ನಾನು ಪ್ರಸ್ತಾಪ ಮಾಡಕ್ಕೆ ಹೋಗೋದಿಲ್ಲ, ಆದರೆ ಯಾವುದೇ ಸಂಸ್ಥೆ ಯಲ್ಲಾ ಸಂದರ್ಭದಲ್ಲೂ ಒಂದೇ ತರ ಇರಲ್ಲ."

"ನಿಜ ಸಾರ್, ನೋಡಿ ಈಗ ಲೋಕಾಯುಕ್ತ ಸಂಸ್ಥೆ ನಿಷ್ಕ್ರಿಯವಾಗಿದೆ. ಅದಕ್ಕೆ ಯೋಗ್ಯವಾದೋರು ಕರ್ನಾಟಕದಲ್ಲಿ ಸಿಕ್ತಾಯಿಲ್ಲ, ನಿಮಗೆ ಗೊತ್ತಿರಂಗೆ ಯಾರಾದರು ಇದಾರಾ ಸಾರ್?"

"ಅಯ್ಯೋ, ಇವತ್ತಿನ ದಿವಸದಲ್ಲಿ ಪ್ರಾಮಾಣಿಕರನ್ನ ಹುಡುಕೋದು ಒಂದೇ, ಸಾವಿಲ್ಲದ ಮನೆ ಸಾಸಿವೆ ಹುಡಕೋದು ಒಂದೇ"

"ಹಾಗನ್ನಕ್ಕೆ ಬರಲ್ಲ ಸಾರ್. ರಾಜಕಾರಣದಲ್ಲೇ ನೋಡಿ ಎ.ಕೆ.ಸುಬ್ಬಯ್ಯ, ಗೋವಿಂದೇಗೌಡ್ರು, ಹೆಚ್.ಟಿ.ಕೃಷ್ಣಪ್ಪ, ಗೋಣಂದೂರು ಲಿಂಗಪ್ಪ, ಕೆ.ಆರ್.ಪೇಟೆ ಕೃಷ್ಣ ಇಂತವರೆಲ್ಲಾ ಇನ್ನು ಇದಾರೆ ಸಾರ್. ಆಡಳಿತದಲ್ಲೂ ಅಂತವರಿರಬವ್ರುದು."

"ಏನೋ ನಾನಷ್ಟು ತಿಳಕೊಳೊದಕ್ಕೆ ಹೋಗಿಲ್ಲ"

"ಸಾರಿ ಸಾರ್. ಇನ್ನೊಂದು ಪ್ರಶ್ನೆ. ಬಳ್ಳಾರಿ ಚುನಾವಣೆ ಬಗ್ಗೆ ನಿಮ್ಮ ನಿಲುವೇನು ಸಾರ್?"

"ಆ ಚುನಾವಣೆ ನಂತರ ಯಾವಾಗ್ಲಾದ್ರು ಅಸೆಂಬ್ಲಿ ಚುನಾವಣೆ ಬರಬಹುದು. ಅದಕ್ಕಾಗಿ ವ್ಯರ್ಥ ಪ್ರಯತ್ನ ಬೇಡ ಅಂತ ಕ್ಯಾಂಡೇಟ್ ಹಾಕಲಿಲ್ಲ."

"ಹಾಗಾದ್ರೆ ನಿಮ್ಮ ಪಾರ್ಟಿ ಜನ ಯಾರಿಗೆ ಓಟು ಮಾಡಬೇಕು ಸಾರ್?"

"ಸ್ವತಂತ್ರವಾಗಿ ನಿಂತಿರುವ ಯಾವುದೇ ಅಭ್ಯರ್ಥಿಗೆ ಮಾಡಬವುದು."

"ರಾಮುಲು ಸ್ವತಂತ್ರವಾದ ಅಭ್ಯರ್ಥಿ."

"ನಾನು ಇಲ್ಲ ಅಂದನಾ. ಕಾಂಗ್ರೆಸ್, ಬಿಜೆಪಿ ಹೊರತುಪಡಿಸಿ ಮತ್ಯಾವುದೇ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಸೂಚನೆ ಕೊಟ್ಟಿದ್ದೇವೆ."

"ಜನ ಹೇಳೋದೇನು ಅಂದ್ರೆ, ನಿಮಗಾಗದೇಯಿರೋರನ್ನ ಸೋಲಿಸಬೇಕಾದ್ರೆ ನೀವು ಕ್ಯಾಂಡೇಟಾಕಲ್ಲ. ಆ ತರ ಸೋಮಣ್ಣನ್ನ ತಗದ್ರಿ. ಈಗ ಬಳ್ಳಾರಿಲಿ ಬಿಜೆಪಿ ತೆಗದು ರಾಮುಲು ಗೆಲ್ಲುಸ್ತಿರಿ ಅಂತ ಹೇಳ್ತರೆ ಸಾರ್."

"ನೋಡೀ ನಾನು ಯಾವತ್ತೂ ಈ ನಾಡಿಗೆ ಒಳ್ಳೆದು ಮಾಡಬೇಕು ಅಂತಲೇ ರಾಜಕಾರಣ ಮಾಡಿದೋನು. ಉಪ ಚುನಾವಣೆಗಳನ್ನು ನಾನು ಎದುರಿಸಿದ್ದೀನಿ. ಜನತೆ ತೀರ್ಪನ್ನ ಒಪ್ಪಿಗೋಬೇಕಾಗುತ್ತೆ.

"ಹಾಗಿದ್ದ ಮೇಲೆ ಕುಮಾರಸ್ವಾಮಿನೇಕೆ ಬಳ್ಳಾರಿಗೆ ಕಳಿಸಿದ್ರಿ ಸಾರ್?"

"ಯಾಕೆ? ಬಳ್ಳಾರಿಗೆ ಹೋಗಬಾರದ ಅತ?"

"ನಿಮ್ಮ ಅಭ್ಯರ್ಥಿನೆ ಇಲ್ಲ ಅಂದ ಮೇಲೆ ನಿಮಿಗೇನು ಕೆಲಸ ಅಲ್ಲಿ?"

"ಅತೃಪ್ತಗೊಂಡ ನಮ್ಮ ಪಾರ್ಟಿ ಜನರನ್ನ ಸಮಾಧಾನಮಾಡೋದು ಬೇಡವಾ?"

"ಸಾರಿ ಸಾರ್, ಆ ಉದ್ದೇಶಕ್ಕೆ ಹೋಗದು ಸರಿ. ಆದ್ರು ಕುಮಾರಣ್ಣ ನೇರವಾಗೆ ರಾಮುಲುಗೆ ಬೆಂಬಲ ಅಂತಿದ್ದಾರೆ ಸಾರ್."

"ಅಂಗೆ ಹೇಳೋದಕ್ಕೆ ಆತ ಸ್ವತಂತ್ರ."

"ಇದಕ್ಕೆ ರಾಷ್ಟ್ರಾಧ್ಯಕ್ಷರ ಅನುಮತಿ ಇದೆ ಅಂದಂಗಾಯ್ತು."

"ತಾವು ಏನಾದ್ರು ತಿಳಕೊಬವ್ರುದು."

"ಮುಂದೆ ರೆಡ್ಡಿ ರಾಜಿನಾಮೆ ಕೊಟ್ಟು ಚುನಾವಣೆಗೆ ನಿಂತ್ರೂ ಹೋಗಿ ಸಪೋರ್ಟ್ ಮಾಡಬೇಕಾಗುತ್ತಲ್ಲ ಸಾರ್?"

"ನೋಡಿ, ರಾಜಕಾರಣದಲ್ಲಿ ಯಾವುದನ್ನೇ ಆಗಲಿ ಖಚಿತ ವಾಗಿ ಮಾತನಾಡೋದಕ್ಕೆ ಬರಲ್ಲ. ಹತ್ತೊಂಬತ್ತುನೂರ ಎಪ್ಪತ್ತೊಂಬತ್ತನೆ ಇಸವಿಯಲ್ಲಿ ದೇವರಾಜ ಅರಸುರವರನ್ನು ಮಹಾಭ್ರಷ್ಟ, ಭ್ರಷ್ಟತೆಗೆ ಭಾರತರತ್ನ ಪ್ರಶಸ್ತಿ ಕೊಡೋದಿದ್ರೆ ಅದನ್ನ ಅರಸುಗೇ ಕೊಡಬೇಕು ಅಂತ ಹೇಳಿ ಭಾಷಣ ಮಾಡಿದ್ದೆ."


"ಆ ತರ ಭಾಷಣ ಮಾಡಿದವರ ಮನೆ ಮಕ್ಕಳ ಮೇಲೆಲ್ಲಾ ಭ್ರಷ್ಟಾಚಾರದ ಕೇಸಿದೆಯಲ್ಲ ಸಾರ್."

"ಹೇಳೋವರಿಗೂ ಕೇಳಿ. ಹಾಗೆ ಭಾಷಣ ಮಾಡಿದ ಮರುದಿನವೇ ಅರಸು ಮನೆ ಬಾಗಲಲ್ಲಿ ನಿಂತುಕೊಳ್ಳಬೇಕಾದ ಪರಿಸ್ಥಿತಿ ಬಂತು. ಮುರಾರ್ಜಿ ದೇಸಾಯಿಯ ವರು 'ಹೋಗಿ ಅರಸು ಮಾತನಾಡಿಸಿ' ಅಂತ ಫೋನ್ ಮಾಡಿದ್ರು."


"ಗೊತ್ತಾಯ್ತು ಬಿಡಿ ಸಾರ್. ಮುಂದೆ ರೆಡ್ಡಿ ಕುಟುಂಬ, ದೇವೇ ಗೌಡರ ಕುಟುಂಬ ಒಟ್ಟಾಗಿ ಸೇರಿ ರಾಜ್ಯ ಭಾರ ಮಾಡುತ್ತೆ ಅಲ್ವಾ ಸಾರ್?"

"ದೈವ ಕೃಪೆ ಹೇಗಿದೆಯೋ ನೋಡೋಣ ಇರಿ."

"ಥೂತ್ತೇರಿ!!!"



ವಿನಿವಿಂಕ್ ಶಾಸ್ತ್ರಿಯ ಲೆಕ್ಕ ಚುಕ್ತಾ



ವಿನಿವಿಂಕ್ ಶಾಸ್ತ್ರಿ


ಸುದೀರ್ಘ ಜೈಲು ಶಿಕ್ಷೆ, ಸಿಓಡಿ ಪೊಲೀಸರ ಕಪಿಮುಷ್ಟಿ, ಠೇವಣಿದಾರರ ಬಿಗಿಪಟ್ಟು, ಹಿಡಿತ ಸಡಿಲಿಸದ ಕೋರ್ಟುಗಳು; ಎಲ್ಲವೂ ಪರಸ್ಪರ ಸೇರಿಕೊಂಡ ಫಲವೇ ವಿನಿವಿಂಕ್ ಶಾಸ್ತ್ರಿ ದಾರಿಗೆ ಬಂದಿದ್ದಾನೆ.
ವಂಚಕ ವೃತ್ತಾಂತವೊಂದರ ಕೊನೆಯ ಅಧ್ಯಾಯ ಶುರುವಾಗಿದೆ. 40 ಕೋಟಿಯ ಶಾಸ್ತ್ರಿಯ ಅವಶೇಷದಂತಿರುವ ನಿಧಿ ಕೋರ್ಟ್ ಕಸ್ಟಡಿಯಲ್ಲಿ ಭದ್ರವಾಗಿದೆ. ಕೊಡಬೇಕಾದ 29 ಕೋಟಿಯ ಲೆಕ್ಕವೂ ಇದೆ. ಇದರಲ್ಲಿ ಯಾರಿಗೆಷ್ಟೇ ಕೊಟ್ಟರೂ ಒಂದಷ್ಟು ದುಡ್ಡು ಶಾಸ್ತ್ರಿಗೆ ಮಿಕ್ಕುತ್ತದೆ. ಜೊತೆಗೆ ಆತ ಋಣಮುಕ್ತನಾದಂತೆಯೂ ಆಗುತ್ತದೆ.

• ರಾ. ಸೋಮನಾಥ

ವಂಚಕ ವೃತ್ತಾಂತವೊಂದು ಅಂತಿಮ ಘಟ್ಟಕ್ಕೆ ಬಂದು ನಿಂತಿದೆ. ಇನ್ನು 366 ಮಂದಿಗೆ ರೊಕ್ಕ ಹಿಂತಿರುಗಿಸಿದನೆಂದರೆ ವಿನಿವಿಂಕ್ ಶಾಸ್ತ್ರಿ ಋಣಮುಕ್ತನಾಗುತ್ತಾನೆ.

ವಿನಿವಿಂಕ್ ಶಾಸ್ತ್ರಿ ಸದ್ಯಕ್ಕೆ ಜೈಲಿಂದ ಹೊರಬರಲಾರ. ಆತನನ್ನು ನಂಬಿ ಯಾರೆಲ್ಲ ದುಡ್ಡು ಹಾಕಿದ್ದರೋ ಅವರಿಗೇ ಚಿಪ್ಪೇ ಗಟ್ಟಿ. ಶಾಸ್ತ್ರಿ ಬಳಿ ಅಷ್ಟೊಂದು ದುಡ್ಡು ಇಲ್ಲವೇ ಇಲ್ಲ. ವಿಪರೀತ ಬಡ್ಡಿಯ ಆಸೆ ಹುಟ್ಟಿಸಿ ಹಾಕಿದ ದುಡ್ಡನ್ನೆಲ್ಲ ಶಾಸ್ತ್ರಿ ದುಂದುವೆಚ್ಚ ಮಾಡಿ ಹುಡಿಹಾರಿಸಿದ್ದಾನೆ. ಬಡ್ಡಿ ಹಾಳಾಗಲಿ ಅಸಲೂ ಸಿಗುವುದು ಕಷ್ಟ. ಅಕ್ಷಯ ಫೌಂಡೇಶನ್, ವಿಶ್ವಭಾರತಿ, ಜಿಎಸ್‌ಎಸ್ ನಿಧಿ, ಗುರುಟೀಕ್, ಅಗ್ರಿಗೋಲ್ಡ್... ಇತ್ಯಾದಿ ಬ್ಲೇಡ್ ಕಂಪನಿಗಳಂತೆ ವಿನಿವಿಂಕ್‌ಗೆ ಹಾಕಿದ ದುಡ್ಡೂ ಸರ್ವನಾಶ- ಎಂದೆಲ್ಲ ಯಾರೆಲ್ಲಾ ಲೆಕ್ಕ ಹಾಕಿದ್ದರೋ ಅದು ಸುಳ್ಳಾಗಲು ಇನ್ನೂ ಒಂದೆರಡು ತಿಂಗಳಷ್ಟೇ ಬಾಕಿ.


ಸುದೀರ್ಘ ಜೈಲು ಶಿಕ್ಷೆ, ಸಿಓಡಿ ಪೊಲೀಸರ ಕಪಿಮುಷ್ಟಿ, ಠೇವಣಿದಾರರ ಬಿಗಿಪಟ್ಟು, ಹಿಡಿತ ಸಡಿಲಿಸದ ಕೋರ್ಟುಗಳು; ಎಲ್ಲವೂ ಪರಸ್ಪರ ಸೇರಿಕೊಂಡ ಫಲವೇ ವಿನಿವಿಂಕ್ ಶಾಸ್ತ್ರಿ ದಾರಿಗೆ ಬಂದಿದ್ದಾನೆ. 2010ರ ಫೆಬ್ರವರಿಯಲ್ಲಿ ಸುಪ್ರೀಂಕೋರ್ಟ್ ಆತನಿಗೆ ಜಾಮೀನು ನೀಡುವ ಹೊತ್ತಿಗಾಗಲೇ ಶಾಸ್ತ್ರಿ ಬರೋಬ್ಬರಿ 19,898 ಮಂದಿಯ ಠೇವಣಿ ವಾಪಸ್ಸು ಮಾಡಿದ್ದ. ಅದೂ ಸಣ್ಣ ಮೊತ್ತವೇನಲ್ಲ -171 ಕೋಟಿ, 72 ಲಕ್ಷದ 67 ಸಾವಿರದ 247 ರೂಪಾಯಿಗಳು!



ಪೇಜಾವರ ಸ್ವಾಮೀಜಿ

2003ರಲ್ಲಿ ಮಾಸಿಕ 10 ಪರ್ಸೆಂಟ್ ಬಡ್ಡಿ ನೀಡುತ್ತೇನೆಂದು ಶಾಸ್ತ್ರಿ ಸಂಗ್ರಹಿಸಿದ ಒಟ್ಟು ಮೊತ್ತ 205,40,37,623 ರೂಪಾಯಿಗಳು. ತಿಂಗಳಿಗೆ ಶೇ. ಹತ್ತರಷ್ಟು ಬಡ್ಡಿಯೆಂದರೆ ವಾರ್ಷಿಕ 120 ಪರ್ಸೆಂಟಾಯಿತು. ದೇಶದ ಯಾವುದೇ ರಾಷ್ಟ್ರೀಕೃತ ಬ್ಯಾಂಕಾಗಲಿ, ಸಹಕಾರಿ ಸಂಸ್ಥೆಗಳಾಗಲಿ ಏನೇ ತಿಪ್ಪರಲಾಗ ಹಾಕಿದರೂ ವರ್ಷಕ್ಕೆ ಹತ್ತು ಪರ್ಸೆಂಟ್ ಬಡ್ಡಿ ಕೊಡುವುದೇ ಹರಸಾಹಸ. ಅಂಥಾದ್ದರಲ್ಲಿ ಶಾಸ್ತ್ರಿ ತಿಂಗಳಿಗೆ ಹತ್ತು ಪರ್ಸೆಂಟ್ ಕೊಡುತ್ತಾನೆಂದರೆ ಅದೊಂಥರದ ಡಬ್ಲಿಂಗ್ ದಂಧೆಯೇ. ನಂಬಿದ ಸಹಸ್ರಾರು ಮಂದಿ ಇದ್ದಬದ್ದ ದುಡ್ಡನ್ನೆಲ್ಲ ತಂದು ಶಾಸ್ತ್ರಿಯ ಕೈಗಿತ್ತರು. ಯಾರೂ ನಂಬಲಿಕ್ಕಿಲ್ಲ : ಅನೇಕ ಪೊಲೀಸ್ ಅಧಿಕಾರಿಗಳು, ಕೆಲ ಐಎಎಸ್ ಅಧಿಕಾರಿಗಳು, ಸಿನಿಮಾ ನಟರು, ಉದ್ದಿಮೆದಾರರು ಮತ್ತು ಮೀಟರ್ ಬಡ್ಡಿ ಖದೀಮರಿಂದ ಹಿಡಿದು ಕೋರ್ಟ್ ಜಡ್ಜುಗಳ ತನಕ ಎಲ್ಲರೂ ಕೂಡಿಟ್ಟ ರೊಕ್ಕ ತಂದು ಶಾಸ್ತ್ರಿಯ ಮಡಿಲಿಗಿಟ್ಟಿದ್ದರು.

ಆ ಹೊತ್ತಿಗೆ ಶಾಸ್ತ್ರಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಮಟ್ಟದ ಪದಾಧಿಕಾರಿಯಾಗಿದ್ದ. ತನ್ನ ಪ್ರತೀ ಕಾರ್ಯಕ್ರಮಕ್ಕೂ ಪೇಜಾವರ ಸ್ವಾಮಿಯನ್ನು ಕರೆಸಿ ವೇದಿಕೆಯೇರಿಸುತ್ತಿದ್ದ. ಒಂದೆಡೆ ಮಂತ್ರಾಲಯದ ಸ್ವಾಮಿ ಮತ್ತೊಂದೆಡೆ ಉಡುಪಿಯ ಪೇಜಾವರ ಸ್ವಾಮಿ, ಮಗದೊಂದೆಡೆ ಶಂಕರಪುರದ ಬ್ರಾಹ್ಮಣ ಮಹಾಸಭಾದ ವೇದಿಕೆ... ಹೀಗೆ ಬ್ರಾಹ್ಮಣರ ಶಕ್ತಿ ಕೇಂದ್ರಗಳನ್ನೇ ಗುರಿಯಿಟ್ಟುಕೊಂಡು ತನ್ನ ವಂಚನೆಯ ಬಲೆಬೀಸಿದ ಶಾಸ್ತ್ರಿಯ ಬುಟ್ಟಿಗೆ ಬಿದ್ದವರ




ಹರಾಜಿಗಿಟ್ಟ ಶಾಸ್ತ್ರಿಯ ಕಾರುಗಳು

ಪೈಕಿ ಹೆಚ್ಚಿನವರು ಬ್ರಾಹ್ಮಣರೇ ಆಗಿದ್ದರು. ಕೆಲವರಂತೂ ತಮ್ಮ ಮನೆ, ಆಸ್ತಿ ಮಾರಿ ಶಾಸ್ತ್ರಿಗೆ ರೊಕ್ಕ ತಂದುಕೊಟ್ಟರು. ಹೆಚ್ಚುಹೆಚ್ಚು ಬ್ರಾಹ್ಮಣರನ್ನೇ ಆಕರ್ಷಿಸುವ ಗುರಿಯಿಂದ ಶಾಸ್ತ್ರಿ ಎಲ್ಲೆಂದರಲ್ಲಿ ಗಾಯಿತ್ರಿಯಾಗ, ಹೋಮ ಹವನಗಳನ್ನು ನಡೆಸಲಾರಂಭಿಸಿದ. ಯಾವುದೇ ಬ್ರಾಹ್ಮಣಸ್ವಾಮಿ, ಇನ್ಯಾವುದೇ ಜ್ಯೋತಿಷಿ ಹಣ ದುಪ್ಪಟ್ಟು ಮಾಡಿಕೊಡುವಂತಿದ್ದರೆ ಶಾಸ್ತ್ರಿ ಏಕೆ ಕೊಟ್ಟ ದುಡ್ಡಿಗೆ ಕೈಎತ್ತಿ ಪರಾರಿಯಾಗುತ್ತಿದ್ದ?

ವಿನಿವಿಂಕ್ ಫೌಂಡೇಶನ್, ವಿನಿವಿಂಕ್ ಅಲ್ಟ್ರಾ ಸೂಪರ್ ಮಾರ್ಕೆಟ್, ವಿನಿವಿಂಕ್ ಬ್ಯುಜಿನೆಸ್ ಸಲ್ಯೂಷನ್ಸ್ ಪ್ರೈಲಿ., ವಿನಿವಿಂಕ್ ಪ್ರಾಪರ್ಟೀಸ್, ವಿನಿವಿಂಕ್ ಎಜ್ಯುಕೇಶನ್ ಟ್ರಸ್ಟ್, ವಿನಿವಿಂಕ್ ಹೆಲ್ಪ್ ಮಾರ್ಟ್ ಪ್ರೈ.ಲಿ. ವಿನಿವಿಂಕ್ ಟೈಮ್ಸ್ ಎಂಬ ಪತ್ರಿಕೆ, ವಿನಿವಿಂಕ್ ಮ್ಯಾಟ್ರಿಮೋನಿ, ವಿನಿವಿಂಕ್ ನ್ಯೂಸ್‌ನೆಟ್, ವಿನಿವಿಂಕ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಮತ್ತು ವಿನಿವಿಂಕ್ ಇನ್ಶೂರೆನ್ಸ್ ಸಲ್ಯೂಷನ್ಸ್ ಹೀಗೆ ಬರೋಬ್ಬರಿ ಒಂದು ಡಜನ್ ಕಂಪನಿಗಳನ್ನು ಸೃಷ್ಟಿಸಿ ತನ್ನ ಠೇವಣಿದಾರರನ್ನು ನಂಬಿಸಲು ಶಾಸ್ತ್ರಿ ಯತ್ನಿಸಿದ್ದು ಆತನಿಗೇ ಮುಳುವಾಗಿತ್ತು. ಪತ್ರಿಕೆ ಓದುವವರ್ಯಾರು? ಸೂಪರ್ ಮಾರ್ಕೆಟ್ ನಡೆಸಲು ಟೈಮೆಲ್ಲಿದೆ? ನ್ಯೂಸ್‌ನೆಟ್ ಮಾಡಿ ಯಾರಿಗೆ ಸುದ್ದಿ ಮಾರಲು ಸಾಧ್ಯ? ವಧುವರಾನ್ವೇಷಣೆ ಅಂದರೆ ಮ್ಯಾಟ್ರಿಮೋನಿ ನಡೆಸಿ ಕೇವಲ ಮದುವೆ ಮಾಡಿಸುತ್ತಾ ಕೂತರೆ ಹಣ ಬಾಚುವುದು ಎಲ್ಲಿಂದ?

2008ರ ಹೊತ್ತಿಗೆ ಬರೋಬ್ಬರಿ 20,184 ಠೇವಣಿದಾರರಿಂದ ಶಾಸ್ತ್ರಿ ಒಟ್ಟೂ 205,40,37,623 ರೂಪಾಯಿ ಸಂಗ್ರಹಿಸಿದ್ದ. ಈ ಪೈಕಿ ಬೆಂಗಳೂರೊಂದರಲ್ಲೇ 169,28,72,785 ರೂಪಾಯಿ ಬಾಚಿದ್ದ. ಮೈಸೂರಿನ ಆತನ ಏಜೆಂಟರು 13,24,61,845 ರೂಪಾಯಿ ಕಲೆಹಾಕಿದ್ದರು, ತುಮಕೂರಿನಲ್ಲಿ 13,08,27,240 ರೂಪಾಯಿ, ಶಿವಮೊಗ್ಗದಲ್ಲಿ 1,62,28,000, ರಾಯಚೂರಿನಲ್ಲಿ 7,27,60,753, ಹಿರಿಯೂರಿನಲ್ಲಿ 88,87,000 ರೂಪಾಯಿಗಳಷ್ಟನ್ನು ಕೇವಲ ಮೂರ್ನಾಲ್ಕು ವರ್ಷಗಳಲ್ಲಿ ಶಾಸ್ತ್ರಿ ಕಲೆಹಾಕಿದ್ದ. ಹೀಗೆ ಸಂಗ್ರಹಿಸಿದ ದುಡ್ಡಲ್ಲಿ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿಯ ಏಕರಾಜಪುರದಲ್ಲಿ 25 ಎಕರೆ ಜಮೀನು ಖರೀದಿಸಿದ. ಪಕ್ಕದಲ್ಲೇ ಇನ್ನೂ 7 ಎಕರೆ ಜಮೀನು ಖರೀದಿಸಿ ಅದರಲ್ಲಿ ಇಂಜಿನಿಯರಿಂಗ್ ಕಾಲೇಜು ತೆರೆದ. ಯಲಹಂಕದ ಕೋಗಿಲುಗೇಟ್ ಬಳಿಯ ಮಾರುತಿನಗರದಲ್ಲಿ ಎರಡೆಕರೆಯಷ್ಟು ಜಮೀನು ಖರೀದಿಸಿ 52 ಸೈಟುಗಳನ್ನು ವಿಂಗಡಿಸಿದ. ಬರೋಬ್ಬರಿ ಒಂದು ಡಜನ್ ಐಷಾರಾಮಿ ಕಾರುಗಳನ್ನು ಖರೀದಿಸಿದ. ಕೋಟಿಗಟ್ಟಲೇ ಬೆಲೆಬಾಳುವ ಚಿನ್ನಾಭರಣಗಳು, ಕಂಪ್ಯೂಟರ್‌ಗಳು, ಪೀಠೋಪಕರಣ, ಟಿವಿ, ಫ್ರಿಜ್ಜು ಇತ್ಯಾದಿಗಳೆಲ್ಲವನ್ನೂ ಖರೀದಿಸಿಟ್ಟುಕೊಂಡಿದ್ದ.

ಮಿಕ್ಕಂಥ ಬಹುತೇಕ ದುಡ್ಡನ್ನು ಶಾಸ್ತ್ರಿ ಷೇರುಗಳ ಖರೀದಿಗೆ ಹಾಕಿದ್ದ. ಯಾವತ್ತು ಜನ ಬೀದಿಗಿಳಿದು ಕಂಡ ಕಂಡ ಪೊಲೀಸ್ ಠಾಣೆಗಳಿಗೆ ದೂರು ನೀಡತೊಡಗಿದರೋ ಪತ್ರಿಕೆಗಳಲ್ಲಿ ಇದೇ ದೊಡ್ಡ ಸುದ್ದಿಯಾಗತೊಡಗಿತೋ ಶಾಸ್ತ್ರಿ ನಾಪತ್ತೆಯಾದ. ಆಗ ಮುಗಿಬಿದ್ದ ಪೊಲೀಸರು ಅದರಲ್ಲೂ ಜಂಟಿಕಮೀಷನರ್ ಶರತ್‌ಚಂದ್ರ ಶಾಸ್ತ್ರಿಯ ತಳಬುಡ ಬಿಡದೇ ಜಾಲಾಡಿಬಿಟ್ಟರು. ಆತನ ಮುನೇಶ್ವರ ಬ್ಲಾಕ್‌ನ ಮನೆಯೊಂದರಲ್ಲೇ 800 ಗ್ರಾಂ ಚಿನ್ನ, ಒಂದು ಡೈಮಂಡ್ ನೆಕ್ಲೆಸ್, 25 ಕೆ.ಜಿ.ಯಷ್ಟು ಬೆಳ್ಳಿ, ವಜ್ರಖಚಿತ ಬ್ರೇಸ್‌ಲೆಟ್, ರಾಘವೇಂದ್ರ ಸ್ವಾಮಿಯ ತರಹೇವಾರಿ ವಿಗ್ರಹಗಳು, ಮುತ್ತುಹವಳಗಳನ್ನು ಜಪ್ತಿ ಮಾಡಲಾಯಿತು. ಮೂರು ಹೋಂಡಾ ಅಕ್ಕೀವಾ, ಎರಡು ಓಮ್ನಿ, ಒಂದು ಟಾಟಾ ಇಂಡಿಕಾ, ಒಂದು ಟಯೋಟಾ, ಒಂದು ಮಾರುತಿ 800, ಒಂದು ಸ್ಯಾಂಟ್ರೋ, ಒಂದು ಜೆಟ್‌ರೋಲೆಟ್, ಒಂದು ಅಸ್ಸೆಂಟ್, ಒಂದು ವಾಟರ್ ಟ್ಯಾಂಕ್ ಸಹಿತ ಟ್ರ್ಯಾಕ್ಟರ್ ... ಹೀಗೆ ಬರೋಬ್ಬರಿ ಒಂದು ಡಜನ್ ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿತ್ತು. ಹತ್ತು ಕೋಟಿಯಷ್ಟು ನಗದು ಜಪ್ತಾಗಿತ್ತು. ಆತನ ಷೇರುಗಳು, ಸೌಹಾರ್ದ ಸೊಸೈಟಿಯಲ್ಲಿದ್ದ ದುಡ್ಡು, ತರಹೇವಾರಿ ಕಂಪನಿಗಳಿಗೆ ಹಾಕಿದ ಬಂಡವಾ[ಳ,] ಯಲಹಂಕದ ಸೈಟುಗಳು, ಹೊಸಕೋಟೆಯ ಜಮೀನು, ಮುನೇಶ್ವರ ಬ್ಲಾಕ್‌ನ ಮನೆ ಶಾಸ್ತ್ರಿಯ ಪರಮಾಪ್ತರ ಬಳಿಯಿ[ದ್ದ] ದುಡ್ಡು ಮತ್ತು ಆಸ್ತಿ ಎಲ್ಲವನ್ನೂ ಲೆಕ್ಕಹಾಕಿದರೆ ಅದರ ಸದ್ಯ[ದ] ಮಾರುಕಟ್ಟೆ ಬೆಲೆಯೇ 400 ಕೋಟಿಗಳಷ್ಟಾಗುತ್ತಿತ್ತು.



ವಕೀಲ ಶಂಕರಪ್ಪ

ಶಾಸ್ತ್ರಿಯ ಕಂಪ್ಯೂಟರ್‌ನ ಹಾರ್ಡ್‌ಡಿಸ್ಕ್ ವಶಪಡಿ[ಸಿ]ಕೊಂಡ ಪೊಲೀಸರು ಅದನ್ನು ಬಿಡಿಸಿ ನೋಡಲಾಗಿ ಸಿಕ್ಕಿ[ದ್ದು] 20,184 ಠೇವಣಿದಾರರ ಹೆಸರು. ಇವರಿಂದ 20[5] ಕೋಟಿಯಷ್ಟು ದುಡ್ಡೆತ್ತಿದ್ದಕ್ಕೆ ಲೆಕ್ಕವಿತ್ತು. ಈ ಹಂತದಲ್[ಲಿ] ಶಾಸ್ತ್ರಿಯನ್ನು ಮನವೊಲಿಸಿ ಪೊಲೀಸರಿಗೆ ಶರಣಾಗುವಂ[ತೆ] ಮಾಡಿ ಆತನ ಠೇವಣಿದಾರರಿಗೆಲ್ಲ ಹಣ ವಾಪಸ್ಸು ಮಾಡ[ುವ]ವಂತೆ ಮನವೊಲಿಸಿದ್ದು ಹೈಕೋರ್ಟ್ ವಕೀಲ ಶಂಕರಪ್ಪ. 2006ರಿಂದ 2010ರತ[ನಕ] ಸತತ ನಾಲ್ಕು ವರ್ಷಗಳ ಕಾಲ ಪರಪ್ಪ[ನ] ಅಗ್ರಹಾರ ಜೈಲಲ್ಲಿ ಕಂಬಿ ಎಣಿಸಿದ ಶಾ[ಸ್ತ್ರಿ] ಹೈರಣಾಗಿ ಹೋಗಿದ್ದ. ತನಗೆ ಜಾಮೀನ[ು] ಕೊಟ್ಟರೆ ಖಂಡಿತ ದುಡ್ಡು ವಾಪಸ್ಸು ಮಾಡ[ು]ತ್ತೇನೆಂದು ಪದೇಪದೇ ಹೈಕೋರ್ಟ್[ಗೆ] ಮೊರೆಯಿಟ್ಟ. ಆದರೆ ಹೈಕೋರ್ಟ್ ಪಟ್ಟು ಬಿಡಲೇ ಇಲ್ಲ.

ಅಂತಿಮವಾಗಿ ಶಾಸ್ತ್ರಿಯೇ ಒಂದು ನಿರ್ಧಾರಕ್ಕೆ ಬಂ[ದ.] ಜೈಲಲ್ಲಿದ್ದುಕೊಂಡೇ ಈ ಹಿಂದೆ ಯಾರ್‍ಯಾರಿಂದ ತಾ[ನು] ದುಡ್ಡೆತ್ತಿದ್ದನೋ ಅವರನ್ನೆಲ್ಲಾ ಸಂಪರ್ಕಿಸಿ ಕೊಟ್ಟ ಅಸಲನ್ನ[ು] ತೀರಿಸುತ್ತೇನೆಂದು ಬೇಡಿಕೊಂಡ. ಕೆಲವರಿಗೆ ಚೂರುಪಾ[ರು] ಬಡ್ಡಿಯನ್ನೂ ಸೇರಿಸಿಕೊಟ್ಟ. ಬಹುತೇಕರಿಗೆ ಹಾಕಿದ ಅಸ[ಲನ್ನು] ಆತ ಮಂತ್ಲಿ ಬಡ್ಡಿಯ ರೂಪದಲ್ಲಿ ಕೊಟ್ಟದ್ದೇ ಸರಿಹೋಗಿತ್[ತು.]



ಕೋರ್ಟಿಗೆ ಅಲೆಯುತ್ತಿರುವ ಶಾಸ್ತ್ರಿ

ಉಳಿಕೆ ಬ್ಲೇಡ್‌ಕಂಪನಿಗಳ ವಂಚಿತರ ಗತಿಯೇನು?

ವಿನಿವಿಂಕ್ ವಂಚಿತರ ಪರ ಕೋರ್ಟು, ಸರ್ಕಾರ, ಪತ್ರಿಕೆಗಳು, ಟಿವಿ ಚಾನೆಲ್‌ಗಳೆಲ್ಲ ಆ ಪಾಟಿ ಮುತುವರ್ಜಿ ವಹಿಸಿದ್ದು ನಿಷ್ಠುರವಾಗಿ ವಸೂಲಿಗೆ ನಿಂತಿದ್ದನ್ನು ಕಂಡ ಇತರೇ ಬ್ಲೇಡ್ ಕಂಪನಿಗಳ ವಂಚಿತರಿಗೆ ಏನಾಗಿರಬೇಡ? ಅಕ್ಷಯ ಫೌಂಡೇಶನ್‌ನ ಅನಿತಾ ವಂಚಿಸಿದ್ದು ಶಾಸ್ತ್ರಿಗೆ ಹೋಲಿಸಿದರೆ ಏನಕ್ಕೂ ಕಮ್ಮಿಯಿರಲಿಲ್ಲ. ಅನ್ನಸಂದ್ರ ಪಾಳ್ಯದ ವಿಶ್ವಭಾರತಿಯೊಬ್ಬಳೇ 20[0] ಕೋಟಿಗೆ ನಾಮ ಹಾಕಿದ್ದಳು. ಗುರುಟೀಕ್, ಅಗ್ರಿಗೋಲ್ಡ್, ಜಿಎಸ್‌ಎಸ್ ನಿಧಿ, ಡಬ್ಲಿಂಗ್ ರಾಣಿ ಪದ್ಮಾ ಭಟ್ ಮುಂತಾದವರಿಂದ ಹಣ ಕಳೆದುಕೊಂಡವರಿಗೆ ಹೋಲಿಸಿದರೆ ವಿನಿವಿಂಕ್ ಶಾಸ್ತ್ರಿಯದ್ದು ಏನೇನೂ ಅಲ್ಲ.

ವಿಚಿತ್ರವೆಂದರೆ ಇತರೇ ಬ್ಲೇಡ್ ಕಂಪನಿಗಳ ವಿಷಯದಲ್ಲಿ ಮೀಡಿಯಾಗಳು ಇಷ್ಟೊಂದು ನಿಷ್ಠುರವಾಗಲೇ ಇಲ್ಲ. ಅವರ್‍ಯಾರನ್ನೂ ಹಿಡಿದು ವರ್ಷಗಟ್ಟಲೇ ಜೈಲಲ್ಲಿ ಇಡಲಿಲ್ಲ. ಇನ್ನೂ ವಿಶೇಷವೆಂದರೆ ವಿನಿವಿಂಕ್ ವಂಚನೆಯನ್ನೆ ಮುಂದಿಟ್ಟುಕೊಂಡು ಇಂಥ ಹಣಕಾಸು ಸಂಸ್ಥೆಗಳಲ್ಲಿ ವಂಚಿತರಾದವರಿಗೆ ಇನ್ನು ಮುಂದೆ ನ್ಯಾಯ ಕಲ್ಪಿಸಲೆಂದೇ The Karnataka Protection of Interest of Depositors in Financial Establishment Ac[t] 2004 ಅರ್ಥಾತ್ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ 2004 ಎಂಬ ವಿಶೇಷ ಕಾಯ್ದೆಯನ್ನೇ ರೂಪಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿತು. 2006ರ ಮಾರ್ಚ್ 15ರಂದು ಜಾರಿಗೆ ಬಂದ ಈ ವಿಶೇಷ ಕಾಯ್ದೆ ಇಡೀ ದೇಶಕ್ಕೆ ಮಾದರಿಯಾಗಿತ್ತು. ಈ ಕಾಯ್ದೆಗೆಂದೇ ಹೈಕೋರ್ಟ್‌ನಲ್ಲಿ ವಿಶೇಷ ಪೀಠವೊಂದನ್ನು ಸ್ಥಾಪಿಸಲಾಯಿತು.

ಇದು ಮಾಧ್ಯಮಗಳು ವಿನಿವಿಂಕ್ ವಂಚಿತರ ಪರ ವಹಿಸಿ ನೀಡಿದ ವಿಶೇಷ ಪ್ರಚಾರದ ಪರಿಣಾಮವಾಗಿತ್ತು. ಪತ್ರಿಕೆಗಳ ಮತ್ತು ಮೀಡಿಯಾಗಳೆಲ್ಲ ಸದ್ಯ ಆರೆಸ್ಸೆಸ್ ಪ್ರೇರಿತ ಬ್ರಾಹ್ಮಣಶಾಹಿಯ ವಶಕ್ಕೊಳಪಟ್ಟಿದ್ದರ ಪ್ರತಿಫಲವೋ ಅಥವಾ ವಂಚಿತರ ಪರ ಬ್ರಾಹ್ಮಣ ಮಹಾಸಭಾ, ಪೇಜಾವರ ಮತ್ತು ಸಂಘಪರಿವಾರ ನಿಂತಿದ್ದರ ಮರ್ಮವೋ ಗೊತ್ತಿಲ್ಲ. ಒಂದಂತೂ ಸ[ತ್ಯ] ವಿನಿವಿಂಕ್‌ನಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಾಗಿ ಬಡಬಗ್ಗರು, ಜನಸಾಮಾನ್ಯರು, ಶೂದ್ರವರ್ಗದವರು, ಬ್ರಾಹ್ಮಣರಲ್ಲದ ಜನರ ಇಂಥದ್ದೇ ಬ್ಲೇಡ್ ಕಂಪನಿಗಳು ಕೋಟಿಗಟ್ಟಲೇ ದುಡ್ಡಿಗೆ ನಾಮಹಾಕಿದಾಗ ಯಾವ ಮಾಧ್ಯಮ ಪತ್ರಿಕೆಗಳೂ ಈ ಪಾಟಿ ಪ್ರಚಾರ ನೀಡಲಿಲ್ಲ. ಬಹುಶಃ ಇನ್ನು ಮುಂದೆಯೂ ನೀಡಲಿಕ್ಕಿಲ್ಲ.

"ಆದರೆ ವಿನಿವಿಂಕ್ ಕಾರಣಕ್ಕಾದರೂ ವಿಶೇಷ ಕಾಯ್ದೆಯೊಂದು ರೂಪುಗೊಂಡಿತಲ್ಲ. ಇದರಿಂದಾಗಿ ವಂಚಿತರಿಗೆ ನ್ಯಾಯ ದೊರಕುತ್ತದೆಯಲ್ಲವೇ? ವಂಚಕರೆಲ್ಲರದ್ದೂ ಒಂದೇ ಜಾತಿ. ನೊಂದವರು ಯಾರಾದರೇನು? ಆದಷ್ಟು ಬೇ[ಗ] ಶಾಸ್ತ್ರಿಯಿಂದ ಹಣ ಕಳಕೊಂಡ ಠೇವಣಿದಾರರಿಗೆ ನ್ಯಾಯ ಸಿಗಬೇಕು. ಈ ನಿಟ್ಟಿನಲ್ಲಿ ಕೋರ್ಟು, ಸರ್ಕಾರ, ಪೊಲೀಸರು, ವಕೀಲರು ಎಲ್ಲರೂ ಚುರುಕಾದರೆ ಸಾಕು" ಎನ್ನುತ್ತಾರೆ ಶಾಸ್ತ್ರಿ ಪರ ಹೈಕೋರ್ಟ್ ವಕೀಲ ಶಂಕರಪ್ಪ.

ಅಂಥ ಅನೇಕರು ಆತನ ಜೈಲುವಾಸಕ್ಕೆ ಮನಕರಗಿ ತಮಗೇನೂ ಬಾಕಿ ಬರಬೇಕಿಲ್ಲ ಎಂದು ಕೋರ್ಟ್‌ಗೆ ಲಿಖಿತ ಹೇಳಿಕೆ ಕೊಟ್ಟರು. 2010ರ ಹೊತ್ತಿಗೆ ಈ ರೀತಿ ಬಾಕಿ ಚುಕ್ತಾ ಲೆಕ್ಕದಲ್ಲಿ ಶಾಸ್ತ್ರಿ 19,898 ಮಂದಿ ಠೇವಣಿದಾರರನ್ನು ಕಳೆಹಾಕಿದ್ದ. ಸಂಗ್ರಹಿಸಿದ್ದ 205 ಕೋಟಿ ರೂಪಾಯಿಗಳಲ್ಲಿ ಇಷ್ಟೊಂದು ಮಂದಿಗೆ ತಾನು 171,72,67,297 ರೂಪಾಯಿಗಳ ಬಾಕಿ ತೀರಿಸಿದ್ದೇನೆಂದು ಕೋರ್ಟ್‌ಗೆ ಲಿಖಿತ ಪ್ರಮಾಣ ಪತ್ರ ಸಲ್ಲಿಸಿದ್ದ.

ಅಲ್ಲಿಗೆ 20,184 ಮಂದಿ ಠೇವಣಿದಾರರ ಪೈಕಿ ಉಳಿದದ್ದು ಕೇವಲ 366 ಮಂದಿ ಮಾತ್ರ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಶಾಸ್ತ್ರಿ ವಿರುದ್ಧ ವಿವಿಧ ಪೊಲೀಸ್ ಠಾಣೆಗಳು, ಕೋರ್ಟು, ಗ್ರಾಹಕರ ಆಯೋಗ ಇತ್ಯಾದಿಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ ಇನ್ನೂರನ್ನೂ ಮೀರಿರಲಿಲ್ಲ. ಹೀಗೆ ದೂರು ಕೊಟ್ಟವರು ಮತ್ತು ಪೊಲೀಸರ ದಾಖಲೆಗಳಲ್ಲಿರುವ ಒಟ್ಟು 366 ಮಂದಿಗೆ ಲೆಕ್ಕಹಾಕಿದರೆ ಶಾಸ್ತ್ರಿ ಪಾವತಿಸಬೇಕಿದ್ದದ್ದು 29,41,68, 324 ರೂ.ಗಳು ಮಾತ್ರ. ಈ ಮಧ್ಯೆ ಸುಪ್ರೀಂಕೋರ್ಟ್ ಶಾಸ್ತ್ರಿಯ ಈ ಪ್ರಮಾಣಪತ್ರವನ್ನೇ ಪರಿಗಣಿಸಿ 2010ರಲ್ಲಿ ಜಾಮೀನು ನೀಡಿತು. ಜೊತೆಗೆ ಶಾಸ್ತ್ರಿಯಿಂದ ಹಣಕಳೆದುಕೊಂಡವರಿಗೆ ನ್ಯಾಯ ಸಲ್ಲಿಸಲೆಂದೇ ಬೆಂಗಳೂರು ನಗರ ಜಿಲ್ಲೆಯ ಕಂದಾಯ ಇಲಾಖೆಯ ಸಹಾಯಕ ಕಮೀಷನರ್ ದರ್ಜೆಯ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ವಿಶೇಷ ಪರಿಹಾರ ಘಟಕವೊಂದನ್ನು ರಚಿಸಲಾಗಿತ್ತು.

ಕಂದಾಯ ಇಲಾಖೆಯ ಅಸಿಸ್ಟೆಂಟ್ ಕಮೀಷನರ್ ನೇತೃತ್ವದ ಈ ಕಾರ್ಯಪಡೆ ಪೊಲೀಸರ ಸಮಕ್ಷಮದಲ್ಲೇ ಶಾಸ್ತ್ರಿಯ ಅಷ್ಟೂ ಐಷಾರಾಮಿ ಕಾರುಗಳನ್ನು 2011ರ ಏಪ್ರಿಲ್ 8ರಂದು ಸೆಂಟ್ರಲ್ ಪೊಲೀಸ್ ಠಾಣೆಯ ಆವರಣದಲ್ಲಿ ಹರಾಜು ಹಾಕಿತು. ಹೀಗೆ ಕಾರುಗಳ ಹರಾಜಿನಿಂದ ಬಂದ ದುಡ್ಡೇ 15 ಕೋಟಿಯಾಗಿತ್ತು. ಇದಕ್ಕೂ ಮುನ್ನ ಆತನ ಬಲಹಂಕದ ಉಳಿಕೆ 36 ಸೈಟುಗಳ ಪೈಕಿ 34ನ್ನು ಹರಾಜು ನಡೆಸಲಾಗಿತ್ತು. ಸರ್ಕಾರ ಚದರ ಅಡಿಗೆ ಸಾವಿರ ರೂಪಾಯಿ ನಿಗದಿಪಡಿಸಿದರೆ ಹರಾಜು ಕೂಗಿದವರು ಅದರ ದುಪ್ಪಟ್ಟು ಬೆಲೆಗೆ ಕೂಗಿ ಸೈಟು ಖರೀದಿಸಿದ್ದರು. ಇದೊಂದೇ ಬಾಬತ್ತಿನಿಂದ 7.32 ಕೋಟಿ ರೂಪಾಯಿ ಸಂಗ್ರಹಿಸಲಾಯ್ತು. ಹೊಸಕೋಟೆಯ ಆತನ ಇಂಜಿನಿಯರಿಂಗ್ ಕಾಲೇಜಿನ ಜಮೀನನ್ನು ಜಿಂದಾಲ್ ಕಂಪನಿಯವರು 4.15 ಕೋಟಿಗೆ ಹರಾಜು ಕೂಗಿದರೆ ಉಳಿಕೆ 26 ಎಕರೆಯನ್ನು ಅದೇ ಜಿಂದಾಲ್ ಕಂಪನಿಯವರು 23 ಕೋಟಿಗೆ ಖರೀದಿಸಿದ್ದರು.

ಈ ಎಲ್ಲಾ ಸೊತ್ತುಗಳನ್ನು ಲೆಕ್ಕ ಹಾಕಿದರೆ ಬಂದ ದುಡ್ಡಲ್ಲಿ ಆತನ ಎಲ್ಲಾ ಠೇವಣಿದಾರರ ಬಾಕಿಯನ್ನು ಸಲೀಸಾಗಿ ತೀರಿಸಬಹುದಿತ್ತು. ಆತ ಷೇರುಗಳ ಮೇಲೆ ಹಾಕಿದ್ದು, ಜಪ್ತಿಯಾಗಿದ್ದ ಕ್ಯಾಷು, ಚಿನ್ನಾಭರಣಗಳ ಹರಾಜಿನಿಂದ ಬಂದಿದ್ದು, ಕಾರುಗಳ ಹರಾಜು ಮತ್ತು ಸೈಟುಗಳಿಂದ ಬಂದ ದುಡ್ಡು ಎಲ್ಲವನ್ನೂ ಸೇರಿಸಿದರೆ ಜಪ್ತಾದ ಒಟ್ಟೂ ಮೊತ್ತವೇ ನಾನೂರು ಕೋಟಿಯಷ್ಟಾಗಿತ್ತು. ಈ ನಿಧಿಯನ್ನೇ ಕ್ರೋಢೀಕರಿಸಿದ ಕಂದಾಯ ಅಧಿಕಾರಿಗಳು ಅನೇಕರ ಬಾಕಿ ತೀರಿಸಿಬಿಟ್ಟರು. ಈಗ ಉಳಿಕೆ 366 ಮಂದಿಗೆ ಶಾಸ್ತ್ರಿ 29,41,68,326 ರೂಪಾಯಿ ತೀರಿಸಿಬಿಟ್ಟರೆ ಆತ ಋಣಮುಕ್ತನಾದಂತೆಯೇ.

ಆದರೆ ಶಾಸ್ತ್ರಿಯ ಉಳಿಕೆ ಆಸ್ತಿ ಸರ್ಕಾರಿ ಮೌಲ್ಯದ ಪ್ರಕಾರವೇ 88 ಕೋಟಿಯಷ್ಟಿದೆ. ಇದರ ಸದ್ಯದ ಮಾರುಕಟ್ಟೆ ಮೌಲ್ಯ ಕಮ್ಮಿಯೆಂದರೂ 200 ಕೋಟಿಯಷ್ಟಾಗುತ್ತದೆ. ಈ ಪೈಕಿ ಬಹುಪಾಲನ್ನು ಅಧಿಕಾರಿಗಳು ಸರ್ಕಾರಿ ಮೌಲ್ಯಕ್ಕೆ ಹರಾಜು ಹಾಕಿದ್ದರಿಂದಾಗಿ ಈತನಕ ಸರಿಸುಮಾರು 40 ಕೋಟಿಯಷ್ಟು ದುಡ್ಡು ಕೋರ್ಟ್ ಅಧೀನದಲ್ಲಿದೆ. ಇದರಲ್ಲಿ 29 ಕೋಟಿ ಕಳೆದರೂ ಉಳಿಕೆ ಹತ್ತು ಕೋಟಿ ಶಾಸ್ತ್ರಿಯ ಕೈಯಲ್ಲೇ ಮಿಕ್ಕುತ್ತದೆ. ಈ ಹತ್ತು ಕೋಟಿ ಬಂದರೆ ತಾನು ಇನ್ನೇನನ್ನಾದರೂ ಮಾಡಿಯೇನೆಂಬುದು ಆತನ ಅಳಲು. ಅದಕ್ಕೆ ಪದೇಪದೇ ಕೋರ್ಟ್ ಮೊರೆಹೊಕ್ಕು ತನ್ನ ಠೇವಣಿದಾರರಿಗೆಲ್ಲ ಬಾಕಿ ಪಾವತಿಸುವಂತೆ ಅರ್ಜಿ ಹಾಕುತ್ತಿದ್ದಾನೆ.

ಹಾಗಂತ ಉಳಿಕೆ ಠೇವಣಿದಾರರು ಒಪ್ಪಬೇಕಲ್ಲ. ತಾವು ಹಾಕಿದ ಬಂಡವಾಳಕ್ಕೆ ಇಷ್ಟೇ ಬಡ್ಡಿಬೇಕು, ಇಷ್ಟೆಲ್ಲ ನಷ್ಟವಾಗಿದ್ದಕ್ಕೆ ಪರಿಹಾರ ಕಟ್ಟಿಕೊಡಬೇಕು ಎಂದು ಪಟ್ಟು ಹಿಡಿದರೆ ಏನು ಮಾಡುವುದು?


ಸದ್ಯ ಕೋರ್ಟು, ಪೊಲೀಸು ಮತ್ತು ಶಾಸ್ತ್ರಿ ಸೇರಿದಂತೆ ಅನೇಕರ ತಲೆತಿನ್ನುತ್ತಿರುವ ಪ್ರಶ್ನೆಯಿದು. ಈ 366 ಮಂದಿಯ ಮನವೊಲಿಸುವವರ್ಯಾರು? ಅಥವಾ ಇಂತಿಷ್ಟೇ ಬಡ್ಡಿಸಮೇತ ಹಿಂತಿರುಗಿಸಬೇಕೆಂಬ ನಿರ್ಧಾರಕ್ಕೆ ಕೋರ್ಟು ಬರುತ್ತಾ? ಅದಕ್ಕೂ ಮುನ್ನ ಶಾಸ್ತ್ರಿಯೇ ಇವರೆಲ್ಲರ ಮನವೊಲಿಸುತ್ತಾನಾ? ಗೊತ್ತಿಲ್ಲ. ಒಂದಂತೂ ಸತ್ಯ. ವಂಚಕ ವೃತ್ತಾಂತವೊಂದರ ಕೊನೆಯ ಅಧ್ಯಾಯ ಶುರುವಾಗಿದೆ. 40 ಕೋಟಿಯ ಶಾಸ್ತ್ರಿಯ ಅವಶೇಷದಂತಿರುವ ನಿಧಿ ಕೋರ್ಟ್ ಕಸ್ಟಡಿಯಲ್ಲಿ ಭದ್ರವಾಗಿದೆ. ಕೊಡಬೇಕಾದ 29 ಕೋಟಿಯ ಲೆಕ್ಕವೂ ಇದೆ. ಇದರಲ್ಲಿ ಯಾರಿಗೆಷ್ಟೇ ಕೊಟ್ಟರೂ ಒಂದಷ್ಟು ದುಡ್ಡು ಶಾಸ್ತ್ರಿಗೆ ಸಿಕ್ಕುತ್ತದೆ. ಜೊತೆಗೆ ಆತ ಋಣಮುಕ್ತನಾದಂತೆಯೂ ಆಗುತ್ತದೆ.

ಅದಕ್ಕಿನ್ನೂ ಗಳಿಗೆ ಕೂಡಿಬರಬೇಕಷ್ಟೆ.

ಸೋವಿಯತ್ ಪತನಕ್ಕೀಗ 20 ವರ್ಷ


ಜಗತ್ತನ್ನು ತಲ್ಲಣಗೊಳಿಸಿದ ಮೂರು ದಿನಗಳು !

ಅದು 1991ರ ಆಗಸ್ಟ್ 19. ಬೆಳಗಿನ ಜಾವವೇ ಸೋವಿಯತ್ ಯೂನಿಯನ್‌ನ ರಾಜಧಾನಿ ಮಾಸ್ಕೋ ನಗರಕ್ಕೆ ಶಸ್ತ್ರ ಸಜ್ಜಿತವಾದ ಸೇನಾ ತುಕಡಿಗಳು, ಟ್ಯಾಂಕುಗಳು ಆಗಮಿಸಿ ಕ್ರೆಮ್ಲಿನ್ ಕಡೆಗೆ ಮುನ್ನುಗ್ಗಲಾರಂಭಿಸಿದವು. ಕೆಲವೇ ಗಂಟೆಗಳಲ್ಲಿ ಸೋವಿಯತ್ ಯೂನಿಯನ್‌ನ ಅಧ್ಯಕ್ಷ ಹಾಗೂ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಮಿಖಾಯಿಲ್ ಗೋರ್ಬಚೆವ್ ಅವರು ಅನಾರೋಗ್ಯದ ನಿಮಿತ್ತ ಸೋವಿಯತ್ ಯೂನಿಯನ್ ಅಧ್ಯಕ್ಷರಾಗಿ ಮುಂದುವರೆಯುವುದಿಲ್ಲ ಎಂದು ಮಾಧ್ಯಮಗಳು ಪ್ರಸಾರ ಮಾಡಲಾರಂಭಿಸಿದವು. ಆ ಸ್ಥಾನವನ್ನು ಅದೇ ಪಕ್ಷದ ಇನ್ನೊಬ್ಬ ನಾಯಕ ಗೆನಡಿ ಯೆನಯೇವ್ ಅಲಂಕರಿಸದ್ದಾರೆಂದು ಸುದ್ದಿಗಳು ಬಿತ್ತರಗೊಂಡವು.



ಗೆನಡಿ ಯೆನಯೇವ್, ವಾಲೆಂಟಿನ್ ಪಹಲೊವ್, ವ್ಲಾದಿಮಿರ್ ಕ್ರುಕ್ಚೇವ್, ಡಿಮಿಟ್ರಿ ಯಹಜೊವ್, ಬೋರಿಸ್ ಪಾಗೋ, ಒಲೆಗ್ ಬಕ್ಲಾನೊವ್ ಮತ್ತು ವ್ಯಾಸಿಲಿ ಸ್ಟಾರೊಡುಬ್ಸ್ಟೇವ್ ಎಂಬ ಎಂಟು ಸೋವಿಯತ್ ನಾಯಕರು (ಗ್ಯಾಂಗ್ ಆಫ್ ಏಟ್) ಕೂಟವೊಂದನ್ನು ರಚಿಸಿಕೊಂಡು ಕ್ಷಿಪ್ರ ಕಾರ್ಯಾಚರಣೆಯ ಮೂಲಕ (ಕೂಪ್) ಸೋವಿಯತ್ ಯೂನಿಯನ್ ಅಧಿಕಾರವನ್ನು ಗೋರ್ಬಚೇವ್‌ರಿಂದ ಕಿತ್ತುಕೊಳ್ಳಬೇಕೆಂದು ವ್ಯವಸ್ಥಿತವಾದ ಯೋಜನೆಯನ್ನು ರೂಪಿಸಿಕೊಂಡಿದ್ದರು. ಇದಕ್ಕೆ ಗೆನಡಿ ಯನಯೇವ್ ನೇತೃತ್ವ ವಹಿಸಿದ್ದ. ಪ್ರಜಾತಂತ್ರ ಮತ್ತು ಸ್ವಾತಂತ್ರ್ಯಗಳ ಬಗ್ಗೆ ಪುಂಖಾನುಪುಂಖವಾಗಿ ಮಾತಾಡುತ್ತಿದ್ದರಿಂದ ತಮ್ಮ ಯೋಜನೆಗೆ ಸೋವಿಯತ್ ಸೈನ್ಯ ಮತ್ತು ಜನಸಮುದಾಯದಿಂದ ತಮಗೆ ಅಪಾರ ಬೆಂಬಲ ಸಿಗುತ್ತದೆಂದು ಅವರು ನಿರೀಕ್ಷಿಸಿದ್ದರು. ಆದರೆ ಆಗಿದ್ದೆಲ್ಲಾ ಅದಕ್ಕೆ ವ್ಯತಿರಿಕ್ತವಾಗಿಯೆ.

ಯೋಜನೆಯಂತೆ ಮಿಖಾಯಿಲ್ ಗೋರ್ಬಚೇವ್ ಅವರನ್ನು ಗೃಹಬಂಧನದಲ್ಲಿಟ್ಟು ಅವರ ಆರೋಗ್ಯ ಚೆನ್ನಾಗಿಲ್ಲದ ಕಾರಣ ಅವರು ಸೋವಿಯತ್ ಅಧ್ಯಕ್ಷರಾಗಿ ಮುಂದುವರೆಯುವುದಿಲ್ಲ ಎಂದು ಪ್ರಚಾರ ಮಾಡಿದರು. ಸೈನ್ಯ ಮಾಸ್ಕೋವನ್ನು ಮುತ್ತಿತು. ಕೂಡಲೇ ಸೋವಿಯತ್ ಯೂನಿಯನ್‌ನಾದ್ಯಂತ ಹೆಚ್ಚೂ ಕಡಿಮೆ ತುರ್ತುಪರಿಸ್ಥಿತಿಯನ್ನು ಘೋಷಿಸಿ ಮೂರಕ್ಕಿಂತ ಹೆಚ್ಚು ಜನ ಗುಂಪುಗೂಡಬಾರದು, ಸಾರ್ವಜನಿಕ ಸಭೆ ಸಮಾರಂಭ ನಡೆಸಕೂಡದು, ಯಾವುದೇ ಹಬ್ಬ, ಆಚರಣೆ ಅಥವಾ ಕ್ರೀಡಾಕೂಟಗಳು ನಡೆಯಕೂಡದು ಎಂಬ ಕಟ್ಟಾಜ್ಞೆ ಹೊರಬಿತ್ತು. ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದ ಸುದ್ದಿ ಮಾಧ್ಯಮಗಳ ಮೇಲೆ ಸಂಪೂರ್ಣ ನಿಯಂತ್ರಣ ಹೇರಲಾಯಿತು. ಸರ್ಕಾರಿ ನಿಯಂತ್ರಣದಲ್ಲಿರುವ ದೂರದರ್ಶನ, ರೇಡಿಯೋಗಳಲ್ಲಿ ಕೇವಲ ಮನರಂಜನೆ ಕಾರ್ಯಕ್ರಮಗಳನ್ನು ಮಾತ್ರ ಬಿತ್ತರಿಸಲಾಗುತ್ತಿತ್ತು. ವಾಸ್ತವದಲ್ಲಿ ಮಾಸ್ಕೋದಲ್ಲಿ ಏನು ನಡೆಯುತ್ತಿದೆ ಎಂಬುದು ಹೊರಗಿನ ಜಗತ್ತಿಗೆ ಗೊತ್ತಾಗಬಾರದೆಂಬ ಉದ್ದೇಶದಿಂದ ಆ ರೀತಿ ಮಾಡಲಾಗಿತ್ತು. ಗೆನಡಿ ಯೆನಯೇವ್ ನೇತೃತ್ವದಲ್ಲಿ ಸ್ಥಾಪನೆಯಾಗಿದ್ದ 'ತುರ್ತುಪರಿಸ್ಥಿತಿಯ ನಿಭಾವಣೆಗಾಗಿರುವ ರಾಜ್ಯ ಸಮಿತಿಯು (ಜಿಕೆಸಿಎಚ್‌ಪಿ)' ಅಧಿಕಾರವನ್ನು ಗೋರ್ಬಚೇವ್‌ನಿಂದ ಕಿತ್ತುಕೊಂಡು ಸೋವಿಯತ್ ಯೂನಿಯನ್ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು. ತಮ್ಮ ಕಾರ್ಯಾಚರಣೆಗೆ ಪ್ರಬಲ ಅಡ್ಡಿಯಾಗಬಹುದಿದ್ದ ನಾಲ್ವರು ನಾಯಕರನ್ನು ಬಂಧಿಸಿ ಸೆರಮನೆಗೆ ತಳ್ಳಿದರು. ಬೋರಿಸ್ ಎಲ್ಸಿನ್ ಅವರನ್ನೂ ಕೂಡ ಎರಡು ದಿನ ಮುಂಚಿತವಾಗಿಯೇ ಬಂಧಿಸಬೇಕೆಂದು ಯೋಜನೆ ಹಾಕಿಕೊಂಡಿದ್ದರು. ಆದರೆ, ಹಾಗೆ ಮಾಡಲಿಲ್ಲ. ಕೊನೆಗೆ ಅದೇ ಅವರಿಗೆ ಮುಳುವಾಗಿಬಿಟ್ಟಿತು.



ಆ ದಿನ ಸಂಜೆ 5 ಗಂಟೆಗೆ 'ಕೂಪ್ ನಾಯಕರು' ಪತ್ರಿಕಾಗೋಷ್ಠಿ ನಡೆಸಿದರು; ಯೆನಯೇವ್ ಮಧ್ಯದಲ್ಲಿ ನಿಂತಿದ್ದ. "ಭ್ರಾತೃ ಹತ್ಯೆ ಹಾಗೂ ಅಂತರ್ಯುದ್ಧದಿಂದ ಸೋವಿಯತ್ ಯೂನಿಯನ್‌ನನ್ನು ಉಳಿಸುವುದು ನಮ್ಮ ಉದ್ದೇಶ" ಎಂದು ಘೋಷಿಸಿದರು.

ಕೂಡಲೇ ರಂಗಪ್ರವೇಶ ಮಾಡಿದ ಬೋರಿಸ್ ಎಲ್ಸಿನ್ ಸೋವಿಯತ್ ಒಕ್ಕೂಟದ ಅಧಿಕಾರವನ್ನು ಹಿಡಿಯುವುದಕ್ಕೆ ದುಷ್ಟಕೂಟ ಗೋರ್ಬಚೇವ್ ಅವರನ್ನು ಬಂಧಿಸಿ ಕೂಪ್ ನಡೆಸಿದೆ ಎಂದು ಘೋಷಿಸಿದರಲ್ಲದೇ ಗೋರ್ಬಚೆವ್ ಜನರನ್ನುದ್ದೇಶಿಸಿ ಮಾತನಾಡಬೇಕೆಂದು ಆಗ್ರಹಿಸಿದರು. ಆದರೆ ಕೂಪ್ ನಾಯಕರು "ಅವರಿಗೆ ಆರೋಗ್ಯ ಸರಿಯಿಲ್ಲ" ಎಂದು ಸ್ಪಷ್ಟನೆ ಕೊಟ್ಟರು. ಅಷ್ಟು ಹೊತ್ತಿಗಾಗಲೇ ಸೋವಿಯತ್ ಯೂನಿಯನ್‌ನಾದ್ಯಂತ ಜನರು ಕೂಪ್ ವಿರುದ್ಧ ದಂಗೆಯೆದ್ದಿದ್ದರು. ಇದನ್ನೇ ಚೆನ್ನಾಗಿ ಬಳಸಿಕೊಂಡ ಎಲ್ಸಿನ್ ಉಕ್ಕೇರಿ ಬರುತ್ತಿದ್ದ ಜನಪ್ರತಿಭಟನೆಗೆ ನಾಯಕತ್ವ ಕೊಟ್ಟರು. ಲೆನಿನ್‌ಗ್ರಾಡ್‌ನ ಮೇಯರ್ ಅನಾಟೊಲಿ ಸೊಬ್ಚಾಕ್ ಆಗಸ್ಟ್ 20ರಂದು ವಿಂಟರ್ ಪ್ಯಾಲೇಸ್ ಸ್ಕ್ವೇರ್‌ನಲ್ಲಿ ಸಾಮೂಹಿಕ ಪ್ರತಿಭಟನಾ ಪ್ರದರ್ಶನಕ್ಕೆ ಕರೆ ನೀಡಿದರು. ದಿಢೀರ್ ಅಧಿಕಾರಕ್ಕೆ ಬಂದ ಬಂದುಕೋರ ನಾಯಕರನ್ನು ಸೋಲಿಸುವುದಕ್ಕಾಗಿ ಐದು ಲಕ್ಷ ಜನರು ಈ ಐತಿಹಾಸಿಕ ತಾಣದತ್ತ ದೌಡಾಯಿಸಿದರು. ಅಂತಿಮವಾಗಿ ಕೂಪ್ ನಾಯಕರು ಹಿಂದೆ ಸರಿಯುವುದರೊಂದಿಗೆ ಮರುದಿನವೇ ಜಿಕೆಸಿಎಚ್‌ಪಿ ಅಧಿಕಾರದಿಂದ ಕೆಳಗಿಳಿಯಿತು. ಕಪ್ಪು ಸಮುದ್ರದಲ್ಲಿ ಗೃಹಬಂಧನದಲ್ಲಿದ್ದ ಗೋರ್ಬಚೇವ್ ಮಾಸ್ಕೋಗೆ ಬಂದರು. ಅವರೂ ರಾಜೀನಾಮೆ ಕೊಡುವುದರೊಂದಿಗೆ ಸೋವಿಯತ್ ಒಕ್ಕೂಟದ ವಿಘಟನೆಯ ಪ್ರಕ್ರಿಯೇ ವೇಗ ಪಡೆದುಕೊಂಡಿತು.

ಎಂಬತ್ತರ ದಶಕದಲ್ಲಿ ಸೋವಿಯತ್ ಆರ್ಥಿಕತೆ ಸ್ಥಗಿತತೆಯ ಹಂತಕ್ಕೆ ಬಂದು ನಿಂತಿತ್ತು. 1985-1986ರಲ್ಲಿ ತೈಲ ಬೆಲೆ ತೀವ್ರ ಇಳಿದು ಹೋಗಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಪರಿಣಾಮವಾಗಿ ಸಾರ್ವಜನಿಕರು ದಂಗೆಯೇಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಆದಾಯ ಕೊರತೆ ಅಂತಿಮವಾಗಿ ದೇಶವನ್ನು ದಿವಾಳಿ ಏಳುವ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಹೊರಬರುವುದಕ್ಕಾಗಿ ಗೋರ್ಬಚೇವ್ ರಾಜಕೀಯ ಉದಾರೀಕರಣಕ್ಕೆ ಮುಂದಾದರು. ಪರಿಣಾಮವಾಗಿ ಹಿಂದಿನ ಏಕಪಕ್ಷ ವ್ಯಸ್ಥೆಗೆ ಮುಖಾಮುಖಿಯಾಗಿ ಅನೇಕ ಸಣ್ಣಪುಟ್ಟ ಪಕ್ಷಗಳು, ಆಂದೋಲನಗಳು ಹುಟ್ಟಿಕೊಂಡವು. ಸೋವಿಯತ್ ಒಕ್ಕೂಟದಲ್ಲಿ ಸದಸ್ಯ ರಾಷ್ಟ್ರಗಳಿಗೆ ಹೆಚ್ಚಿನ ಸ್ವಾತಂತ್ರ್ಯ, ಸ್ವಾಯತ್ತತೆ ಬೇಕೆಂಬ ಕೂಗೂ ಕೂಡ ವ್ಯಾಪಕವಾಗಿ ಕೇಳಿಬರಲಾರಂಭಿಸಿತ್ತು. ಪರಿಣಾಮವಾಗಿ ಗೋರ್ಬಚೇವ್ ರಾಜಕೀಯ ಪಕ್ಷಗಳ ಮೇಲಿದ್ದ ನಿಷೇಧವನ್ನು ತೆರವುಗೊಳಿಸಿ ನೇರ ಚುನಾವಣಾ ವ್ಯವಸ್ಥೆಯನ್ನು ಜಾರಿಗೆ ತಂದರು.

ಆದರೆ, ಇದಕ್ಕೆ ವಿರುದ್ಧವಾಗಿ ಸರ್ವಾಧಿಕಾರಿ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲು ಬಯಸಿದ್ದ ಯೆನಯೇವ್ ನೇತೃತ್ವದ ಗುಂಪು ಹೆಚ್ಚಿನ ಪ್ರಜಾತಂತ್ರ, ಸ್ವಾತಂತ್ರ್ಯಗಳ ಹೆಸರಿನಲ್ಲಿಯೇ ಗೋರ್ಬಚೇವ್ ಅವರನ್ನೇ ಅಧಿಕಾರದಿಂದ ಕಿತ್ತೆಸೆಯಲು ತಂತ್ರ ಹೂಡಿತು. ಆದರೆ, ಅದು ಸಾಧ್ಯವಾಗಲಿಲ್ಲ. ಕೂಪ್ ವಿಫಲವಾದ ತಕ್ಷಣವೇ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ದೇಶಗಳೆಲ್ಲವೂ ದಿಢೀರನೇ ಸ್ವಾತಂತ್ರ್ಯ ಘೋಷಿಸಿಕೊಳ್ಳಲಾರಂಭಿಸಿದವು. ಇದರೊಂದಿಗೆ ಜಗತ್ತಿನ ಮೂರನೇ ಒಂದು ಭಾಗವನ್ನು ಆಕ್ರಮಿಸಿದ್ದ ಬೃಹತ್ ಸಮಾಜವಾದಿ ವಲಯವೊಂದು ಪತನವಾದಂತಾಯಿತು.

ಈಗ ಆದಾಗಿ 20 ವರ್ಷಗಳಾದರೂ ಇಂದಿಗೂ ರಷ್ಯಾ ಸಂಪೂರ್ಣ ಪ್ರಜಾತಾಂತ್ರಿಕ ದೇಶವಾಗಿಲ್ಲ. ಬೋರಿಸ್ ಎಲ್ಸಿನ್ ಯುಗದಲ್ಲಿ ಅನೇಕ ಸ್ವತಂತ್ರ ರಾಜಕೀಯ ಪಕ್ಷಗಳು ತಲೆಯೆತ್ತಿ ಮಾಧ್ಯಮವು ಪ್ರಾಮುಖ್ಯತೆಯನ್ನು ಪಡೆದುಕೊಂಡಿತಾದರೂ ಈ ಬದಲಾವಣೆಯೂ ಅಲ್ಪಾಯುಷಿಯಾಗಿತ್ತು. ಯಾವುದೇ ರಾಜಕೀಯ ಸಿದ್ಧಾಂತದ, ಬದ್ಧತೆ ಮತ್ತು ಆಳ ಗ್ರಹಿಕೆ ಹೊಂದಿರದ ವ್ಲಾದಿಮಿರ್ ಪುಟಿನ್ ಯುಗ ಪ್ರಾರಂಭವಾಗುತ್ತಿದ್ದಂತೆಯೇ ರಷ್ಯಾದಲ್ಲಿ ಸಾಮಾಜಿಕ ನಿರ್ಮಾಣ ಹಿಮ್ಮುಖ ಚಲಿಸತೊಡಗಿತು. ಮುಕ್ತ ಮಾಧ್ಯಮದಿಂದ ಹಿಡಿದು ಪ್ರಜಾತಾಂತ್ರಿಕ ಚುನಾವಣೆಗಳ ತನಕ ಎಲ್ಲವನ್ನೂ ಪುಟಿನ್ ಮತ್ತು ಮೆಡ್ವಡೇವ್ ನಿಯಂತ್ರಿಸುತ್ತಾರೆ. ಎಷ್ಟರಮಟ್ಟಿಗೆ ಎಂದರೆ, ಇಂದು ಕ್ರೆಮ್ಲಿನ್ ಅನ್ನು ಸಂಪೂರ್ಣವಾಗಿ ಇವರೇ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ರಷ್ಯಾದ ಚುನಾವಣೆಗಳು ಕೇವಲ ಗಿಮಿಕ್ಕುಗಳು ಮಾತ್ರ. ಅದೂ ಅಲ್ಲದೇ ಮಾಜಿ ಸೋವಿಯತ್ ಒಕ್ಕೂಟದ ಸದಸ್ಯ ರಾಷ್ಟ್ರಗಳನ್ನೂ ಕೂಡ ಇಂದು ಪುಟಿನ್ ಮತ್ತವನ ಸಂಗಡಿಗರು ಸೃಷ್ಟಿಸಿರುವ ಜನರೇ ಆಳುತ್ತಿದ್ದಾರೆ. ಇತರರು ಆಡಳಿತ ಕೇಂದ್ರದ ಹತ್ತಿರ ಬರುವುದಕ್ಕೂ ಬಿಟ್ಟಿಲ್ಲ!

ಒಂದು ಕಾಲದಲ್ಲಿ ಅಮೆರಿಕದಂತಹ ದೈತ್ಯ ರಾಷ್ಟ್ರಕ್ಕೆ ಸಮನಾಗಿ ನಿಂತಿದ್ದ ರಾಷ್ಟ್ರ ಇದೀಗ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿಗೆ ಬಂದುನಿಂತಿದೆ. ಈಗ ರಷ್ಯಾವನ್ನು ಚೀನಾ, ಭಾರತ ಮತ್ತು ಬ್ರೆಜಿಲ್ ದೇಶಗಳಿಗೆ ಹೋಲಿಸಲಾಗುತ್ತಿದೆ. ಸೋವಿಯತ್ ಒಕ್ಕೂಟದಲ್ಲಿ ದೊಡ್ಡ ದೋಷಗಳಿದ್ದವು. ಅದು ಸರ್ವಾಧಿಕಾರೀ ಮನೋಭಾವ ತಾಳಿತ್ತು. ಆದರೂ, ಬಂಡವಾಳಶಾಹಿ ಜಗತ್ತಿಗಿಂತ ಹೇಗೆ ಹೆಚ್ಚಿನ ಅಭಿವೃದ್ಧಿ ಸಾಧಿಸಬಹುದು ಎಂಬುದುನ್ನು ಅದು ತೋರಿಸಿಕೊಟ್ಟಿತ್ತು. ಶ್ರೀಮಂತ ಮತ್ತು ಬಡವರಿಗೆ ಹೆಚ್ಚಿನ ಅಂತರವಿಲ್ಲದ ಅರ್ಥ ವ್ಯವಸ್ಥೆಯನ್ನು ಹುಟ್ಟುಹಾಕುವ ಹಾದಿ ತೋರಿತ್ತು. ಪ್ರತೀ ವ್ಯಕ್ತಿಗೆ ಉತ್ತಮ ಶಿಕ್ಷಣ ಮತ್ತು ಆರೋಗ್ಯ ಕೊಡುವುದು ಹೇಗೆ ಎಂಬುದನ್ನು ತೋರಿತ್ತು.

ಎರಡು ದಶಕಗಳ ತರುವಾಯವೂ ರಷ್ಯನ್ ಫೆಡರೇಷನ್‌ಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರಗಳ ಕನಸನ್ನು ಸಾಕಾರಗೊಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಸೋವಿಯತ್ ಒಕ್ಕೂಟ ಪತನವಾದದ್ದೇ ತಡ ಹಲವಾರು ಹೊಸ ಸ್ವತಂತ್ರ ಪ್ರಭುತ್ವಗಳು ಹುಟ್ಟಿಕೊಂಡವು. ಆ ದಿನದಿಂದ ಮೊದಲುಗೊಂಡು ಆ ಎಲ್ಲಾ ದೇಶಗಳು ತಮ್ಮದೇ ಆದ ದಿಕ್ಕಿನಲ್ಲೇ ಮುಂದೆ ಸಾಗುತ್ತಾ ಬಂದಿವೆ. ಇಂದಿಗೂ ಕೂಡ ಈ ಬಹುತೇಕ ದೇಶಗಳು ತಮ್ಮ ರಾಷ್ಟ್ರೀಯ ಅಸ್ಮಿತೆಯ ಬಗ್ಗೆ ಸ್ಪಷ್ಟತೆ ಹೊಂದಿಲ್ಲ; ಈ ದೇಶಗಳಲ್ಲಿನ ಬಹುತೇಕ ಜನರಿಗೆ ಇನ್ನೂ ರಾಷ್ಟ್ರೀಯತೆಯ ಭಾವ ಮೂಡಿಲ್ಲ. ಅವರಲ್ಲಿ ಬಹುತೇಕ ಜನರು ಇಂದಿಗೂ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ರಷ್ಯಾದೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ.

ಹಳೆಯ ಸೋವಿಯತ್ ಒಕ್ಕೂಟದ ರಾಷ್ಟ್ರಗಳನ್ನೆಲ್ಲಾ ಮತ್ತೆ ಒಗ್ಗೂಡಿಸಬೇಕೆಂಬ ಪ್ರಯತ್ನಗಳು ಈಗಲೂ ನಡೆಯುತ್ತಿವೆಯಾದರೂ ಸದ್ಯದಲ್ಲಿ ಅವು ಸಾಕಾರಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಅಮೆರಿಕ ನೇತೃತ್ವದ ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಜೇಷನ್ (ನ್ಯಾಟೋ) ರೀತಿಯಲ್ಲೇ ಅರ್ಮೇನಿಯಾ, ಬೆಲಾರಸ್, ಕಜಕಿಸ್ತಾನ್ ಕಿರ್ಗಿಸ್ತಾನ್, ತಜಕಿಸ್ತಾನ್ ಮತ್ತು ಉಜ್ಬೇಕಿಸ್ತಾನ್‌ಗಳನ್ನು ಒಳಗೊಂಡು ಕಲೆಕ್ಟಿವ್ ಸೆಕ್ಯೂರಿಟಿ ಟ್ರೀಟಿ ಆರ್ಗನೈಜೇಷನ್ (ಸಿಎಸ್‌ಟಿಒ) ಸ್ಥಾಪಿಸಬೇಕೆಂದು ರಷ್ಯಾ ಕಳೆದ ಹತ್ತು ವರ್ಷಗಳಿಂದಲೂ ಪ್ರಯತ್ನಿಸುತ್ತಿದೆ. ಆದರೆ ಯಾವುದೇ ಸಫಲತೆ ಕಂಡುಬಂದಿಲ್ಲ.

ಏನೇ ಆದರೂ ಸೋವಿಯತ್ ಪತನ ಕಳೆದ ಇಪ್ಪತ್ತನೇ ಶತಮಾನ ಕಂಡ ಅತ್ಯಂತ ದೊಡ್ಡ ರಾಜಕೀಯ ದುರಂತಗಳಲ್ಲೊಂದು ಎಂದರೆ ತಪ್ಪಾಗಲಾರದು.

• ಸಂಗೀತ

ರಾಮುಲು ಗೆಲ್ಲುತ್ತಾನಾ?


ಗಾಳಿಯೋ ಗಾಳಿಯೋ... ಆಹಾ ಗಣಿ ಗಾಳಿಯೋ...

ಕರ್ನಾಟಕದ ರಾಜಕಾರಣ ಇವತ್ತಿನ ಹಾಗೂ ಮುಂದಿನ ದಿಕ್ಕು ದೆಸೆಗಳನ್ನು ನಿರ್ಧರಿಸುವ ಚುನಾವಣೆ ಇದೆಂದು ಹೇಳಲಾಗುತ್ತಿದೆ. ನವೆಂಬರ್ 30 ರಂದು ನಡೆಯುವ ಮತದಾನ ಹಾಗೂ ಡಿಸೆಂಬರ್ 4 ರ ಫಲಿತಾಂಶಗಳೆರಡೂ ಕೂಡ ರಾಜ್ಯ ರಾಜಕೀಯದ ಶತ್ರುಮಿತ್ರರ ಕ್ಯಾಂಪ್‌ಗಳಲ್ಲಿ ಬದಲಾವಣೆ ತರುವುದು ಗ್ಯಾರಂಟಿ. ಆದರೆ ಮತದಾರ ಅಷ್ಟೊಂದು ಯೋಚಿಸಿ ಓಟು ಹಾಕಲಾರ. ಚುನಾವಣಾ ಫಲಿತಾಂಶದ ದೂರಗಾಮಿ ಪರಿಣಾಮ ಅದೇನೇ ಇದ್ದರೂ ಓಟು ಹಾಕುವವರಿಗೆ ತಮ್ಮ ಬೇಕು ಬೇಡಗಳು, ಜಾತಿ ಹಾಗೂ ಮನೆ ಬಾಗಿಲಿಗೇ ಬಂದು ಬೀಳುತ್ತಿರುವ ದುಡ್ಡೇ ಮುಖ್ಯವಾದಂತೆ ಕಾಣುತ್ತಿದೆ. ರೆಡ್ಡಿ-ರಾಮುಲು ಗ್ಯಾಂಗ್ ಅನ್ನು ಸೋಲಿಸಲು ಸಾಧ್ಯವಾಗಿರುವುದು ಕೇವಲ ಕಾನೂನಿಗೆ ಮಾತ್ರ. ಈ ಬಾರಿ ಬಳ್ಳಾರಿಯ ಜನ ಮನಸ್ಸು ಮಾಡಿದರೆ ರಾಜಕೀಯವಾಗಿಯೂ ರಾಮುಲುನನ್ನು, ಆ ಮೂಲಕ ರೆಡ್ಡಿಗಳ ಸೊಕ್ಕಿನ, ಲೂಟಿಯ, ದೌರ್ಜನ್ಯದ ಆಡಳಿತಕ್ಕೆ ತೆರೆ ಎಳೆಯಬಹುದು.

• ಪಾರ್ವತೀಶ

ಈ ಪುಂಡರ ನಾಯಕ ಈ ಬಾರಿ ಸೋತರೆ ಒಳ್ಳೆಯದು.

ಆದರೆ ಬಳ್ಳಾರಿಯ ಜನ ಈ ಬಾರಿ ರಾಮುಲುಗೆ ಮೂರು ನಾಮುಲು ಹಾಕಿ ಸೋಲಿಸುತ್ತಾರಾ?

ಈಗಿನ ಟ್ರೆಂಡ್ ನೋಡಿದರೆ ಮೇಲ್ನೋಟಕ್ಕೆ ಬಳ್ಳಾರಿಯಲ್ಲಿ ತ್ರಿಕೋನ ಸ್ಪರ್ಧೆ ಕಾಣುತ್ತಿದೆ. ರಾಮುಲುನ ಆರ್ಭಟ ಹುಮ್ಮಸ್ಸು ಮೊದಲಿನಂತಿಲ್ಲ, ಇನ್ನು ಕಾಂಗ್ರೆಸ್‌ನ ರಾಮಪ್ರಸಾದ್ ತನ್ನ ಕಣ್ಣ ಮುಂದಿರುವ ಅವಕಾಶಗಳನ್ನೆಲ್ಲಾ ಸರಿಯಾಗಿ ಬಳಸಿಕೊಂಡಿದ್ದೇ ಆದರೆ ಬಳ್ಳಾರಿಯಲ್ಲಿ ಹಾರಲಿರುವುದು ಕಾಂಗ್ರೆಸ್ ಬಾವುಟವೇನೆ.


ರಾಮಪ್ರಸಾದ್

ಇನ್ನು ಇಲ್ಲಿ ಬಿಜೆಪಿಯ ಅಧಿಕೃತ ಅಭ್ಯರ್ಥಿ ಗೆಲ್ಲುತ್ತಾನೆಂದು ಹೇಳಿದರೆ ಸ್ವತಃ ಗಾದಿಲಿಂಗಪ್ಪನೇ 'ಡೌಟಿದೆ ಸಾರ್' ಅನ್ನುವಂತಹ ಹತಾಶ ಪರಿಸ್ಥಿತಿ ಇದೆ. ಬಿಜೆಪಿಗಿಲ್ಲಿ ತಳಮಟ್ಟದ ಕಾರ್ಯಕರ್ತರೇ ಇಲ್ಲ, ಪ್ರಚಾರಕ್ಕೂ ಜನ ಸಿಗದೆ ಹೊರ ಜಿಲ್ಲೆಗಳಿಂದ ಜನ ಕರೆತಂದು ಎಲೆಕ್ಷನ್ ಮಾಡುತ್ತಿವೆ ಬಿಜೆಪಿಗಳು. ಹಾಗೆ ಜನರನ್ನು ಕರೆತರುವಾಗ ಚುನಾವಣಾ ಆಯೋಗದ ಕಣ್ಣುತಪ್ಪಿಸಲು 'ಮದುವೆ'ಗಾಗಿ ಬಳ್ಳಾರಿಗೆ ಬಂದಿವೆಂದು ಇವರು ಪೋಜು ಕೊಡಲು ಹೋಗಿ ಸಿಕ್ಕಿಬಿದ್ದು ಫಜೀತಿಯಾಗಿದೆ.

ಕಾಂಗ್ರೆಸ್‌ಗೆ ಇಲ್ಲಿ ಕಾರ್ಯಕರ್ತರಿಗೆ, ಲೀಡರ್‌ಗಳಿಗೆ ಕೊರತೆ ಇಲ್ಲ, ಇದ್ದರೆ ಕೊಂಚ ದುಡ್ಡಿನ ಸಮಸ್ಯೆ ಇರಬಹುದಷ್ಟೆ. ಇನ್ನು ಬಿಜೆಪಿಗೆ ಹಣ ಇದೆಯಾದರೂ ಜನ ಇಲ್ಲ, ಮತ್ತೊಂದೆಡೆ ರಾಮುಲುಗೆ ದುಡ್ಡು, ಕಾರ್ಯಕರ್ತರ ಪಡೆ ಎರಡೂ ಇದೆಯಾದರೂ ಜನ ರಾಮುಲುನನ್ನು ಆದೇಕೋ ಏನೋ ಪೂರ್ತಿಯಾಗಿ ನಂಬುತ್ತಿಲ್ಲ.

ಕರ್ನಾಟಕದ ರಾಜಕಾರಣ ಇವತ್ತಿನ ಹಾಗೂ ಮುಂದಿನ ದಿಕ್ಕು ದೆಸೆಗಳನ್ನು ನಿರ್ಧರಿಸುವ ಚುನಾವಣೆ ಇದೆಂದು ಹೇಳಲಾಗುತ್ತಿದೆ. ನವೆಂಬರ್ 30 ರಂದು ನಡೆಯುವ ಮತದಾನ ಹಾಗೂ ಡಿಸೆಂಬರ್ 4 ರ ಫಲಿತಾಂಶಗಳೆರಡೂ ಕೂಡ ರಾಜ್ಯ ರಾಜಕೀಯದ ಶತ್ರುಮಿತ್ರರ ಕ್ಯಾಂಪ್‌ಗಳಲ್ಲಿ ಬದಲಾವಣೆ ತರುವುದು ಗ್ಯಾರಂಟಿ. ಆದರೆ ಮತದಾರ ಅಷ್ಟೊಂದು ಯೋಚಿಸಿ ಓಟು ಹಾಕಲಾರ. ಚುನಾವಣಾ ಫಲಿತಾಂಶದ ದೂರಗಾಮಿ ಪರಿಣಾಮ ಅದೇನೇ ಇದ್ದರೂ ಓಟು ಹಾಕುವವರಿಗೆ ತಮ್ಮ ಬೇಕು ಬೇಡಗಳು, ಜಾತಿ ಹಾಗೂ ಮನೆ ಬಾಗಿಲಿಗೇ ಬಂದು ಬೀಳುತ್ತಿರುವ ದುಡ್ಡೇ ಮುಖ್ಯವಾದಂತೆ ಕಾಣುತ್ತಿದೆ.

ಕಾಂಗ್ರೆಸ್ ಸಾಧ್ಯತೆಗಳೇನು

ಬಿಜೆಪಿಯ ವಿಭಜನೆಯೇ ಕಾಂಗ್ರೆ ಕ್ಯಾಂಡಿಡೇಟ್‌ಗೆ ಪ್ರಧಾನ ಅನುಕೂಲವಾಗಿದೆ. ಕಳೆದ ಎಲೆಕ್ಷನ್‌ನಲ್ಲಿ ರಾಮುಲು 61 ಸಾವಿರ ಓಟು ಪಡೆದರೆ ಇದೇ ರಾಮಪ್ರಸಾದ್ ಕಾಂಗ್ರೆಸ್‌ನಿಂದ ನಿಂತು ಮೂವತ್ತೈದು ಸಾವಿರ ಓಟು ಗಳಿಸಿದ್ದರು. ಬಳ್ಳಾರಿ ಗ್ರಾಮಾಂತರದಲ್ಲಿ 1.72 ಲಕ್ಷ ಮತದಾರರಿದ್ದಾರೆ. ಈ ಬಾರಿ 1 ಲಕ್ಷದಿಂದ 1.20 ಲಕ್ಷದ ತನಕ ಮತದಾನವಾಗುವ ಅಂದಾಜಿದೆ. ಆದರೆ ತ್ರಿಕೋನ ಸ್ಪರ್ಧೆ ಇರುವ ಕಾರಣ ಒಟ್ಟು ನಲವತ್ತು ಸಾವಿರ ಓಟಿನ ಗಡಿ ದಾಟುವ ಅಭ್ಯರ್ಥಿಗೆ ಗೆಲ್ಲುವ ಛಾನ್ಸ್ ಹೆಚ್ಚಿದೆ. ರಾಮುಲುಗಿರುವ ಕಷ್ಟ ಏನೆಂದರೆ ಕಳೆದ ಬಾರಿಯ 61 ಸಾವಿರ ಓಟುಗಳು ಪೂರಾ ರಾಮುಲುನ ಓಟುಗಳೇನಾಗಿರಲಿಲ್ಲ. ಬಿಜೆಪಿಯದ್ದೂ ಕೊಂಚ ಪಾಲಿತ್ತು, ಅಲ್ಲದೆ 2009 ರ ಸಂಸತ್ ಚುನಾವಣೆ ನಡೆದಾಗ ರಾಮುಲೂನ ಸೋದರಿ ಜೆ. ಶಾಂತಾ ಸ್ವಲ್ಪದರಲ್ಲಿ ಸೋಲಿನಿಂದ ಬಚಾವಾಗಿದ್ದರು. ಅವತ್ತು ಆಕೆಗೆ ಸಿಕ್ಕಿದ್ದ ಲೀಡ್ ಜುಜುಬಿ ಒಂದು ಸಾವಿರ ಮಾತ್ರ. ಇನ್ನುಳಿದಂತೆ ಬಳ್ಳಾರಿಯ ಎಲೆಕ್ಷನ್‌ನ under current ನಂತೆ ಪ್ರವಹಿಸುತ್ತಿರುವ ಮಾತುಗಳು ಅನೇಕವಿದೆ.


ಗಾದಿಲಿಂಗಪ್ಪ

ಈ ಕ್ಷೇತ್ರವನ್ನು ಮೋಕಾ, ಫಿರ್ಕಾ ಹಾಗೂ ಕೌಲ್ ಬಜಾರ್ ಎಂದು ವಿಂಗಡಿಸಿಕೊಂಡು ನೋಡಿದರೆ ಜಾತಿ ವಿಭಜನೆಯು ಕ್ಷೇತ್ರವನ್ನು ಸೀಳಿಕೊಂಡು ಹೋಗಿರುವುದು ಕಾಣುತ್ತದೆ.

ಮೋಕಾ ಏರಿಯಾದಲ್ಲಿ ವಾಲ್ಮೀಕಿಗಳು ಮತ್ತು ಲಿಂಗಾಯತರು ವಿರುದ್ಧ ಗುಂಪುಗಳಲ್ಲಿ ಹರಿದು ಹೋಗಿದ್ದಾರೆ. ಫಿರ್ಕಾದಲ್ಲೂ ಲಿಂಗಾಯತ-ವಾಲ್ಮೀಕಿ ಜನಾಂಗದವರದ್ದೇ ನಿರ್ಣಾಯಕ ಸಂಖ್ಯೆ. ಇನ್ನುಳಿದಂತೆ ಕೌಲ್ ಬಜಾರ್ ಏರಿಯಾದಲ್ಲಿ ಮುಸ್ಲಿಮರು ಹಾಗೂ ಬಲಿಜರ ಸಂಖ್ಯೆ ಹೆಚ್ಚಿದೆ.

ಈ ಮೂರು ಕಡೆ ಕಾಂಗ್ರೆಸ್‌ಗೆ ತನ್ನದೇ ಓಟ್‌ಬ್ಯಾಂಕ್‌ಗಳಿವೆ. ಆದರೆ ಉಳಿದವರ ಓಟುಗಳು ರಾಮುಲು ಹಾಗೂ ಬಿಜೆಪಿ ಮಧ್ಯೆ ಹಂಚಿ ಹೋಗಲಿವೆ.

ಕಾಂಗ್ರೆಸ್ ಇದನ್ನೇ ನಂಬಿಕೊಂಡು ಕಾಯುತ್ತಿದೆ. ಆದರೆ ಕಾಂಗ್ರೆ ನಾಯಕರು ಕೊಂಚ ಚುರುಕಾಗಿ ಯೋಚಿಸಿದರೆ ಇಲ್ಲಿ ಅನೇಕ ಅವಕಾಶಗಳಿವೆ.

ಉದಾಹರಣೆಗೆ ಬಳ್ಳಾರಿಯಲ್ಲಿ ರೆಡ್ಡಿಗಳು ತಮ್ಮ ದೌಲತ್ತು ಮೆರೆಯಲು ಏರ್‌ಪೋರ್ಟ್‌ಗಾಗಿ ಸಿರವಾರ ಹಾಗೂ ಚಾಗನೂರಿನಲ್ಲಿ ಸಾವಿರಾರು ಎಕರೆ ಜಮೀನು ಸ್ವಾಧೀನಕ್ಕೆ ಕೈಹಾಕಿದ್ದರು. ಅದರ ವಿರುದ್ಧ ರೈತರು ಹೋರಾಡಿ ಲಾಠಿ ಚಾರ್ಜ್, ಜೈಲುವಾಸ ಎಲ್ಲಾ ಅನುಭವಿಸಿದ್ದಾರೆ. ಈ ರೈತರಿಗೆ ರಾಮುಲು ವಿರುದ್ಧ ಹಾಗೂ ಇಷ್ಟು ದಿನ ರೆಡ್ಡಿ-ರಾಮುಲು ದೌರ್ಜನ್ಯಗಳಿಗೆ ಬೆಂಬಲಿಸಿದ್ದ ಬಿಜೆಪಿ ವಿರುದ್ಧವೂ ಕೋಪವಿದೆ. ಕಾಂಗ್ರೆಗಳು ಇದನ್ನೆಲ್ಲಾ ಬಳಸಿದರೆ ಅನುಕೂಲವಾಗುವುದು ಖಚಿತ. ಅದೇ ರೀತಿ ಕೆ.ಕೆ. ಹಾಳ್‌ಬಳಿ ವಾಲ್ಮೀಕಿ ಜನಾಂಗದವರಿಂದ ನಡೆದ ಮೂವರು ಲಿಂಗಾಯತರ ಕೊಲೆ ಪ್ರಕರಣವೂ ಈಗ ಚುನಾವಣಾ ರಾಜಕೀಯಕ್ಕೆ ಬಳಕೆಯಾಗುತ್ತಿದೆ. ಜನ 'ಬಿಜೆಪಿನೂ ಬೇಡ ರಾಮುಲುನೂ ಬೇಡ' ಎನ್ನುತ್ತಿದ್ದಾರೆ.

ಕಾಂಗ್ರೆಸ್ ಜನರ ಸಿಟ್ಟನ್ನು ತನ್ನ ಅಭ್ಯರ್ಥಿಯ ಓಟಾಗಿ ಪರಿವರ್ತಿಸಬೇಕು ಅಷ್ಟೆ.

ಇನ್ನು ಸಿದ್ಧರಾಮಯ್ಯ ಬಿಟ್ಟರೆ ಇಲ್ಲಿ ಉಳಿದ ಕಾಂಗ್ರೆ ಲೀಡರ್‌ಗಳಿಗೆ ಅಷ್ಟೇನೂ ಕಿಮ್ಮತ್ತಿಲ್ಲ, ಆದರೂ ಕಾಂಗ್ರೆಸ್ ವ್ಯವಸ್ಥಿತ ಪ್ರಚಾರ ಕಾರ್ಯ ನಡೆಸುತ್ತಿದೆ.

ರಾಮುಲು ತಂತ್ರ, ಬಿಜೆಪಿ ಅತಂತ್ರ

ಒಂದು ವೇಳೆ ರಾಮುಲು ಬಿಜೆಪಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ನಾವೂ ರಾಜೀನಾಮೆ ನೀಡಿ ಪಕ್ಷ ಬಿಡುತ್ತೇವೆ ಅಂದಿದ್ದ ಬಳ್ಳಾರಿಯ ಕಾರ್ಪೊರೇಟರ್‌ಗಳು, ಜಿಲ್ಲಾ ಪಂಚಾಯತಿ, ತಾಲ್ಲೂಕು,


ಬಳ್ಳಾರಿಯಲ್ಲಿ ಬಿಜೆಪಿ ದಂಡ

ಬಿಜೆಪಿಗಳ ಮದುವೆ ಬಸ್ ಯಡ್ಡಿ weds ಶೋ...

ಪ್ರಚಾರದ ಕೆಲಸಕ್ಕೂ ಕಾರ್ಯಕರ್ತರಿರದೆ ಫಜೀತಿ ಪಡುತ್ತಿರುವ ಬಿಜೆಪಿಗಳು ಬಳ್ಳಾರಿಯ ಅಕ್ಕಪಕ್ಕದ ಜಿಲ್ಲೆಗಳಿಂದ ಎಂಟು ಬಸ್‌ಗಳಲ್ಲಿ ಕಾರ್ಯಕರ್ತರನ್ನು ಕರೆತಂದರಲ್ಲವೆ?

ಆ ಬಸ್‌ಗಳ ಮುಂದೂಗಡೆ ಕವಿತಾ ವೆಡ್ಸ್ ಸಂಜಯ್, ಗೀತಾ ವೆಡ್ಸ್ ರಾಜು... ಎಂಬ ನಾನಾ ಹೆಸರಿನ ಬೋರ್ಡ್‌ಗಳನ್ನು ನೇತು ಹಾಕಿಕೊಂಡು ಅವರೆಲ್ಲಾ ಬಂದಿದ್ದರು. ಚುನಾವಣಾ ಆಯೋಗದ ಕಣ್ಣು ತಪ್ಪಿಸಲು ಹಾಗೂ ಎಲೆಕ್ಷನ್ ಖರ್ಚಿನ ಲೆಕ್ಕ ಉಳಿಸಲು ಈ ತಂತ್ರ ಮಾಡಲಾಗಿತ್ತು.

ಆದರೆ ಈ ನಕಲಿ ಮದುವೆ ಜನ ರಾಮುಲು ಕಾರ್ಯಕರ್ತರ ಕೈಗೆ ಸಿಕ್ಕಿಬಿದ್ದರು. ಯಾರ ಮದುವೆ, ಛತ್ರ ಯಾವುದೆಂದು ಪೊಲೀಸರ ತನಿಖೆ ಶುರುವಾದಾಗ ಬೆಡ್ಡಿಗಳ ಬಣ್ಣ ಬಯಲಾಯಿತು.

ಈ ಘಟನೆ ಬಳ್ಳಾರಿ ತುಂಬ ಹರಿದಾಡಲು ಶುರುವಾದಾಗ ಜನ ಮಾತಾಡಿಕೊಂಡಿದ್ದು 'ಯಡ್ಡಿ weds ಶೋ...' ಅಂತಲೂ ಒಂದು ಬೋರ್ಡ್ ಹಾಕಿದ್ದಿದ್ದರೆ ಈ ಅಪಶಕುನ ಆಗುತ್ತಿರಲಿಲ್ಲ ಅಂತ!



...ನು ಪಂಚಾಯತಿ ಮೆಂಬರ್‌ಗಳ್ಯಾರು ರಾಜೀನಾಮೆ ಕೊಡಲಿಲ್ಲ.

ಅದೇ ರೀತಿ 'ರಾಮುಲುಗೆ ಎಲೆಕ್ಷನ್‌ನಲ್ಲಿ ಬೆಂಬಲಿಸಿದರೆ ಶಿಸ್ತುಕ್ರಮ ...ರಂಟಿ' ಅಂದಿದ್ದ ಬಿಜೆಪಿಯೂ ಇದುವರೆಗೂ ಯಾರ ವಿರುದ್ಧವೂ ...ಮ ತೆಗೆದುಕೊಳ್ಳಲು ಆಗಿಲ್ಲ.

ಅಂದರೆ ಈ ಎರಡೂ ಗುಂಪುಗಳಿಗೂ ಬಳ್ಳಾರಿಯಲ್ಲಿ ಇದ್ದದ್ದು ಒಂದೇ ...ಮೂಲದ ಬೆಂಬಲಿಗರ ಗುಂಪು. ಆದರೆ ಅವರಲ್ಲಿ ಹೆಚ್ಚಿನ ಜನ ಈಗ ...ರಾಮುಲು ಜೊತೆಯಲ್ಲಿದ್ದಾರೆ. ಕೆಲವರು ನೇರವಾಗಿ, ಉಳಿದವರು ...ಪರೋಕ್ಷವಾಗಿ!

ಹಾಲಿ ಬಳ್ಳಾರಿ ನಗರಪಾಲಿಕೆಯ ಬಿಜೆಪಿ ಮೆಂಬರ್‌ಗಳಾದ ಇಬ್ರಾಹಿಂ ...ಬಾಬು, ಬಡವರ ಪಕ್ಷದ ವಲಿ, ಗೋವಿಂದ, ಮೇಯರ್ ಪಾರ್ವತಿ, ...ಯ ಪತಿ ಇಂದುಶೇಖರ್ ಮುಂತಾದವರು ರಾಮುಲು ಪರ ನೇರವಾಗಿ ...ಸ ಮಾಡುತ್ತಿದ್ದಾರೆ. ಉಳಿದ ಕಾರ್ಪೊರೇಟರ್‌ಗಳು ಗಾದಿ ಲಿಂಗಪ್ಪನ ...ತೆ ಇರುವಂತೆ ನಟಿಸುತ್ತಾ ಒಳಗೊಳಗೇ ರಾಮುಲುಗೆ ...ವಾಗುತ್ತಿದ್ದಾರೆ. ಹೀಗೆ ಮಾಡುವ ಮೂಲಕ ಪಕ್ಷದ ಶಿಸ್ತುಕ್ರಮದಿಂದ ...ಪಾರಾದಂತೆಯೂ ಆಯಿತು. ಜೊತೆಗೆ ರಾಮುಲು ವಿಜಯಕ್ಕೆ ಹಾಗೂ ...ಜೆಪಿಯೊಳಗಿದ್ದುಕೊಂಡೇ ಗಾದಿ ಲಿಂಗಪ್ಪನನ್ನು ಫಿನಿಷ್ ...ಮಾಡಿದಂತೆಯೂ ಆಗುತ್ತದೆಂಬುದು ಅವರ ಲೆಕ್ಕಾಚಾರ. ಬಿಜೆಪಿಗಳಿಗೆ ...ರಾಮುಲು ಕ್ಯಾಂಪ್‌ನಲ್ಲಿ ಏನೇನಾಗುತ್ತಿದೆ ಎಂಬುದು ಸರಿಯಾಗಿ ...ಗೊತ್ತಾಗುತ್ತಿಲ್ಲ. ಆದರೆ ರಾಮುಲುಗೆ ಮಾತ್ರ ಇವತ್ತು ಬಿಜೆಪಿಯಲ್ಲಿ ...ಯಾರ್‍ಯಾರು ಎಲ್ಲೆಲ್ಲಿಗೆ ಹೋಗುತ್ತಿದ್ದಾರೆ, ಹಣ ಎಲ್ಲಿಂದ ಎಷ್ಟೆಷ್ಟು ಬರುತ್ತಿದೆ, ...ಯಾರ ಮೂಲಕ ಹಂಚಿಕೆಯಾಗುತ್ತಿದೆ ಎಂಬುದೆಲ್ಲಾ ಕರೆಕ್ಟಾಗಿ ಮಾಹಿತಿ ...ಸಿಗುತ್ತಿದೆ. ಬೂಡಾ ಅಧ್ಯಕ್ಷ ವಿನೋದ್ ಕುಮಾರ್, ಎಚ್‌ಆರ್‌ಜಿ ...ವಿಜಯ್, ಜೆಡಿಎಸ್‌ನ ನಾಯಕ ಅಜೀಜ್ ರಾಮುಲು ಪರವಾಗಿ ...ಖುಷಾಗಿ ಓಡಾಡುತ್ತಿದ್ದಾರೆ. ಜೊತೆಗೆ ಪಾಲಿಕೆ ಮೆಂಬರ್‌ಗಳಾದ ...ಪುರದ ಯಲ್ಲಪ್ಪ, ಅಂದರಾಳ್‌ನ ಸೀತಾರಾಂ ಹಾಗೂ ವಿದ್ಯಾನಗರದ ...ವೆಂಕಟೇಶ್ ಕೂಡ ರಾಮುಲು ಪರ ನಿಂತಿದ್ದಾರೆ. ಆ ಲೆಕ್ಕದಲ್ಲಿ ...ಹೇಳಬೇಕೆಂದರೆ ಗಾದಿ ಲಿಂಗಪ್ಪನ ಪರವಾಗಿ ಹೆಚ್ಚು ಲೀಡರ್‌ಗಳು ...ಶ್ರಮಿಸಿದ್ದಾರೆ. ಯಡ್ಡಿ-ಸದಾನಂದಗೌಡ, ಈಶ್ವರಪ್ಪ, ರೇಣುಕಾಚಾರಿ, ...ಶೋಭಾ ಹೀಗೆ ಡಜನ್‌ಗಟ್ಟಲೆ ಬಿಜೆಪಿ ನಾಯಕರು ಬಳ್ಳಾರಿಗೆ ಬಂದಿದ್ದಾರೆ. ...ಆದರೆ ಅವರ ಹತ್ತಿರ ತಳಮಟ್ಟದ ಕಾರ್ಯಕರ್ತರಿಲ್ಲ. ಅತ್ತ ರಾಮುಲು ... ಬೇರೆ ದೊಡ್ಡ ಲೀಡರ್‌ಗಳು ಯಾರೂ ಕಾಣುತ್ತಿಲ್ಲ. ರಾಮುಲುನೇ ...ಗೆ ಏಕೈಕ ಲೀಡರ್. ಉಳಿದಂತೆ ಸಂಸದೆ ಶಾಂತ, ಫಕೀರಪ್ಪ, ...ಶಾಸಕರಾದ ಸುರೇಶ್, ಸೋಮಶೇಖರ್ ರೆಡ್ಡಿ ಇದ್ದೇ ಇದ್ದಾರೆ. ಜೊತೆಗೆ ...ಬಿ ...ಮಾಡುವಷ್ಟು ...ರ್ಯಕರ್ತರು ...ರಾಮುಲು ...ಜೊತೆಗಿದ್ದಾರೆ.

... ಬಿಜೆಪಿಗೆ ದೊಡ್ಡ ...ಸ್ಯೆ ಅಂದರೆ ...ನೆ. ಆದರೆ ...ಕರ ಬಾಬು ...ಬಲ ಬಿಜೆಪಿ ...ಳಿಗೆ ...ದಾನದಂತೆ ...ದಿದೆ.

... ರಾಮುಲುನನ್ನು ...ಜಕೀಯವಾಗಿ ...ವರೆಗೂ ...ರೂ ಕಟ್ಟಿಹಾಕಲು ...ಲ್ಲ. ತನ್ನ ...ವಮಾನದ ...ಟ್ಟಮೊದಲ ...ಂಬ್ಲಿ ಎಲೆಕ್ಷನ್‌ನಲ್ಲಿ ...ತಿದ್ದನ್ನು ಬಿಟ್ಟರೆ ...ಲೇ ರಾಮುಲು ಎಂದೂ ಸೋತಿಲ್ಲ. ರೆಡ್ಡಿ-ರಾಮುಲು ಗ್ಯಾಂಗ್ ಅನ್ನು ...ಲಿಸಲು ಸಾಧ್ಯವಾಗಿರುವುದು ಕೇವಲ ಕಾನೂನಿಗೆ ಮಾತ್ರ.

... ಈ ಬಾರಿ ಬಳ್ಳಾರಿಯ ಜನ ಮನಸ್ಸು ಮಾಡಿದರೆ ...ಕೀಯವಾಗಿಯೂ ರಾಮುಲುನನ್ನು, ಆ ಮೂಲಕ ರೆಡ್ಡಿಗಳ ಸೊಕ್ಕಿನ, ...ಟಿಯ, ದೌರ್ಜನ್ಯದ ಆಡಳಿತಕ್ಕೆ ತೆರೆ ಎಳೆಯಬಹುದು.

...ಆದರೆ ...ರಾಮುಲು ಅಷ್ಟು ಸುಲಭವಾಗಿ ಮಣಿಯುವುದಿಲ್ಲ. ...ರೆಡ್ಡಿಗಳು ಅಷ್ಟು ಸಲೀಸಾಗಿ ನಿದ್ದೆ ಬಿಟ್ಟು ಮೇಲೆದ್ದೇಳುವುದೂ ...

ಯಾರೇ ಗೆಲ್ಲಲಿ- ಇನ್ಯಾರೇ ಸೋಲಲಿ


ಲಾಭ ಜೆಡಿಎಸ್‌ಗೆ!

ಇದೊಂದು ವಿಚಾರಕ್ಕೆ ದೇವೇಗೌಡರಿಗೆ 'ಶಭಾಸ್' ಅನ್ನಲೇ ಬೇಕು ನೋಡಿ.

ಬಳ್ಳಾರಿ ಉಪಚುನಾವಣೆಯಲ್ಲಿ ಶ್ರೀರಾಮುಲು ಗೆಲ್ಲಲಿ ಅಥವಾ ಬಿಜೆಪಿಯ ಗಾದಿ ಲಿಂಗಪ್ಪನೋ ಇಲ್ಲ ಕಾಂಗ್ರೆಸ್‌ನ ರಾಮ ಪ್ರಸಾದ್...... ಹೀಗೆ ಯಾರೇ ಗೆದ್ದರೂ ಅಂತಿಮವಾಗಿ ಅದರ ಲಾಭವಾಗುವುದು ಜೆಡಿಎಸ್‌ಗೆ!

ಆ ಲೆಕ್ಕದಲ್ಲಿ ಈಗಿನ ಬಳ್ಳಾರಿ ಎಲೆಕ್ಷನ್‌ಗೆ ಎರಡು ರಿಸಲ್ಟ್ ಇದೆ ಎನ್ನಬಹುದು. ಒಂದು ಫಲಿತಾಂಶವು ಡಿಸೆಂಬರ್ 4 ನೇ ತಾರೀಖು ಪ್ರಕಟವಾಗಲಿದೆ. ಇನ್ನೊಂದು ಡಿಸೆಂಬರ್ 4 ರ ನಂತರ ಪ್ರಕಟಗೊಳ್ಳಲಿರುವ ಫಲಿತಾಂಶ! ಕರ್ನಾಟಕದ ಮುಂದಿನ ರಾಜಕೀಯದಲ್ಲಿ ಅನೇಕ ರಾಜಕೀಯ ಮೈತ್ರಿ ಹಾಗೂ ಸರಸ ವಿರಸಗಳಿಗೆ ತಳಹದಿ ಹಾಕುವ ಫಲಿತಾಂಶ ಅದಾಗಲಿದೆ.

ಜನತಾ ದಳಕ್ಕೆ ಇದರ ಲಾಭ ಹೆಚ್ಚು ಸಿಗಲಿದೆ ಅನ್ನುವುದೇ ಈಗಿನ ಹೊಸ ವಿಚಾರ.



ತೂಕಡಿಸಿ ತೂಕಡಿಸಿ ತಂತ್ರ ಹೂಡಿದ ತಮ್ಮಾ...

ರಾಮುಲು ಬಿಜೆಪಿ ಟಿಕೆಟ್ ಬೇಡ ಅಂದಿದ್ದಾಕೆ?

ಕೇವಲ 'ಸ್ವಾಭಿಮಾನ' ಕ್ಯಾಗಂತೂ ಅಲ್ಲ, ರಾಮುಲು ಬಿಜೆಪಿಯಿಂದ ದೂರ ನಿಂತು ಸ್ವತಂತ್ರ ಅಭ್ಯರ್ಥಿಯಾಗಿರುವುದರ ಹಿಂದೆ ದೆಹಲಿ ಕಾಂಗ್ರೆಸ್ ನಾಯಕರ ಹುಕುಂಗಳೂ ಕೆಲಸ ಮಾಡಿರುವಂತೆ ಕಾಣುತ್ತಿದೆ. ಕರ್ನಾಟಕದಲ್ಲಿ ಬಿಜೆಪಿ ಬಲಿಷ್ಠಗೊಳ್ಳಲು ಸಾಕಷ್ಟು ದುಡ್ಡು ಬೆವರು ಸುರಿಸಿದ ರೆಡ್ಡಿ ಗ್ಯಾಂಗ್ ಈಗ ಸಿಬಿಐ ಬಲೆಯಲ್ಲಿ ಸಿಕ್ಕು ಬಿದ್ದಿದೆ. ಸಿಬಿಐ ಕೇಂದ್ರ ಸರ್ಕಾರದ ಹತೋಟಿಯಲ್ಲಿದ್ದರೂ, ಈಗ ಸ್ವತಂತ್ರವಾಗಿ ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದೇ ನಂಬೋಣ. ಆದರೆ **enforcement Directorate**, ಫೇರಾ ಕಾಯ್ದೆ ಉಲಂಘನೆಗಳೆಲ್ಲಾ ನೇರವಾಗಿ ಕೇಂದ್ರ ಹಣಕಾಸು ಇಲಾಖೆಯ ಕಂಟ್ರೋಲಿನಲ್ಲಿದೆ. ಈ ಸಂಸ್ಥೆಗಳನ್ನು ಕಾಂಗ್ರೆಸ್ ಸರ್ಕಾರ ತನಗೆ ಬೇಕಾದಂತೆ ಬಳಸಬಹುದು. ಅದೇ ರೀತಿ ಜನಾರ್ಧನ ರೆಡ್ಡಿಯ ಓಎಂಸಿ ಹಾಗೂ ಎಎಂಸಿಗಳ ಗಣಿ ಅದಿರು ರಫ್ತಿನ ವಿಚಾರದಲ್ಲಿ ರೆಡ್ಡಿ ಮತ್ತವನ ಹೆಂಡತಿ ಲಕ್ಷ್ಮೀ ಅರುಣಾರನ್ನು ಹೊಸ ಕೇಸುಗಳಡಿ ಜೈಲಿಗೆ ಹಾಕಬೇಕೆಂದರೆ ಕಾಂಗ್ರೆಸ್‌ಗೆ ಅದೇನು ಕಷ್ಟವಲ್ಲ. ಆದರೆ ಅದರ ಬದಲಿಗೆ ಕಾಂಗ್ರೆಸ್ ಹೈಕಮಾಂಡ್ ಬೇರೊಂದು ಡೀಲ್ ಕುದುರಿಸಿರುವಂತೆ ಕಾಣುತ್ತಿದೆ.

ಅದು ಬಿಜೆಪಿಯನ್ನು ವೀಕ್ ಮಾಡುವ ಸುಪಾರಿ!

ಯಾವ ರಾಮುಲು ರೆಡ್ಡಿ ಪಡೆ ಬಿಜೆಪಿಗೆ ಶಕ್ತಿ ತುಂಬಿತ್ತೋ ಅದೇ ರಾಮುಲು- ರೆಡ್ಡಿಗಳೇ ಕರ್ನಾಟಕದ ಬಿಜೆಪಿಯನ್ನು ಮುರಿದು ಕೆಡವಲಿ ಎಂದು ಕಾಂಗ್ರೆ ಗುಟ್ಟಾಗಿ ಡೀಲ್ ಕುದುರಿಸಿಕೊಂಡಿರಲಿಕ್ಕೂ ಸಾಕು. ಹಾಗಾಗಿಯೇ ಬಿಜೆಪಿಗಳು 'ಟಿಕೆಟ್ ಕೊಡ್ತಿವಿ' ಎಂದು ಗೋಗರೆದು ಬೇಡಿಕೊಂಡರೂ ರಾಮುಲು ಮಾತ್ರ 'ಬೇಡ ನಡೀರಿ ಆಚೆಗೆ' ಅಂದಿದ್ದಾನೆ. ಚಂಚಲಗುಡಾ ಜೈಲಿನಲ್ಲಿರುವ ಜನಾರ್ಧನ ರೆಡ್ಡಿಯ ಬದುಕು ಹಾಗೂ ಇವರ ಉದ್ಯಮ ಸಾಮ್ರಾಜ್ಯದ ಭವಿಷ್ಯವೀಗ ಕಾಂಗ್ರೆಸ್ ಕೈಲಿದೆ. ಹಾಗಾಗಿ ರೆಡ್ಡಿ ಕೂಡ ಬಿಜೆಪಿಯಿಂದ ದೂರ ನಿಲ್ಲುವಂತೆ ರಾಮುಲುಗೆ ಹೇಳಿದ್ದಾನೆ. ನೆನ್ನೆ ಮೊನ್ನೆಯವರೆಗೂ ಗಾಯಗೊಂಡ ಹುಲಿಯಂತೆ ಆಡುತ್ತಿದ್ದ ಜಗನ ಮೋಹನ್ ರೆಡ್ಡಿಯೇ ಒಂದು ಕ್ಷಣ ಸಿಬಿಐ ತನಿಖೆಗೆ ಹೆದರಿ ಕೇಂದ್ರದ ಯುಪಿಎ ಸರ್ಕಾರಕ್ಕೆ ಬೆಂಬಲ ನೀಡಲು ನಾನು ರೆಡಿ ಅಂದಿದ್ದನ್ನು ಒಮ್ಮೆ ನೆನಪಿಸಿಕೊಳ್ಳಿ. ಜಗನ್ ಈಗ ಕಾಂಗ್ರೆಸ್ ವಿರುದ್ಧ ನಿದ್ದೆಯಲ್ಲೂ ಮಾತನಾಡುತ್ತಿಲ್ಲ. ಅಂತಾದ್ದರಲ್ಲಿ ಜನಾರ್ಧನರೆಡ್ಡಿ ಯಾಕೆ ಮಾತನಾಡುತ್ತಾನೆ. ಅದರ ಬದಲಿಗೆ ಅವರು ಕಾಂಗ್ರೆಸ್‌ನ ಕಡು ವೈರಿಗಳಾದ, ತಾವೇ ಇದ್ದು ಬಂದಿರುವ ಬಿಜೆಪಿ ವಿರುದ್ಧ ಈಗ ಯುದ್ಧ ನಡೆಸುತ್ತಿದ್ದಾರೆ.

ಹಾಲಿ ಬಳ್ಳಾರಿಯಲ್ಲಿ ರಾಮುಲು ವಿರುದ್ಧ ಕಾಂಗ್ರೆಸ್ ತನ್ನ ಕ್ಯಾಂಡಿಡೇಟ್ ಅನ್ನು ಹಾಕಿದೆ. ಆದರೆ ರಾಮುಲುಗೆ ಹಾಗೂ ಕಾಂಗ್ರೆಸ್‌ಗೂ ಕೂಡ ಡಿಸೆಂಬರ್ 4 ರ ರಿಜಲ್ಟ್ ನಂತರದ ರಾಜಕೀಯ ಬೆಳವಣಿಗೆಗಳ ಬಗ್ಗೆಯೇ ಜಾಸ್ತಿ ಗಮನವಿದೆ.

ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ ದೇವೇಗೌಡರು!

ಒಂದು ವೇಳೆ ರಾಮುಲು ಗೆದ್ದರೆ ಆತ ಬಿಜೆಪಿ ವಿರುದ್ಧ ಇನ್ನಷ್ಟು ಕೆಲಸ ಮಾಡಿ ಡ್ಯಾಮೇಜ್ ಮಾಡುತ್ತಾನೆ. ಆಕಸ್ಮಾತ್ ಸೋತರು ರಾಮುಲು ಏನು ಸುಮ್ಮನೆ ಕೂರಲಾರ. ಬಿಎಸ್‌ಆರ್ ಪಾರ್ಟಿ ಕಟ್ಟಿ ಕನಿಷ್ಠ ಆರು ಜಿಲ್ಲೆಗಳಲ್ಲಿ ತನ್ನ ಹೊಸ ಬಲಿಷ್ಠ ಜನ ಬೆಂಬಲ ಗಟ್ಟಿ ಮಾಡಿಕೊಳ್ಳುತ್ತಾನೆ. ಅಂದರೆ ಅಲ್ಲೆಲ್ಲಾ ಬಿಜೆಪಿ ದುರ್ಬಲಗೊಳ್ಳುವುದು ಖಚಿತ ತಾನೆ.

ಇವತ್ತಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೇರವಾಗಿ ರೆಡ್ಡಿ ಅಥವಾ ರಾಮುಲು ಜೊತೆ ರಾಜಕೀಯ ಸಂಬಂಧ ಬೆಳೆಸಿಕೊಳ್ಳುವುದು ಕೊಂಚ ಇಕ್ಕಟ್ಟಿನ ವಿಚಾರ.

ಇದನ್ನೂ ಲೆಕ್ಕಾಹಾಕಿರುವುದು ದೇವೇಗೌಡರೆ!

ಇದೆಲ್ಲದರ ಜೊತೆಗೆ ಡಿಸೆಂಬರ್ 4 ರ ಚುನಾವಣಾ ಫಲಿತಾಂಶದ ನಂತರದ ಲಾಭ ನಷ್ಟ ಲೆಕ್ಕಾ ಹಾಕಿದ ಗೌಡರು 'ಜೆಡಿಎಸ್ ಅಭ್ಯರ್ಥಿಯನ್ನು ಬಳ್ಳಾರಿಲಿ ನಿಲ್ಲಿಸಬೇಡ' ಎಂದು ಕುಮಾರಸ್ವಾಮಿಗೆ ಕಿವಿಮಾತು ಹೇಳಿದರು. ಇಂತಾ ವಿಚಾರಗಳಲ್ಲಿ ಕುಮಾರಸ್ವಾಮಿ ಬಹಳ ಚುರುಕು. ಗೌಡರ ಯೋಚನೆ, ಯೋಜನೆ' ಲೆಕ್ಕಾಚಾರಗಳೆಲ್ಲಾ ಕುಮಾರಸ್ವಾಮಿಗೆ ಮಿಂಚಿನ ವೇಗದಲ್ಲಿ ಅರ್ಥವಾಗುತ್ತದೆ. ಹಾಗಾಗಿ ಕುಮಾರಸ್ವಾಮಿ ಇನ್ನೂ ಒಂದೆರಡು ಹೆಜ್ಜೆ ಮುಂದೆ ಹೋಗಿ 'ನಾವು ಅಭ್ಯರ್ಥಿ ನಿಲ್ಲಿಸಲ್ಲ, ರಾಮುಲುಗೇ ನಮ್ಮ ಬೆಂಬಲ' ಅಂತ ನೇರವಾಗಿ ಹೇಳಿಕೊಂಡರು, ಇಲ್ಲಿ ದಳದವರಿಗೆ ಅನೇಕ ಲಾಭದ ಲೆಕ್ಕಾಚಾರಗಳಿವೆ. ಒಂದು ಬಿಜೆಪಿ ವಿರುದ್ಧದ ರಾಜಕೀಯ ಪಕ್ಷವಾಗಿ ಕೇವಲ ಕಾಂಗ್ರೆಸ್ ಮಾತ್ರವಲ್ಲ, ಜೆಡಿಎಸ್ ಕೂಡಾ ಇದೆ ಎಂದು ತೋರಿಸಿಕೊಳ್ಳುವುದು.

ಉತ್ತರ ಕರ್ನಾಟಕದಲ್ಲಿ ಯಡ್ಡಿ ನೇತೃತ್ವದ ಲಿಂಗಾಯತರ ಬಿಜೆಪಿ ವಿರುದ್ಧ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಜೆಡಿಎಸ್ ನಾಯಕತ್ವ ಒದಗಿಸುವುದು. ಈ ಉದ್ದೇಶಿತ ರಾಜಕೀಯ ಧ್ರುವೀಕರಣಕ್ಕೆ 45 ಲಕ್ಷದಷ್ಟು ಜನರಿರುವ ನಾಯಕ ಜನಾಂಗದವರನ್ನು ಸೆಳೆಯುವುದು. ಹಾಗಾಗಬೇಕೆಂದರೆ ಈಗಿನ ನಾಯಕ ಜನಾಂಗದ ಪವರ್‌ಫುಲ್ ಲೀಡರ್ ಶ್ರೀರಾಮುಲು ಜೊತೆ ಚೆನ್ನಾಗಿರಬೇಕೆಂಬುದೇ ದೇವೇಗೌಡರ ಲೆಕ್ಕಾಚಾರ. ನಾಲ್ಕನೇ ಕರ್ನಾಟಕದಲ್ಲಿ ಲಿಂಗಾಯತರು, ಒಕ್ಕಲಿಗರು ಹಾಗೂ ಕುರುಬರನ್ನು ಬಿಟ್ಟರೆ ನಾಲ್ಕನೇ ದೊಡ್ಡ ಸಮುದಾಯವಾಗಿ ನಾಯಕರಿದ್ದಾರೆ. ಇದುವರೆಗೂ ನಾಯಕನೇ ಇರದಿದ್ದ ನಾಯಕ ಜನಾಂಗದಲ್ಲಿ ಈಗ ಶ್ರೀರಾಮುಲುನೇ ಹೊಸ ನಾಯಕನಾಗಿ ಬೆಳೆದಿದ್ದಾನೆ. ಹಾಗಾಗಿ ಬಳ್ಳಾರಿಯಲ್ಲಿ ಜೆಡಿಎಸ್ ರಾಮುಲುನನ್ನೂ ಬೆಂಬಲಿಸುತ್ತಿದೆ.

ಇದೆಲ್ಲಾ ಏನೇ ಆಗಲಿ ಡಿಸೆಂಬರ್ 4 ರ ನಂತರದ ಲೆಕ್ಕಾಚಾರಗಳೆ ಎಲ್ಲರಿಗೂ ಮುಖ್ಯವಾಗಿದೆ. ಆದರೆ ಇವ್ಯಾವುವೂ ಊಹಾಪೋಹವಲ್ಲ.

ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ, ರಾಯಚೂರು, ಗದಗ, ಬಾಗಲಕೋಟೆಗಳಲ್ಲಿ ರಾಮುಲು ಮಾತು ನಡೆಯುತ್ತದೆ. ಇಲ್ಲೆಲ್ಲಾ ಮೇಲ್ಜಾತಿಯ ಅಂದರೆ ಲಿಂಗಾಯತರೇನಾದರೂ ಹೋಲ್‌ಸೇಲಾಗಿ ಯಡ್ಡಿಯ ಬಿಜೆಪಿ ಹಿಂದೆ ನಿಂತರೆ ಅಲ್ಲಿನ ಹಿಂದುಳಿದ ಜನಾಂಗಗಳೆಲ್ಲಾ ಬಿಜೆಪಿಯ ವಿರುದ್ಧದ ಬಣ ಸೇರುತ್ತಾರೆ. ಜೆಡಿಎಸ್‌ಗೆ ಅವಕಾಶವಿರುವುದೇ ಅಲ್ಲಿ. 2008 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯ ಕನಿಷ್ಠ ಒಂದು ಡಜನ್ ಶಾಸಕರು ಜುಜುಬಿ ಒಂದು ಸಾವಿರದಿಂದ ಮೂರು ಸಾವಿರ ಲೀಡ್‌ನಿಂದ ಮಾತ್ರ ಗೆದ್ದಿದ್ದರು. ಅದೂ ರೆಡ್ಡಿ ರಾಮುಲು ಬಿಜೆಪಿ ಜೊತೆಗಿದ್ದಾಗ. ಇನ್ನು ಮುಂದೆ ಬಿಜೆಪಿಗೆ ಅವರ ಹಣ ಬಲ ತೋಳ್ಬಲಗಳ ನೆರವೂ ಸಿಗುವುದಿಲ್ಲ ಎಂದಾದರೆ ಬಿಜೆಪಿಗೆ 20 ರಿಂದ 30 ಸೀಟುಗಳು ಲುಕ್ಸಾನಾಗುತ್ತವೆ. ಇವೆಲ್ಲಾ ಪೂರಾ ಕಾಂಗ್ರೆಸ್‌ಗಂತೂ ಹೋಗುವುದಿಲ್ಲ. ರಾಮುಲು ಮೂಲಕ ಜೆಡಿಎಸ್‌ಗೆ ಬರಬಹುದು ಅಥವಾ ರಾಮುಲುನ ಹೊಸ ರಾಜಕೀಯ ಪಕ್ಷದ ಪಾಲಾಗಲೂಬಹುದು.

ಇವೆರಡರಲ್ಲಿ ಯಾವುದೇ ಸಂಭವಿಸಿದರೂ ದಳಕ್ಕೆ ಅನುಕೂಲವೆ. ಮುಂದಿನ ಅಸೆಂಬ್ಲಿ ಎಲೆಕ್ಷನ್‌ಲ್ಲಿ ಕಾಂಗ್ರೆಸ್, ಬಿಜೆಪಿಗಳೆಂಬ ನ್ಯಾಷನಲ್ ಪಾರ್ಟಿಗಳ ಸರಿಸಮನಾಗಿ ನಿಂತು ಅಧಿಕಾರ ಹಂಚಿಕೊಳ್ಳುವ ಚಾನ್ಸ್ ಜೆಡಿಎಸ್‌ಗೂ ಸಿಗುತ್ತದಲ್ಲವೆ? ಆ ಲೆಕ್ಕದಲ್ಲಿ ಮುಂದಿನ ರಾಜ್ಯ ಸರ್ಕಾರ ಏಕ ಪಕ್ಷದ್ದೂ ಅಲ್ಲಾ ಎರಡು ಪಕ್ಷದ ಮೈತ್ರಿಯಿಂದಲೂ ಅಲ್ಲ. ಕನಿಷ್ಠ ಮೂರು ಪಕ್ಷಗಳ ಮೈತ್ರಿ ಕೂಟವಾಗಿ ರಚನೆಯಾಗಬೇಕಾಗುತ್ತದೆ.

ನೀವೇ ಗಮನಿಸಿ ನೋಡಿ.

ಈಗಿನ ಕಿತ್ತಾಟದಲ್ಲಿ ದುರ್ಬಲಗೊಳ್ಳುವುದು ನ್ಯಾಷನಲ್ ಪಾರ್ಟಿಗಳೇ ವಿನಃ ಪ್ರಾದೇಶಿಕ ಪಕ್ಷಗಳಲ್ಲ. ಇದೆಲ್ಲದರ ಹಿನ್ನಲೆಯಲ್ಲಿ ಹೇಳಬೇಕೆಂದರೆ ಬಳ್ಳಾರಿ ಚುನಾವಣೆಯಲ್ಲಿ ಯಾರೇ ಏಳಲಿ ಇನ್ಯಾರೆ ಬೀಳಲಿ. ಆದರೆ ಗೆಲ್ಲುವುದು, ಅದರ ಲಾಭವಾಗುವುದು ಜಾತ್ಯತೀತ ಜನತಾ ದಳಕ್ಕೇನೆ........!

ಅದೂ ಅಭ್ಯರ್ಥಿಯನ್ನೇ ಹಾಕದೆ ಚುನಾವಣೆಯಲ್ಲಿ ಭಾಗಿಯಾಗಿರುವವ ಪಕ್ಷಕ್ಕೆ!!

'ದೇವೇಗೌಡರು ಎಲ್ಲಿಗೆ ಹೋದರೂ ತೂಕಡಿಸುತ್ತಿರುತ್ತಾರೆ' ಎಂದು ಕೆಲವರು ಗೇಲಿ ಮಾಡುತ್ತಿರುತ್ತಾರೆ. ಯಾರ್‍ರಿ ಹಾಗಂದವರು?

ಸದಾ ಕಾಲ ತೂಕಡಿಸುವ ರಾಜಕಾರಣಿಗೆ ಈ ಪಾಟಿ ಲೆಕ್ಕಾಚಾರ ಹಾಕಲು ಸಾಧ್ಯನಾ ಹೇಳಿ?

ದೇವೇಗೌಡರಿಗೆ ಶಹಭಾಷ್ ಹೇಳಬೇಕು ಅನ್ನುವುದು ಇದಕ್ಕೇನೆ.



ಸಿಹಿ ಬೆಳೆದ ರೈತರಿಗೆ ಕಹಿ
ಕಾರ್ಖಾನೆ ಮಾಲೀಕರ ದೋಖಾ



ಕಬ್ಬಿನ ರೈತರ ಮೇಲೆ ಕೊಬ್ಬಿದ ಸಕ್ಕರೆ ಕಾರ್ಖಾನೆ ಪ್ರಭುಗಳು ಮತ್ತೊಂದು ಸುತ್ತಿನ ದೌರ್ಜನ್ಯಕ್ಕಿಳಿದಿದ್ದಾರೆ. ಬೆವರರಿಸಿ ಬೆಳೆದ ಕಬ್ಬಿಗೆ ಕನಿಷ್ಠ ಬೆಲೆಯ ಭರವಸೆಯಲ್ಲಿದ್ದ ಉತ್ತರ ಕರ್ನಾಟಕದ ರೈತರಿಗೆ ಆಘಾತ ನೀಡಿರುವ ನಿರಾಣಿ ಅಂಡ್ ಟೀಮಿನ ಕಾರ್ಖಾನೆ ಮಾಲೀಕರು ರೈತರ ಬದುಕನ್ನು ಬರ್ಬಾದುಗೊಳಿಸಬೇಕೆಂದೇ ತೀರ್ಮಾನಿಸಿದಂತಿದೆ.

ನ್ಯಾಯಯುತ ಬೆಲೆಗಾಗಿ ಸಂಘಟಿತ ಹೋರಾಟಕ್ಕಿಳಿದಿದ್ದ ರೈತರನ್ನು, ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಗೆ ಕರೆಸಿಕೊಂಡು ಪ್ರತಿ ಟನ್‌ಗೆ ಎರಡು ಸಾವಿರ ಬೆಲೆ ನೀಡುವುದಾಗಿ ಒಪ್ಪಿಕೊಂಡಿದ್ದ ಮಾಲೀಕರುಗಳು ಹಠಾತ್ತನೆ ಉಲ್ಟಾ ಹೊಡೆದಿದ್ದು, ಹಳೆಯ ಬೆಲೆ ಮೇಲೆ ಒಂದು ಪೈಸೆ ಕೂಡಾ ಕೊಡಲಾಗೋದಿಲ್ಲ ಎಂಬ ಹಠಕ್ಕೆ ಬಿದ್ದಿದ್ದಾರೆ. ಅಷ್ಟಕ್ಕೂ ಅವತ್ತಿನ ಸಭೆಯಲ್ಲಿ ಫೋನ್ ಮೂಲಕ ಎರಡು ಸಾವಿರ ಬೆಲೆ ನಿಗದಿ ಮಾಡಿದ್ದು ಖುದ್ದು ಸಿ.ಎಂ ಸಾಹೇಬರು. ಸಭೆ ನಡೆದ ಕೆಲವೇ ದಿನಗಳಲ್ಲಿ ರಿಜಿಸ್ಟ್ರೇಷನ್ನೇ ಇಲ್ಲದ ಉತ್ತರ ಕರ್ನಾಟಕ ಸಕ್ಕರೆ ಕಾರ್ಖಾನೆಗಳ ಮಾಲೀಕರು ಎಂಬ ಲೆಟರ್‌ಹೆಡ್‌ನಲ್ಲಿ ಎಲ್ಲಾ ಪತ್ರಿಕೆಗಳಲ್ಲೂ ಹಳೆಯ ಬೆಲೆ 1800ನ್ನೇ ನೀಡಲಾಗುತ್ತ ಎಂಬ ಜಾಹಿರಾತು ಅಚ್ಚಾಗುವಂತೆ ನೋಡಿಕೊಂಡಿರುವ ಮಾಲೀಕರುಗಳ ಡಬಲ್ ಗೇಮ್‌ನ ಹಿಂದೆ ನಿರಾಣಿಯ ನೆರಳು ನಿಚ್ಚಳವಾಗಿ ಕಾಣಿಸುತ್ತಿದೆ.


ಕೈಗೆಟುಕದ ದುಬಾರಿ ಗೊಬ್ಬರ, ಕೀಟನಾಶಕಗಳು ಹಾಗೂ ಕೈಕೊಡುವ ಕರೆಂಟುಗಳಿಂದ ತತ್ತರಿಸಿ ಹೋಗಿರುವ ರೈತ ಒಂದು ಟನ್ ಕಬ್ಬು ಬೆಳೆಯಬೇಕೆಂದರೆ ಬರೋಬ್ಬರಿ 2500 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತ ಅಂತ ಸರ್ಕಾರದ ವರದಿಯೇ ಹೇಳುತ್ತೆ, ಆತನ ಬೆವರಿಗೆ ಲಾಭದ ಘಮಲು ಅಡರಿಕೊಳ್ಳಬೇಕೆಂದರೆ ಏನಿಲ್ಲವೆಂದರೂ ಪ್ರತಿ ಟನ್‌ಗೆ 2800 ರಿಂದ 3000 ರೂಪಾಯಿಯಾದರೂ ಬೆಲೆ ಸಿಗಬೇಕು. ಆದರೆ ರೈತರಿಗೆ ಸಿಗುತ್ತಿರುವುದು ಬರೀ 1800 ಮಾತ್ರ. ಇತ್ತ ರೈತರು ಈ ಪರಿ ನಷ್ಟದಲ್ಲಿ ನರಳುತ್ತಿರಬೇಕಾದರೆ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮಾತ್ರ ಕೋಟಿ ಕೋಟಿ ಲಾಭ ಮಾಡಿಕೊಳ್ಳುತ್ತಲೇ ಹೆಜ್ಜೆಗೊಂದರಂತೆ ಹೊಸ ಹೊಸ ಕಾರ್ಖಾನೆಗಳನ್ನು ತೆರೆಯುತ್ತಿದ್ದಾರೆ. ಆದರೆ ಚೂರೇ ಚೂರು ಬೆಲೆ ಹೆಚ್ಚಿಸಿ ಎಂಬ ರೈತರ ಕೂಗು ಮಾತ್ರ ಸಕ್ಕರೆ ಧಣಿಗಳಿಗೆ ಕಾಲ ಕಸವಾಗಿ ಹೋಗಿದೆ.

ಸಕ್ಕರೆ ಮಾಫಿಯಾ

ಉತ್ತರ ಕರ್ನಾಟಕದಲ್ಲಿ ಮುರುಗೇಶ್ ನಿರಾಣಿ ನೇತೃತ್ವದಲ್ಲಿ ಸಕ್ಕರೆ ಮಾಫಿಯಾವೊಂದು ಹುಟ್ಟಿಕೊಂಡಿದೆ. ಉಮೇಶ್ ಕತ್ತಿ, ಸೋಮಯ್ಯ ಜಗದೀಶ ಗುಡಗಂಟಿ, ಸಿದ್ದು ನ್ಯಾಮಗೌಡ, ರಾಮಣ್ಣ ತಳೇವಾಡ, ಶ್ಯಾಮನೂರು ಶಿವ ಶಂಕರಪ್ಪ ಎಸ್.ಆರ್ ಪಾಟೀಲ್ ಮುಂತಾದವರಲ್ಲಿ ಕೆಲವು ಸಕ್ಕರೆ ಕಾರ್ಖಾನೆ ಮಾಲೀಕರು ಸ್ವಯಂ ಪ್ರೇರಿತವಾಗಿ ನಿರಾಣಿಯ ಸಿಂಡಿಕೇಟ್ ಸೇರಿಕೊಂಡಿದ್ದರೆ ಮತ್ತೆ ಕೆಲವರನ್ನು ನಿರಾಣಿ ಲೈಸೆನ್ಸು ಅದು ಇದು ಅಂತ ಬೆದರಿಸಿ ತನ್ನಂಕೆಯಲ್ಲಿಟ್ಟುಕೊಂಡಿದ್ದಾನೆ. ಮೊದಲಿಂದಲೂ ರೈತರ ಬಗ್ಗೆ ಕೆಟ್ಟದಾದ ಅಸಹನೆಯನ್ನು ಹೊಂದಿರುವ ಈತನಿಂದಾಗಿಯೇ ಇವತ್ತು ಸಕ್ಕರೆ ಬೆಳೆದ ರೈತರು ಪ್ರತಿಭಟನೆಗಿಳಿಯುವಂತಾಗಿದೆ.

ಕೋಟಿ ಕೋಟಿ ಬಾಚಿಕೊಳ್ಳುತ್ತಿರುವ ಈ ಮಾಲೀಕರುಗಳು ರೈತರಿಗೆ ಕಹಿ ಉಣ್ಣಿಸುತ್ತಿದ್ದಾರೆ. ಎತ್ತ ಕಡೆಗೂ ಸಾಕಾಗದ ಟನ್‌ಗೆ 1800 ರೂ. ಬೆಲೆಯನ್ನು ಪಡೆದು ರೋಸಿಹೋಗಿದ್ದ ರೈತರು ಬೆಲೆಯನ್ನು 200 ರೂಪಾಯಿ ಹೆಚ್ಚಿಸುವಂತೆ ಕೇಳಿಕೊಂಡಿದ್ದಕ್ಕೆ ನಿರಾಣಿ ಅಂಡ್ ಟೀಮು ಸರಿಯಾಗಿ ಸ್ಪಂದಿಸಿರಲೇ ಇಲ್ಲ. ತಾಳ್ಮೆ ಕಳೆದುಕೊಂಡ ರೈತರು ರಮೇಶ್ ಗಡದನ್ನವರ ಮುಂದಾಳತ್ವದಲ್ಲಿ ಪ್ರತಿಭಟನೆಗೆ ಮುಂದಾಗಿದ್ದರು. ಬಾಗಲಕೋಟೆ, ಬಿಜಾಪುರ, ಬೆಳಗಾವಿ ಜಿಲ್ಲೆಗಳ ರೈತರು ಹಲವಾರು ರೀತಿಯಲ್ಲಿ ಬೀದಿಗಿಳಿದಿದ್ದರು. ಆರಂಭದಲ್ಲಿ ಕಾರ್ಖಾನೆಗಳಿಗೆ ಕಬ್ಬು ಪೂರೈಸುವುದನ್ನು ನಿಲ್ಲಿಸಿದ್ದ ಅವರು ಮಾಲೀಕರ ಅಸಡ್ಡೆಯನ್ನು ಕಂಡು ಕಚೇರಿ ಕಾರ್ಖಾನೆಗಳ ಮುಂದೆಯೂ ಪ್ರತಿಭಟನೆ ಮಾಡಿದ್ದರು. ಈ ಹಾದಿಯಲ್ಲಿ ಅವರು ಪೊಲೀಸರಲ್ಲದೆ ಮಾಲೀಕರುಗಳ ಖಾಸಗಿ ಚೇಲಾಗಳೊಂದಿಗೂ ಘರ್ಷಣೆಗಿಳಿದಿದ್ದುಂಟು. ಇಷ್ಟಕ್ಕೆಲ್ಲ ಸೂತ್ರದಾರನಂತಿದ್ದ ಹಾಗೂ ರೈತರ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದ ನಿರಾಣಿಯ ಮನೆ ಮುಂದೆ ಧರಣಿ ನಡೆಸುವ ವೇಳೆಗಾಗಲೇ ತಾಳ್ಮೆ ಕಳೆದುಕೊಂಡಿದ್ದ ರೈತರು ನಿರಾಣಿಯ ಮನೆಯ ಆವರಣವನ್ನು ಧ್ವಂಸ ಮಾಡಲೂ ಮುಂದಾಗಿದ್ದರು.

ಅಲ್ಲಿಗೆ ರೈತರ ಆಕ್ರೋಶ ವಿಪರೀತವಾಗುತ್ತಿದೆ ಎಂಬ ಅರಿವು ಅವರಿಗೆಲ್ಲಾ ಖಾತ್ರಿಯಾಗಿತ್ತು, ರೈತರ ಹೋರಾಟದ ಬಿಸಿ ಹೆಚ್ಚು ಚುರುಕು ಮುಟ್ಟಿಸಿದ್ದು ಮಂತ್ರಿ ಗೋವಿಂದ ಕಾರಜೋಳನನ್ನು. ಏಕೆಂದರೆ ಮುರುಗೇಶ್ ನಿರಾಣಿಯ ಸಕ್ಕರೆ ಕಾರ್ಖಾನೆ ಇರುವುದು ಕಾರಜೋಳನ ಮತಕ್ಷೇತ್ರವಾದ ಮುಧೋಳ ವ್ಯಾಪ್ತಿಯಲ್ಲಿ, ಹಾಗಾಗಿ ನಿರಾಣಿ ವಿರುದ್ಧದ ರೈತರ ಆಕ್ರೋಶ ಕಾರಜೋಳನಿಗೂ ಶಾಪವಾಗುವ ಸಂಭವವಿತ್ತು. ಇದು ಹೀಗೇ ಮುಂದುವರೆದರೆ ಕೆಲ ತಿಂಗಳುಗಳಲ್ಲಿ ಎದುರಾಗಬಹುದಾದ ಎಲೆಕ್ಷನ್ನಿನಲ್ಲಿ ಜನ ತನಗೊಂದು ಗತಿ ಕಾಣಿಸಿ ಬಿಟ್ಟಾರೆಂಬ ಆತಂಕ ಆತನನ್ನು ಕಾಡುತ್ತಿತ್ತು. ನಿರಾಣಿ ಮನೆ ಮುಂದಿನ ಆಕ್ರೋಶ ಭರಿತ ಪ್ರತಿಭಟನೆಯಿಂದ ಚೂರೇ ಚೂರು ಮೆತ್ತಗಾದಂತಿದ್ದ ಮಾಲೀಕರನ್ನು,ಶಾಸಕ -ಮಂತ್ರಿಗಳನ್ನು ಹಾಗೂ ರೈತ ಮುಖಂಡರನ್ನು ಇದೇ ನವೆಂಬರ್ 12ನೇ ತಾರೀಖು ಬಾಗಲಕೋಟೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ಸೇರಿಸಿ ಸಮಸ್ಯೆ ಬಗೆಹರಿಸುವ ಪ್ರಯತ್ನವನ್ನು ಕಾರಜೋಳ ಮಾಡಿದ್ದರು. ಅವತ್ತು ನಿರಾಣಿ ನೇತೃತ್ವದ ಮಾಲೀಕರುಗಳು ಎರಡು ಸಾವಿರ ಕನಿಷ್ಠ ಬೆಲೆ ನೀಡಲು ಒಪ್ಪದಿದ್ದಾಗ ದೂರವಾಣಿ ಮೂಲಕ ಸಿ.ಎಂ ಸದಾನಂದಗೌಡರ ಮೂಲಕವೇ ರೈತರು ಕೇಳುತ್ತಿರುವ ಕನಿಷ್ಠ ಬೆಲೆ ನೀಡುವಂತೆ





ಹೇಳಿಸಲಾಗಿತ್ತು.

ನಿರಾಣಿ ಟೀಮು ಇಷ್ಟವಿಲ್ಲದಿದ್ದರೂ ಅದಕ್ಕೆ ಒಪ್ಪಿಕೊಂಡು ಹೊರಬಂದಿತ್ತಾದ್ದರಿಂದ ರೈತರೂ ಸಂಭ್ರಮ ಪಟ್ಟು ನಲಿದಾಡಿದ್ದರು. ಆದರೆ ಒಂದೆರಡು ದಿನದಲ್ಲೇ ರೈತರು ಕೇಳಿದಂತೆ 2000 ರೂ ನೀಡಲಾಗುವುದಿಲ್ಲ ಬದಲಾಗಿ ಹಳೆಯ 1800 ರೂಪಾಯಿಗಳಿಗೇ ನಿಮ್ಮ ಕಬ್ಬು ಕಳುಹಿಸಿ ಎಂಬ ಪತ್ರಿಕೆ ಜಾಹೀರಾತು ಹೊರಡಿಸುವ ಮೂಲಕ ರೈತರ ಸಂಭ್ರಮವನ್ನು ಒಸಕಿ ಹಾಕಿದ್ದಾರೆ.

ಲಾಭದ ಮಡು

ಅಸಲಿಗೆ ಸಕ್ಕರೆಯ ಕೈಗಾರಿಕೋದ್ಯಮ ಎಲ್ಲ ಕಡೆಯಿಂದಲೂ ಲಾಭವನ್ನು ಹೊತ್ತು ತರುವ ಉದ್ಯಮಗಳಲ್ಲೊಂದು. ತ್ಯಾಜ್ಯವೆಂದು ಬಿಸಾಕುವ ಸಿಪ್ಪೆ (ಭಗ್ಯಾಸ್)ಯೇ ಸಾವಿರಾರು ರೂಪಾಯಿಯ ವಹಿವಾಟು ನಡೆಸಬಲ್ಲುದು. ಒಂದು ಟನ್ ಕಬ್ಬಿನಿಂದ ಕಡಿಮೆ ಎಂದರೂ 120 ಕೆ.ಜಿ ಸಕ್ಕರೆಗೆ ಮೋಸವಿಲ್ಲ, ಸದ್ಯದ ಬೆಲೆ ನೋಡಿಕೊಂಡರೆ ಅಷ್ಟಕ್ಕೆ 3000 ರೂಪಾಯಿ ಮಾಲೀಕರ ಅಕೌಂಟು



ಸೇರುವುದು ಖಾತ್ರಿ. ಇನ್ನು ಒಂದು ಟನ್‌ಗೆ ದೊರಕುವ 330 ಕೆ.ಜಿ ಭಗ್ಯಾಸ್‌ಗೆ 660ಕ್ಕೂ ಹೆಚ್ಚಿನ ಬೆಲೆ ಸಿಗುತ್ತೆ, ಸಕ್ಕರೆಯ ಪಾಕ ತೆಗೆದು ಉಳಿಯುವ ಮತ್ತೊಂದು ಬೈಪ್ರೊಡಕ್ಟ್ ಮೊಲ್ಯಾಸಿಸ್ ಮದ್ಯ ತಯಾರಿಕೆಯಲ್ಲಿ ತುಂಬಾ ಅವಶ್ಯಕ. ಒಂದು ಟನ್ ಕಬ್ಬಿನಿಂದ 40 ಕೆ.ಜಿ ಮೊಲ್ಯಾಸಿಸ್ ಪಡೆಯಬಹುದಾಗಿದೆ. ಇದರ ಮಾರ್ಕೆಟ್ ಬೆಲೆಯೂ 120 ರೂಪಾಯಿಗಿಂತ ಕಮ್ಮಿ ಇಲ್ಲ, ಕಟ್ಟ ಕಡೆಗೆ ಉಳಿಯುವ ಪ್ರೆಸ್‌ಮಡ್ ಕೂಡಾ ಗೊಬ್ಬರ ತಯಾರಿಕೆಗೆ ಬೇಕಾಗುವುದರಿಂದ ಟನ್‌ಗೆ 250 ರೂ.ನಂತೆ ಅದನ್ನೂ ಮಾರಿಕೊಳ್ಳಬಹುದು. ಅತ್ತ ಇತ್ತ ಅಂತ ಲೆಕ್ಕ ಹಾಕಿದರೆ ಒಂದು ಟನ್ ಕಬ್ಬಿನಿಂದ ಮಾಲೀಕರಿಗೆ ಸಿಗೋದು ಬರೋಬ್ಬರಿ 3790 ರೂಪಾಯಿ.

ಇಷ್ಟೆಲ್ಲಾ ಲಾಭ ಇರುವ ಮಾಲೀಕರು ರೈತರಿಗೆ 200 ರೂಪಾಯಿ ಹೆಚ್ಚಿಗೆ ಕೊಡದೇ ಇರುವುದ[illegible] ಯಾವ ಕಾರಣವೂ ಇಲ್ಲ, ಕಳೆದ ತಿಂಗ[illegible] ನಾಲ್ಕನೇ ತಾರೀಖು ವಿಧಾನಸೌಧದಲ್ಲಿ ಸಿ.[illegible] ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರೇಣು[illegible] ಶುಗರ್ಸ್ ಗ್ರೂಪ್‌ನ ಮಾಲೀಕಳಾದ ವಿ[illegible] ಮುರುಕುಂಬಿ ರೈತರಿಗೆ ಪ್ರತಿ ಟನ್‌ಗೆ 23[illegible] ನೀಡಿದರೂ ಕಾರ್ಖಾನೆಗಳಿಗೆ ನಷ್ಟವಾ[illegible] ವುದಿಲ್ಲ ಎಂದು ಹೇಳಿದ್ದರು. ಅದೊಂ[illegible] ಕಾರಣಕ್ಕೆ ನಿರಾಣಿ ಹಾಗೂ ಉಮೇಶ [illegible] ಆಕೆಯ ಬಾಯಿ ಮುಚ್ಚಿಸಿದ್ದರು. ಮುರುಕುಂಬಿ ಮಾತಿನ[illegible] ಅರ್ಧ ಸತ್ಯವಿದ್ದುದು ಮಾತ್ರ ಸುಳ್ಳಲ್ಲ.

ನೋಟಿನ ಕೋಟಿ ವೀರರು

ಇಷ್ಟೆಲ್ಲಾ ಲಾಭದ ಮೂಲವಿರುವ ಸಕ್ಕರೆ ಕಾರ್ಖಾನೆ[illegible] ಮಾಲೀಕರುಗಳು ಬಾಚಿಕೊಳ್ಳುವ ಲಾಭಾಂಶವಾದರ[illegible] ಹುಬ್ಬೇರಿಸುವಂತಿವೆ. ಬಾಗಲಕೋಟೆ ಜಿಲ್ಲೆಯ ಸರಿಸುಮಾ[illegible] 13 ಲಕ್ಷ ಟನ್‌ಗೂ ಹೆಚ್ಚು ಕಬ್ಬನ್ನು ಅರೆಯುವ ಸಚ[illegible] ಮುರುಗೇಶ್ ನಿರಾಣಿಯ ನಿರಾಣಿ ಶುಗರ್ಸ್ ಹಾಗು ಸಮಿ[illegible] ವಾಡಿ ಶುಗರ್ಸ್ ಕಾರ್ಖಾನೆಗಳು ವರ್ಷಕ್ಕೆ 500 ಕೋಟಿ[illegible] ವ್ಯವಹಾರ ನಡೆಸುತ್ತವೆಯಾದರೂ ರೈತರಿಗೆ ಕೊಡುತ್ತಿರುವು[illegible] ಕೇವಲ 234 ಕೋಟಿಗಳನ್ನು ಮಾತ್ರ. ರೈತರು ಕೇಳುತ್ತಿರುವ[illegible] ಪ್ರತಿ ಟನ್‌ಗೆ 2000 ನೀಡಿದರೂ ಈ ಮಾಲೀಕರುಗಳ[illegible] ಬಿಡುವುದು ಕೇವಲ ಹೆಚ್ಚುವರಿ 26 ಕೋಟಿಯಷ್ಟೆ. ಇದ[illegible] ನಂತರದ ಸಾಗಣೆ, ಸಕ್ಕರೆ ತಯಾರಿಕೆ, ತೆರಿಗೆ, ಸಾಲ ಅ[illegible] ಖರ್ಚುಗಳನ್ನು ಎತ್ತಿಟ್ಟರೂ ಬರೋಬ್ಬರಿ 150 ಕೋ[illegible] ಲಾಭಕ್ಕೆ ಮೋಸವಿಲ್ಲ.

ಇನ್ನು ಪ್ರತೀ ವರ್ಷ 10 ಲಕ್ಷ ಟನ್ ಕಬ್ಬು ಅರೆಯು[illegible] ಜಗದೀಶ ಗುಡಗಂಟಿಯ ಪ್ರಭುಲಿಂಗೇಶ್ವರ ಶುಗರ್ಸ್‌ನ 3[illegible] ಕೋಟಿ ವಹಿವಾಟಿನಲ್ಲಿ 180 ಕೋಟಿ ಮಾತ್ರ ರೈತ[illegible] ಸಂದಾಯವಾಗುತ್ತಿದೆ. ರೈತರ ಹೊಸ ಬೇಡಿಕೆಯನ್ನು ಮ[illegible] ದರೂ ಈ ಮಿತಿ 200 ಕೋಟಿಯನ್ನೂ ಮೀರುವುದಿ[illegible] ಮಾಜಿ ಕೇಂದ್ರ ಸಚಿವ ಸಿದ್ದು ನ್ಯಾಮಗೌಡರ ಜಮಖಂ[illegible] ಶುಗರ್ಸ್ ವರ್ಷಕ್ಕೆ 7 ಲಕ್ಷ ಟನ್ ಕಬ್ಬು ಖಾಲಿ ಮಾಡುವು[illegible] ಮೂಲಕ 265 ಕೋಟಿ ವಹಿವಾಟು ನಡೆಸಿದರೂ ರೈತ[illegible] ಅಂತ ಹೋಗುವುದು 126 ಕೋಟಿ ಮಾತ್ರ. ಟನ್‌ಗೆ 20[illegible] ರೂ. ಕೊಟ್ಟರೂ ಮಾಲೀಕರಿಗೆ ಐವತ್ತು ಕೋಟಿಗೂ ಮೀ[illegible] ಲಾಭ ಕಟ್ಟಿಟ್ಟ ಬುತ್ತಿ, ಇನ್ನುಳಿದಂತೆ ಸಣ್ಣ ಸಾಮರ್ಥ್ಯ[illegible] ರಾಮಣ್ಣ ತಾಳೇವಾಡ ಅಧ್ಯಕ್ಷನಾಗಿರುವ ರನ್ನ ಶುಗ[illegible] ಶ್ಯಾಮನೂರು ಶಿವಶಂಕರಪ್ಪನ ಐ.ಪಿ.ಎಸ್.ಸಿ ಹಾಗೂ ಎ[illegible] ಆರ್ ಪಾಟೀಲರ ಬೀಳಗಿ ಶುಗರ್ಸ್ ಎಲ್ಲವೂ 20 ರಿಂದ [illegible] ಕೋಟಿ ಲಾಭಗಳಿಸುತ್ತಿವೆ.

ಇಂತಹ ನೇರ ದಂಧೆಯಲ್ಲದೆ ಕಾಳ ದಂಧೆ ಮೂಲಕ[illegible] ಹಣ ಮಾಡುವ ದಾರಿ ಸಕ್ಕರೆ ಮಾಫಿಯಾ ಮಾಲೀಕರಿಗೆ[illegible] ಹೊಸದಲ್ಲ, ಸಾಲದಲ್ಲಿ ಹಣ ಉಳಿಸಿಕೊಳ್ಳುವುದು, ಕ[illegible] ತೂಕದಲ್ಲಿ ಕಡಿಮೆ ತೋರಿಸಿ ನಾಮ ಹಾಕುವು[illegible] ಉತ್ಪಾದನೆಯನ್ನೇ ಕಡಿಮೆ ತೋರಿಸಿ ಕಳ್ಳಸಂತೆಯಲ್ಲಿ ಸ[illegible]

ಮಾರಿಕೊಳ್ಳುವುದು, ಕಾರ್ಖಾನೆ ಹೆಸರಲ್ಲಿ ಸ[illegible] ತಂದು ಸ್ವಂತ ಆಸ್ತಿ ಮಾಡಿಕೊಳ್ಳುವುದು, ಸಕಾ[illegible] ಅಧಿಕಾರವನ್ನು ದುರುಪಯೋಗ ಪಡಿಸಿಕೊಂ[illegible] ಸಬ್ಸಿಡಿ ಗಿಟ್ಟಿಸಿಕೊಳ್ಳುವುದು, ಸರ್ಕಾರ ರೈತರಿಗೆ[illegible] ನೀಡುವ ಬೆಂಬಲ ಬೆಲೆಯನ್ನೇ ನುಂಗಿಹಾಕುವು[illegible] ಹೀಗೆ ವೆರೈಟಿ ವೆರೈಟಿ ಮಾರ್ಗಗಳೂ ಅವ[illegible] ತಿಳಿದಿದೆ. ಇಷ್ಟೆಲ್ಲಾ ಲಾಭ ಮಾಡಿಕೊಳ[illegible] ಮಾಲೀಕರುಗಳು ರೈತರಿಗೆ ಸೇರಬೇಕಾದ ನಿಯ[illegible] ದುಡ್ಡಿನ ವಿಚಾರದಲ್ಲಿ ಜಿದ್ದಿಗೆ ಬಿದ್ದಿರುವುದು ಅ[illegible] ದೌರ್ಜನ್ಯದ ದೋರಣೆಯನ್ನು ಬಿಚ್ಚಿಡುತ್ತದೆ. ಮತ್ತೂ ಒಂ[illegible] ಅಚ್ಚರಿಯ ಸಂಗತಿಯೆಂದರೆ ಸಣ್ಣದಾಗಿ ವಹಿವಾಟು ನಡೆಸ[illegible] ನ್ಯಾಮಗೌಡ, ಶ್ಯಾಮನೂರು, ಎಸ್.ಆರ್ ಪಾಟೀಲರಂತವ[illegible] ರೈತರಿಗೆ ಕನಿಷ್ಠ ಬೆಲೆ ನೀಡಲು ತಮ್ಮ್ಯಾವ ತಕರಾ[illegible] ಇಲ್ಲವೆಂದು ಹೇಳುತ್ತಿದ್ದಾರಾದರೂ, ಸಕ್ಕರೆ ಮಾಫಿಯ[illegible] ತಿಮಿಂಗಿಲಗಳಾದ ನಿರಾಣಿ, ಸೋಮಯ್ಯ, ಉಮೇಶ್ [illegible] ಮುಂತಾದವರೇ ರೈತರ ವಿರುದ್ಧ ಮಸಲತ್ತು ಮಾಡುತ್ತಿದ[illegible] ಸಿ.ಎಂ ಆದೇಶವನ್ನೇ ಧಿಕ್ಕರಿಸುವಷ್ಟು ಮಿತಿಮ[illegible] ಹೋಗಿರುವ ಇಂತಹ ರೈತವಿರೋಧಿ ವಂಚಕರ[illegible] ನಿಯಂತ್ರಿಸದಿದ್ದಲ್ಲಿ ನೇಗಿಲ ಯೋಗಿಯ ಸ್ಥಿತಿ ಮತ್ತ[illegible] ಭೀಕರವಾಗುವುದರಲ್ಲಿ ಅನುಮಾನವೇ ಇಲ್ಲ.


• ಮಹಾಲಿಂಗಪ್ಪ ಆಲಬಾ[illegible]

ಗಡದ್ ಎಂಬ ಆಶಾಕಿರಣ

ಉತ್ತರ ಕರ್ನಾಟಕದಲ್ಲಿ ಸೊರಗಿ ನಿಂತಿದ್ದ ರೈತ ಚಳವಳಿಗೆ ರಮೇಶ್ ಗಡದನ್ನವರ ಎಂಬ ಚೈತನ್ಯ ತುಂಬಿಕೊಳ್ಳುತ್ತಿದೆ. ರೈತಪರ ಕಾಳಜಿ ಹಾಗೂ ಸರಳ ಜೀವನದಿಂದಾಗಿ ಜನರಿಗೆ ಹತ್ತಿರವಾಗಿರುವ ರಮೇಶ್ 2004-05ರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸರ್ವಬಲ ಸಂಪನ್ನರಾಗಿದ್ದ ಬಿ.ಜೆ.ಪಿಯ ರಾಮಣ್ಣ ತಾಳೇವಾಡ ಹಾಗೂ ಕಾಂಗ್ರೆಸ್‌ನ ಶಿವಕುಮಾರ್ ಮಾಲಗಾನರನ್ನು ಸೋಲಿಸಿ ರೈತ ಸಂಘದ ಅಭ್ಯರ್ಥಿಯಾಗಿ ಗೆದ್ದಿದ್ದರು. ರೈತರಿಂದಲೇ ಹಣ ಸಂಗ್ರಹಿಸಿ, ಎತ್ತಿನ ಗಾಡಿಗಳಲ್ಲಿ ಪ್ರಚಾರ ಹೋಗಿದ್ದ ಗಡದನ್ನವರ ಸರಳತೆ ರೈತರ ಮನೆ ಮಾತಾಗಿ ಹೋಗಿತ್ತು. ಅಧಿಕಾರಸ್ಥ ಕಾರ್ಖಾನೆಗಳ ಮಾಲೀಕರ ಹಾಗೂ ಪ್ರಭಾವಿ ರಾಜಕಾರಣಿಗಳ ವಿರುದ್ಧ ತಿರುಗಿ ಬಿದ್ದಿರುವ ರೈತರಿಗೆ ಸದ್ಯ ರಮೇಶ್ ಗಡದನ್ನವರೇ ಶಕ್ತಿ, ಸ್ಪೂರ್ತಿಯಾಗಿದ್ದಾರೆ.

ರಕ್ಕಸ ಮಂತ್ರಿಗಳು

ಸಕ್ಕರೆ ಮಾಫಿಯಾದ ಅನಧಿಕೃತ ಡಾನ್‌ಗಳಂತಿರುವ ಮಂತ್ರಿಗಳಾದ ಮುರುಗೇಶ್ ನಿರಾಣಿ ಮತ್ತು ಉಮೇಶ್ ಕತ್ತಿ ಇತರೆ ಸಕ್ಕರೆ ಕಾರ್ಖಾನೆಯ ಮಾಲೀಕರುಗಳನ್ನೂ ತಮ್ಮ ಹದ್ದುಬಸ್ತಿನಲ್ಲಿಟ್ಟುಕೊಂಡಿದ್ದಾರೆ. ಈಗಾಗಲೇ ಬಂಡವಾಳ ಹೂಡಿಕೆ ಹೆಸರಿನಲ್ಲಿ ರೈತರ ಭೂಮಿಯ ಮೇಲೆ ವಕ್ರದೃಷ್ಟಿ ಬೀರಿರುವ ನಿರಾಣಿ ಬೇರೆ ಕಾರ್ಖಾನೆಗಳ ಮೇಲೂ ಒತ್ತಡ ತಂದು ರೈತರಿಗೆ ಸೂಕ್ತ ಬೆಲೆ ಸಿಗದಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ನಗ್ನ ಸತ್ಯ. ದಬ್ಬಾಳಿಕೆ, ದೌರ್ಜನ್ಯ, ಗೂಂಡಾಗಿರಿಯಿಂದಲೇ ಎತ್ತರಕ್ಕೇರಬಹುದೆಂಬ ಹುಂಬತನದಲ್ಲಿರುವ ಇವರು ರೈತರ ಪಾಲಿಗೆ ಅಕ್ಷರಶಃ ರಾಕ್ಷಸರಾಗಿದ್ದಾರೆ.



ಬದುಕು ಮತ್ತು ಬರಹದೆಡೆಗೆ ಪ್ರೀತಿ ಮೂಡಿಸಬಲ್ಲ ಕೃತಿ


ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

'ನಾನೇಕೆ ಬರೆಯುತ್ತೇನೆ?'

ಇದು ಕಳೆದ ನೂರು ವರ್ಷಗಳಲ್ಲಿ ಕನ್ನಡದ ಅನೇಕ ಲೇಖಕರು ತಮಗೆ ತಾವೇ ಹಾಕಿಕೊಂಡಿರುವ ಪ್ರಶ್ನೆ. ಬದುಕು ಕೊಡುವ ಸುಖ ಮತ್ತು ಯಾತನೆ ಎರಡನ್ನೂ ಪ್ರೀತಿಸಬಲ್ಲ ಲೇಖಕ ಅನೇಕ ಸಲ ತನ್ನ ಸ್ವಾರ್ಥಕ್ಕಾಗಿ ಬರವಣಿಗೆ ಮಾಡಿದರೂ ಅದು ಮತ್ತೊಬ್ಬರ ಕೈಸೇರಲಿ ಎಂಬ ಸಣ್ಣ ಆಸೆಯಿಂದಲೂ ಬರವಣಿಗೆ ನಡೆಸಿರುತ್ತಾನೆ. ಬರಹದ ಮೂಲಕ ತಾವೇನೋ ಅದ್ಭುತ ಸೃಷ್ಟಿ ಮಾಡುತ್ತಿದ್ದೇವೆಂಬ ಭ್ರಮೆಯಲ್ಲಿ ಬದುಕು ಮತ್ತು ವ್ಯಕ್ತಿತ್ವ ಟೊಳ್ಳು ಮಾಡಿಕೊಂಡು ನಾಶವಾದ ಅನೇಕರನ್ನು ನಾವು ಅವರ ಬರಹದ ಮೂಲಕವೇ ಕಂಡಿದ್ದೇವೆ.



'ನಿನ್ನ ಬದುಕಿನ ಒರತೆ ಎಷ್ಟು ಆಳದಿಂದ ಚಿಮ್ಮುತ್ತಿದೆ ಎನ್ನುವುದನ್ನು ಅರಿತುಕೊ. ಆ ಒರತೆಯ ಮೂಲದಲ್ಲಿಯೇ ನೀನು ಬರೆಯಬೇಕೋ ಎಂಬ ಪ್ರಶ್ನೆಗೂ ಉತ್ತರ ಸಿಗುತ್ತದೆ. ಬರೆಯದೆಯೂ ಬದುಕಬಹುದು ಅನ್ನಿಸಿದರೆ ಬರೆಯದಿರುವುದೇ ಒಳ್ಳೆಯದು. ಮತ್ತೊಂದು ಸೂಚನೆ- ಬೆಳೆಯುತ್ತಿರು, ಮೌನವಾಗಿ, ಪ್ರಾಮಾಣಿಕವಾಗಿ. ಹಾಗೆ ಬೆಳೆಯುತ್ತಿರುವಾಗ ಪೂರ್ಣ ಏಕಾಂತದಲ್ಲಿ ನಿನ್ನಂತರಂಗದ ಭಾವವು ಮಾತ್ರವೇ ನೀಡಬಹುದಾದ ಉತ್ತರವನ್ನು ಹೊರಜಗತ್ತಿನಿಂದ ಅಪೇಕ್ಷಿಸತೊಡಗಿದರೆ ಬೆಳವಣಿಗೆ ವ್ಯತ್ಯಾಸವಾಗುತ್ತದೆ, ಅಪಾಯಕ್ಕೀಡಾಗುತ್ತದೆ' ಇವು ರೈನರ್ ಮಾರಿಯಾ ರಿಲ್ಕ್ ತನ್ನ 'ಯುವ ಕವಿಗೆ ಬರೆದ ಪತ್ರ'ದಲ್ಲಿ ಬರವಣಿಗೆ ಕುರಿತು ಹೇಳುವ ಮಾರ್ಮಿಕ ಮಾತುಗಳು.

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಳ್ಳುವ 'ಕನ್ನಡ ಅಧ್ಯಯನ' ಎಂಬ ತ್ರೈಮಾಸಿಕಕ್ಕಾಗಿ 'ನಾನೇಕೆ ಬರೆಯುತ್ತೇನೆ?' ಎಂಬ ಪ್ರಶ್ನೆ ಕೊಟ್ಟು ಕನ್ನಡದ ಹಿರಿಕಿರಿಯ ಲೇಖಕರನ್ನೆಲ್ಲ ಆ ಪತ್ರಿಕೆಯು ಆಗಾಗ ಮಾತಿಗೆಳೆಯುತ್ತಿತ್ತು, ಹಾಗೇ ಪತ್ರಿಕೆಯಲ್ಲಿ ಪ್ರಕಟಗೊಂಡ ಅನೇಕ ಲೇಖನಗಳನ್ನು ಆಯ್ದು ಅದೇ ಹೆಸರಿನಲ್ಲಿ ಕತೆಗಾರ ಡಾ.ಅಮರೇಶ ನುಗಡೋಣಿ ಸೊಗಸಾದ ಪುಸ್ತಕವೊಂದನ್ನು ರೂಪಿಸಿದ್ದಾರೆ. ಬೇಂದ್ರೆ, ಶಂಬಾ ಜೋಶಿ, ಶ್ರೀರಂಗ, ಪು.ತಿ.ನ., ಅನಂತಮೂರ್ತಿ, ಲಂಕೇಶರಿಂದ ಹಿಡಿದು ಅರವಿಂದ ಮಾಲಗತ್ತಿ, ಬಸವರಾಜ ಕುಕ್ಕರಹಳ್ಳಿ, ಎಸ್.ಮಂಜುನಾಥರವರೆಗೆ ಒಟ್ಟು 27 ಲೇಖನಗಳು ಈ ಕೃತಿಯಲ್ಲಿವೆ.

'ನಾನೇಕೆ ಬರೆಯುತ್ತೇನೆ' ಎಂಬ ಪ್ರಶ್ನೆಯನ್ನೇ ಮುಖ್ಯವಾಗಿಟ್ಟುಕೊಂಡು ಬಹುತೇಕ ಇಲ್ಲಿನ ಎಲ್ಲಾ ಲೇಖಕರು ತಮ್ಮ ಅನುಭವ ಕಥನವೇ ಸಾಹಿತ್ಯ ಕೃಷಿಗೊಂದು ಹೆದ್ದಾರಿ ನಿರ್ಮಿಸಿತು ಎಂದು ಭಿನ್ನ ನೆಲೆಗಳಲ್ಲಿ ನಿಂತು ಹೇಳಿಕೊಂಡಿದ್ದಾರೆ.

'ಮಹಾತ್ಮ ಗಾಂಧಿ ಅಗ್ರಹಾರದ ನಮ್ಮನ್ನು ಗೊಂದಲಗೊಳಿಸಿದ್ದರು. ಕೆಲವರಿಗೆ ಅವರು ದೈವಿಕ ಸಂತರಂತೆ ಕಂಡರೆ, ಹರಿಜನರನ್ನು ದೇವಾಲಯದೊಳಗೆ ಪ್ರವೇಶಿಸುವಂತೆ ಮಾಡಿ ವರ್ಣಸಂಕರಕ್ಕೆ ಕಾರಣನಾದ ಕಾಪುರುಷನಂತೆಯೂ ಕಾಣುತ್ತಿದ್ದರು' ಎಂಬ ಮಾತುಗಳನ್ನು ಯು.ಆರ್.ಅನಂತಮೂರ್ತಿಯವರು ಪುಟ್ಟ ಕೈಬರಹದ ಪತ್ರಿಕೆಯೊಂದನ್ನು ಹೊರತರಲು ಹೊರಟ ಸಂದರ್ಭದಲ್ಲಿ ಗಾಂಧಿಯನ್ನು ತಮ್ಮೂರಿನ ಮಂದಿ ಏಕಕಾಲಕ್ಕೆ ಸಂತ ಮತ್ತು ಖಳನ ಪಟ್ಟ ಕಟ್ಟಿದ್ದನ್ನು ನೆನೆದು ಹೇಳುತ್ತಾರೆ. ಮುಂದುವರೆದು ಅವರು: 'ಅಗ್ರಹಾರದಲ್ಲಿ ಬೆಳೆಯುತ್ತಿದ್ದಾಗ ನಾನು ನನ್ನ ಅಸ್ತಿತ್ವವನ್ನು ರೂಪಿಸುತ್ತಿದ್ದ ಸಾಮಾಜಿಕ ಸಾಂಸ್ಕೃತಿಕ ನಂಬಿಕೆಗಳನ್ನು ಪ್ರಶ್ನಿಸುವಂತೆ ಎಚ್ಚರವಾದೆ. ಅದಕ್ಕೆ ಕಾರಣ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನಮ್ಮೆಲ್ಲರ ಮೇಲೂ ಆದ ಮಹಾತ್ಮ ಗಾಂಧಿಯ ಪ್ರಭಾವ'.

ಜೊತೆಗೆ 'ನನ್ನನ್ನು ಆಳವಾಗಿ ಅಲ್ಲಾಡಿಸಿದ ಮೂರು ಪ್ರೇಮ, ಜೂಜು ಮತ್ತು ಕದನ. ಅನುಭವ ನಾನು ಪ್ರಯತ್ನಿಸದೇ ಬರಬಹುದು. ಬರೆಯುವುದು ಮಾತ್ರ ಅಷ್ಟು ಸಲೀಸಲ್ಲ. ಆದ್ದರಿಂದಲೇ ಬರೆಯುವುದು, ಶೂನ್ಯದಿಂದ ಆಕಾರಗಳನ್ನು ಹೊರಡಿಸುವುದು, ನಿಶ್ಯಬ್ದದಿಂದ ಸದ್ದುಗಳನ್ನು ಎಳೆಸುವುದು ಲೇಖಕನಿಗೆ ಅಂಟಿದ ಶಾಪ. ಬರೆಯದವರನ್ನು ಕಂಡು ಹಲವು ಸಲ ಅಸೂಯೆಪಟ್ಟಿದ್ದೇನೆ' ಎಂಬ ಲಂಕೇಶರ ಮಾತುಗಳಂತೂ ಬರವಣಿಗೆಯನ್ನು ತೀವ್ರವಾಗಿ ಹಚ್ಚಿಕೊಂಡ ಲೇಖಕನ ಖಾಸಗಿ ಮತ್ತು ಸಾಮಾಜಿಕ ಬದುಕಿನ ಸ್ವರ್ಗ ನರಕಗಳ ದರ್ಶನ ಮಾಡಿಸುತ್ತವೆ.

ಇವತ್ತು ಕನ್ನಡದ ಫ್ಯಾಸಿಸ್ಟ್ ಲೇಖಕರು ತಮ್ಮ ನಂಬುಕಾರುವ ವಿಚಾರಗಳನ್ನು ಬರಹದ ಮೂಲಕ ಮಾರುಕಟ್ಟೆಯ ಸರಕನ್ನಾಗಿಸಿ ಸೃಜನಶೀಲತೆ ಎಂಬ ಪದವನ್ನೇ ವಿಕೃತಗೊಳಿಸಿಬಿಟ್ಟಿದ್ದಾರೆ. ಇಂಥ ವಿಕೃತರಿಂದ ಪಾರಾಗಲು, ಓದು-ಬರಹವನ್ನು ತೀವ್ರವಾಗಿ ಹಚ್ಚಿಕೊಂಡಿರುವ ಈ ಕಾಲದ ಹುಡುಗ ಹುಡುಗಿಯರು ಈ ಕೃತಿಯನ್ನೊಮ್ಮೆ ಓದಲೇಬೇಕು. ಬದುಕು ಮತ್ತು ಸಾಹಿತ್ಯದೆಡೆಗೆ ಪ್ರೀತಿ ಮೂಡುವಂತೆ ಮಾಡಬಲ್ಲ ಇಲ್ಲಿನ ಲೇಖನಗಳನ್ನು ಒಟ್ಟುಗೂಡಿಸುವ ಮೂಲಕ ಸಂಪಾದಕರು ಈ ಕಾಲದ ಎಳೆಯರಿಗೆ ಮಹದುಪಕಾರ ಮಾಡಿದ್ದಾರೆ.

ನಾನೇಕೆ ಬರೆಯುತ್ತೇನೆ
ಸಂಪಾದಕರು: ಡಾ. ಅಮರೇಶ ನುಗಡೋಣಿ
ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ -583 276
ಪುಟಗಳು: 198, ಬೆಲೆ: ರೂ.100, ಪ್ರಕಟಣೆ: 2009

ಆಭರಣ ರಾಶಿ




ಮಂಗನ ಕೈಯಲ್ಲಿ
ಚೆಲ್ಲಿದೆ ರಾಶಿ ಆಭರಣ
ಕಂಡಲ್ಲಿ ಇಡುವುದು
ಕೆಂಡದ ಮೇಲೆ ಹಾದು
ಚಂಡಿಯ ಕುತ್ತಿಗೆಗೆ
ಆಭರಣ
ಮಂಗನ ಚೇಷ್ಟೆ ನೋಡಿ
ತೆಗೆಯುವುದು ಹಾಕುವುದು
ಅದಲು-ಬದಲು ಬಯಲಾಟ
ಕುಂತಲ್ಲೆ ತಿನ್ನುವುದು
ಮೆದುಳುಗಳ ರಾಶಿ
ಕಂಡಲ್ಲಿ ಹಾರುವುದು
ಕನ್ನಡಿಯ ಇಟ್ಟು ನೋಡುವುದು
ಅಲ್ಲಲ್ಲಿ ಅದರದೇ ಜೀವರಾಶಿ
ಗಾಳದಲ್ಲಿ ಸಿಕ್ಕವು
ಜೀವಗಳ ಬಿಟ್ಟವು
ಭಾರಿ ಮೈ ಮಾಂಸಗಳ ಚೆಂಡುಗಳು
ಬೊಜ್ಜು ಕರಗಿಸಲು
ಆಡಬಹುದು ಆಟಗಳ
ನೀರಿನಿಂದ ಬೇರ್ಪಟ್ಟು
ಉಪ್ಪು ರಾಶಿಯ ಮಧ್ಯ
ಮೂಳೆ ಮಾಂಸದ ಉಸಿರಾಟ
ಬಿದ್ದ ಆಭರಣದ ರಾಶಿ
ಚೆಲ್ಲುವ ಕಂಪ್ಯೂಟರ್ಗು ಇರಲಿ
ರಾತ್ರಿ ಪೂರ್ತಿ ರಾಜ ರಾಣಿ
ಜೋಕರುಗಳ ಆಟ
ಕಂಡಲ್ಲಿ ಅಂಡು
ಉಜ್ಜುಜ್ಜಿ ಸಾಕಾಗಿ
ಅಲ್ಲಲ್ಲಿ ಮುಲಾಮುಗಳ ರಾಶಿ
ಎತ್ತರಕ್ಕೆ ಹಾರುವುದು
ಇತ್ತರುಗಳ ಚೆಲ್ಲುವುದು
ಕೊಳೆತಲ್ಲಿ ಮತ್ತೆ
ಮೊಳಕೆಗಳ ರಾಶಿ
ಆಟದಲ್ಲಿ ಮೈಸೋತು
ಓಟದಲ್ಲಿ ಕಾಲ್ಕಿತ್ತು
ಚಂಡಿಯ ಹಾದ ಉಜ್ಜಿ
ಪ್ರೇತಗಳು ಹಾರಾಡಿ
ಸಿಕ್ಕಿದ್ದಲ್ಲಿ ಎಲ್ಲ ಗಹಗಹಿಸಿ
ಗ್ರಂಥಗಳ ಮಧ್ಯೆ ಒದ್ದಾಡಿ
ಬಿಡುಗಡೆಗೆ ಚೆಲ್ಲುವುದು
ಬಿಜ್ಞಾನ ರಾಶಿ

• ತಾಜುಮಾ ಇಕ್ಬಾಲ್

ಕಾರ್ಮಿಕರ ಧ್ವನಿಯಾಗಬಲ್ಲ ಲೇಬರ್ ಲೈನ್ ಪತ್ರಿಕೆ

ಈಚೆಗೆ ಕಾರ್ಮಿಕ ಪರ ಚಟುವಟಿಕೆಗಳು ಮುಖ್ಯವೆನ್ನಿಸುವಂತೆ ಕಾಣುತ್ತಿಲ್ಲ. ಕಾರಣ ಕಾರ್ಮಿಕರ ಸಮಸ್ಯೆಗಳು ಬಗೆಹರಿದು ಸುಖಿಗಳಾಗಿದ್ದಾರೆಂದಲ್ಲ, ಬದಲಿಗೆ ಕಾರ್ಮಿಕರು ದೊಡ್ಡ ಧ್ವನಿ ಎತ್ತದಂತೆ ವ್ಯವಸ್ಥೆ ಕಟ್ಟಿಹಾಕಿದೆಯಷ್ಟೆ. ಈ ಮಧ್ಯೆಯೇ ಕಾರ್ಮಿಕರ ಪರ ಕಾಳಜಿ ಇಟ್ಟುಕೊಂಡು ಹೋರಾಟ, ಪ್ರತಿಭಟನೆಗಳನ್ನು ಸದ್ದಿಲ್ಲದೆ ಮಾಡುವ ಕೆಲವಾದರೂ ಪ್ರಾಮಾಣಿಕರು ನಮ್ಮ ನಡುವೆ ಇದ್ದಾರೆ. ಅಂತಹ ಕೆಲವರ ಪ್ರಯತ್ನವೇ ಲೇಬರ್ ಲೈನ್ ಎನ್ನುವ ಪತ್ರಿಕೆ.



ಜಾತಿಗೊಂದು ಜಾತಿವಾದಿ ಪತ್ರಿಕೆಗಳು ಹುಟ್ಟುತ್ತಿರುವ ಈ ಕಾಲದಲ್ಲಿ ಜಾತಿಯಾಚೆ ದುಡಿವ ವರ್ಗವನ್ನು ಆಧರಿಸಿ ಪತ್ರಿಕೆ ಮಾಡಿರುವುದು ಆಶಾದಾಯಕ ಬೆಳವಣಿಗೆ. ಹಿರಿಯ ನ್ಯಾಯವಾದಿಗಳಾದ ಮುರುಳೀಧರ್ ಅವರ ಗೌರವ ಸಂಪಾದಕತ್ವದಲ್ಲಿ, ಎ.ಆರ್.ಎಂ. ಇಸ್ಮಾಯಿಲ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಪತ್ರಿಕೆ ಸಿದ್ಧವಾಗುತ್ತಿದೆ. ಬಿ.ಪೀರ್‌ಭಾಷಾ, ಜಿ.ಎಂ.ಗುರುಬಸವರಾಜ, ಪರಶುರಾಮ ಕಲಾಲ್, ಮತ್ತೀಹಳ್ಳಿ ಬಸವರಾಜ್‌ರ ಸಂಪಾದಕ ಮಂಡಳಿ ಈ ಪತ್ರಿಕೆಯ ಬೆನ್ನಿಗಿದೆ.


ಪ್ರತೀ ಸಂಚಿಕೆಗೆ ಕಾರ್ಮಿಕರ ಒಂದು ವರ್ಗವನ್ನು ಆಧರಿಸಿ ರೂಪಿಸುವ ಯೋಜನೆ ಇದೆ. ಅಕ್ಟೋಬರ್ ಮೊದಲ ಸಂಚಿಕೆಯನ್ನು ಕಟ್ಟಡ ಕಾರ್ಮಿಕರನ್ನು ಆಧರಿಸಿ ಸಿದ್ಧಗೊಳಿಸಲಾಗಿದೆ. ಇಲ್ಲಿ ಕಾರ್ಮಿಕರಿಗೆ ಕಾನೂನಿನ ಅರಿವು, ಕಾರ್ಮಿಕ ಹೋರಾಟಗಾರರ ಮಾತುಕತೆ, ಕಾರ್ಮಿಕ ಜಾಗೃತಿಯ ವೈಚಾರಿಕ ಬರಹಗಳನ್ನು ಸಧ್ಯ ಈ ಪತ್ರಿಕೆ ಒಳಗೊಂಡಿದೆ.

ಇದು ಬಳ್ಳಾರಿಯ ಲೇಬರ್ ರಿಸೋರ್ಸ್ ಸೆಂಟರ್‌ನಿಂದ ಪ್ರಕಟವಾಗುತ್ತಿದೆ. ಈ ಪತ್ರಿಕೆ ಇನ್ನಷ್ಟು ವ್ಯಾಪಕತೆಯನ್ನು ಹೆಚ್ಚಿಸಿಕೊಂಡು, ಶ್ರಮಿಕ ಲೋಕದ ಸಂಗತಿಗಳನ್ನು, ಕಾರ್ಮಿಕರ ಆತ್ಮಕಥಾನಕದ ಭಾಗಗಳನ್ನು ಒಳಗೊಳ್ಳಬೇಕಿದೆ. ಇದು ಕೇವಲ ಕಾರ್ಮಿಕ ವರ್ಗದ ಕೂಗು ಮಾತ್ರವಾಗದೆ, ಶಕ್ತಿಯಾಗುವಂತೆ ಇದನ್ನು ರೂಪಿಸಲು ಅವಕಾಶಗಳಿವೆ. ಅಂತಹ ಸಾಧ್ಯತೆಯೆಡೆಗೆ ಲೇಬರ್ ಲೈನ್ ಸಾಗಲೆಂದು ಹಾರೈಸೋಣ.

ಆಸಕ್ತರು ಲೇಬರ್ ಲೈನ್ ಕನ್ನಡ ಮಾಸಿಕ, ಮೇಲ್ಮಹಡಿ, ಸಪ್ತಗಿರಿ ಕಾಂಪ್ಲೆಕ್ಸ್, ಕೆ.ಸಿ.ರಸ್ತೆ ಬಳ್ಳಾರಿ-583101, ದೂರವಾಣಿ: 08392-271090, labourlinekannada@gmail.com ವಿಳಾಸಕ್ಕೆ ಸಂಪರ್ಕಿಸಬಹುದು.


• ಅರುಣ್ ಜೋಳದಕೂಡ್ಲಿಗಿ

> ಪ್ರಚಾರ ಪದ್ಯವು ಮೂಲತಃ ಕಲೆಯಾಗದ ಅಥವಾ ಹಾಗೆ ಭಾವಿಸಲಾದ ಜನಪರ ಸಾಹಿತ್ಯವನ್ನು ವಿಡಂಬಿಸಲು ಬಂಡವಾಳಶಾಹಿ ಜಗತ್ತಿನ ವಕ್ತಾರರು ರೂಪಿಸಿದ ಪರಿಭಾಷೆ. ಬಲಪಂಥೀಯರಿಗೆ ಅಪ್ಯಾಯಮಾನ. 'ಸರಸ್ವತಿ ಸಮ್ಮಾನ' ಸ್ವೀಕರಿಸಿದ ಭೈರಪ್ಪನವರು ಪ್ರಚಾರ ಸಾಹಿತ್ಯದ ಮೇಲೆ ದಾಳಿ ನಡೆಸಿದ್ದಾರೆ. ಫಣಿರಾಜ್ ಅವರು 'ಮತ್ತೆ ಮೊಳಗಲಿ ಪಾಂಚಜನ್ಯ'ದಂಥ ಕೊಲೆಗಡುಕ ಪದ್ಯವನ್ನು 'ಪ್ರಚಾರ ಪದ್ಯ'ವೆಂದು ಕರೆದು ಅದರ ಹಿಂಸಾರತಿಯ ನಿಜ ರಭಸ ಹಾಗೂ ವರ್ಗನೆಲೆಗಳನ್ನು ಮರೆಮಾಡುವ, ಹಗುರಗೊಳಿಸುವ ಸೂಕ್ಷ್ಮ ಭಾಷಾರಾಜಕಾರಣವನ್ನು ಮಾಡುತ್ತಾರೆ. ಜನವಿರೋಧಿ ಹಾಗೂ ಜನಪರ ಚಿಂತನೆಗಳನ್ನು ಪ್ರಚಾರ ಮಾಡುವ ಬರಹಗಳೆರಡನ್ನೂ ಅವರು ಒಂದೇ ತಕ್ಕಡಿಯಲ್ಲಿಟ್ಟು ತೂಗಬಲ್ಲರು.



• ಡಾ. ಎಂ.ಡಿ.ಒಕ್ಕುಂದ

ಚಿನ್ನದ ಕತ್ತಿಗೆ ಪರಾಕು ಪಂಪು!



ಅಡಿಗರ ಕೋಮುವಾದಿ ಕವನ

ಪ್ರತಿಕ್ರಿಯೆ

ಎಪ್ಪತ್ತರ ದಶಕದಲ್ಲಿ ಅಡಿಗರ ಕಾವ್ಯದ ಹಿಂದೂತ್ವದ ಸ್ವರೂಪವನ್ನು ಬಿಡಿಸಿಟ್ಟಿದ್ದ ಬರಗೂರು ರಾಮಚಂದ್ರಪ್ಪನವರು ಆ ಕಾಲದ ಕೆಲವು ನವ್ಯ ವಿಮರ್ಶಕರ ಎರಡು ಚಾಳಿಗಳನ್ನು ದಾಖಲಿಸಿದ್ದಾರೆ. "ಇಲ್ಲದ್ದನ್ನು ಇದೆ ಎಂದು ಭಾವಿಸಿ ಅವುಗಳನ್ನು ಟೀಕಿಸತೊಡಗುವ ಬೇಜವಾಬ್ದಾರಿತನ" ಹಾಗೂ "ನಮ್ಮ ಸಾಮಾಜಿಕ ಕಾಳಜಿಯನ್ನು ಉದ್ದೇಶಪೂರ್ವಕವಾಗಿಯೇ ಸರಳೀಕರಿಸುವ ತಂತ್ರ" (ಸಾಹಿತ್ಯ ಮತ್ತು ರಾಜಕಾರಣ 80-81). ಕೆ.ಫಣಿರಾಜ್ ಅವರು ಈ ಪರಂಪರೆಯನ್ನು ಮುಂದುವರೆಸಿದ್ದಾರೆ. ವಾದ ಮತ್ತು ಅಪವಾದಗಳನ್ನು ತಿರುವು ಮುರುವು ಮಾಡುವ ಮತ್ತು ಸಾಹಿತ್ಯದ ಸಾಮಾನ್ಯ ವಿದ್ಯಾರ್ಥಿಗೂ ಗೊತ್ತಿರುವ ಸರಳ ಸಂಗತಿಗಳನ್ನೇ ಭಾರೀ ಸೂಕ್ಷ್ಮ ವಿಷಯಗಳೆಂದು ಉತ್ಸಾಹದಿಂದ ವಿವರಿಸುವ ಹೊಸ ಚಾಳಿಗಳನ್ನೂ ಸೇರಿಸಿದ್ದಾರೆ.

ಪ್ರಚಾರ ಪದ್ಯವಲ್ಲ ಕೊಲೆಗಡುಕ ಕವಿತೆ

ಪ್ರಚಾರ ಪದ್ಯವು ಮೂಲತಃ ಕಲೆಯಾಗದ ಅಥವಾ ಹಾಗೆ ಭಾವಿಸಲಾದ ಜನಪರ ಸಾಹಿತ್ಯವನ್ನು ವಿಡಂಬಿಸಲು ಬಂಡವಾಳಶಾಹಿ ಜಗತ್ತಿನ ವಕ್ತಾರರು ರೂಪಿಸಿದ ಪರಿಭಾಷೆ. ಬಲಪಂಥೀಯರಿಗೆ ಅಪ್ಯಾಯಮಾನ. 'ಸರಸ್ವತಿ ಸಮ್ಮಾನ' ಸ್ವೀಕರಿಸಿದ ಭೈರಪ್ಪನವರು ಪ್ರಚಾರ ಸಾಹಿತ್ಯದ ಮೇಲೆ ದಾಳಿ ನಡೆಸಿದ್ದಾರೆ. ಫಣಿರಾಜ್ ಅವರು 'ಮತ್ತೆ ಮೊಳಗಲಿ ಪಾಂಚಜನ್ಯ'ದಂಥ ಕೊಲೆಗಡುಕ ಪದ್ಯವನ್ನು 'ಪ್ರಚಾರ ಪದ್ಯ'ವೆಂದು ಕರೆದು ಅದರ ಹಿಂಸಾರತಿಯ ನಿಜ ರಭಸ ಹಾಗೂ ವರ್ಗನೆಲೆಗಳನ್ನು ಮರೆಮಾಡುವ, ಹಗುರಗೊಳಿಸುವ ಸೂಕ್ಷ್ಮ ಭಾಷಾರಾಜಕಾರಣವನ್ನು ಮಾಡುತ್ತಾರೆ. ಜನವಿರೋಧಿ ಹಾಗೂ ಜನಪರ ಚಿಂತನೆಗಳನ್ನು ಪ್ರಚಾರ ಮಾಡುವ ಬರಹಗಳೆರಡನ್ನೂ ಅವರು ಒಂದೇ ತಕ್ಕಡಿಯಲ್ಲಿಟ್ಟು ತೂಗಬಲ್ಲರು. ಆವರಿಗೆ ಕೋಮುವಾದ ಹಾಗು ಸಮಾಜವಾದಗಳಲ್ಲಿಯ 'ವಾದ' ಒಂದೇ. ಅಡಿಗರು 'ಗೋಡ್ಸೆ ಗಾಂಧಿಯ ನಡುವೆ ಸಮತೂಕ' ಎಂಬಂತೆ. ಫಣಿರಾಜ್ ಅವರು ಹೇಳುವಂತೆ ಈ ಪದ್ಯ ಕೇವಲ ತನ್ನ ತೀರ್ಮಾನವನ್ನು ಬೆಂಬಲಿಸುವಂತೆ ಓದುಗರನ್ನು ಕೇಳುವುದಿಲ್ಲ, ಜನಸಮುದಾಯದಲ್ಲಿ ಹಿಂಸೆಯನ್ನು ಅದರ ಆತ್ಯಂತಿಕ ಹಾಗೂ ಉನ್ಮತ್ತ ಸ್ಥಿತಿಯಲ್ಲಿ ಉದ್ರೇಕಿಸುವ ಉದ್ದೇಶ ಹೊಂದಿದೆ.

ಘೋಷಿತ ರಾಜಕೀಯ ನಿಲುವು ಹಾಗೂ ಸಾಹಿತ್ಯದ ಸಂಬಂಧ

ಸಾಹಿತಿಗಳ ಘೋಷಿತ ಸಾಮಾಜಿಕ ರಾಜಕೀಯ ನಿಲುವು ಹಾಗೂ ಅವರ ಕೃತಿಗಳ ನಡುವೆ ನೇರವೂ ನಿಸ್ಸಂದಿಗ್ಧವೂ ಆದ ಸಂಬಂಧ ಇರುತ್ತದೋ? ಎನ್ನುವುದು ಶ್ರೀಯುತರ ಪ್ರಶ್ನೆ. 'ಇಲ್ಲ' ಎನ್ನುವದು ಅವರ ಸ್ಪಷ್ಟ ನಿಲುವು. 'ಇರಲೂ ಬಹುದು' ಎಂಬ ಸಾಧ್ಯತೆಗೆ ಆಸ್ಪದವೇ ಇಲ್ಲ. ನಾನು ಅಡಿಗರ ಘೋಷಿತ ರಾಜಕೀಯ ನಿಲುವು ಹಾಗೂ ಕಾವ್ಯಗಳ ಮಧ್ಯೆ ಸಂಬಂಧ ಕಲ್ಪಿಸಿದ್ದೇನೆಂಬುದು ಅವರ ತಪ್ಪು ಗ್ರಹಿಕೆ. 'ಪಾಂಚಜನ್ಯ' ಹಾಗೂ ಆ ಮಾದರಿಯ ಅಡಿಗರ ಕಾವ್ಯದಲ್ಲಿ ವ್ಯಕ್ತವಾದ ರಾಜಕೀಯ ನಿಲುವುಗಳಿಗೆ ನಾನು ಮುಖಾಮುಖಿಯಾಗಿದ್ದೇನೆಯೇ ಹೊರತು ಅಡಿಗರ ಘೋಷಿತ ನಿಲುವುಗಳಿಗಲ್ಲ. ಅನುಷಂಗಿಕವಾಗಿ ಜನಸಂಘದಿಂದ ಚುನಾವಣೆಗೆ ನಿಂತಿದ್ದನ್ನು ಪ್ರಸ್ತಾಪಿಸಲಾಗಿದೆ. ಅಡಿಗರು ಬಲಪಂಥೀಯ ಬದ್ಧತೆಯನ್ನು ಮುಕ್ತವಾಗಿ ಘೋಷಿಸಿದ್ದನ್ನು ಹಿಂದಕ್ಕೆ ಸರಿಸಲು 'ಕೃತಿಯನ್ನು ನಂಬು ಕೃತಿಕಾರರನ್ನಲ್ಲ' ಎಂಬ ವೇದವಾಕ್ಯ ಹುಟ್ಟುತ್ತದೆ. ಕೃತಿಯಲ್ಲಿಯೇ ಬಲಪಂಥೀಯ ಪ್ರಣಾಳಿಕೆಯನ್ನು ತೀವ್ರವಾಗಿ ಪ್ರತಿಪಾದಿಸುವ ಕವಿತೆಗಳಿವೆಯಲ್ಲ ಎಂದರೆ ಅಂಥ ಕೆಟ್ಟ ಕವಿತೆಗಳನ್ನು ಬಿಟ್ಟು ಶ್ರೇಷ್ಠ ಕವಿತೆಗಳನ್ನು ಮಾತ್ರ ಓದಲು ಸೂಚನೆ ಸಿಗುತ್ತದೆ. ಶ್ರೇಷ್ಠ ಕವಿತೆಗಳಲ್ಲೂ ಹಿಂದೂತ್ವದ ಚಹರೆಗಳು ಮಡುಗಟ್ಟಿರುವುದನ್ನು ವಿಶ್ಲೇಷಿಸಿದರೆ ಕೃತಿಯ ಶಿಲ್ಪವನ್ನು ಮಾತ್ರ ಆನಂದಿಸಲು ಆಜ್ಞೆ ದೊರಕಬಹುದು! ಇಷ್ಟೆಲ್ಲಾ ಬಿಟ್ಟ ಮೇಲೆ ಓದಲು ಅಡಿಗರ ಕವಿತೆಗಳೇ ಇರುವುದಿಲ್ಲ. ನಾನು ಅಡಿಗರ 'ಕಾವ್ಯದ ರಾಜಕೀಯ ನಿಲುವುಗಳನ್ನು' ವಿಶ್ಲೇಷಿಸಿದ್ದನ್ನು ಶ್ರೀಯುತರು ಗ್ರಹಿಸಿದ್ದರೆ ಮಾರ್ಕ್ಸ್-ಝೋಲಾ-ಬಾಲ್ಜಾಕ್ ಅವರನ್ನು ಕುರಿತಂತೆ ಎಲ್ಲರಿಗೂ ಗೊತ್ತಿರುವ ಚರ್ಚಿತ ಚರ್ವಣವಾದ ಈ ಹಳೆಯ ಹೇಳಿಕೆಯನ್ನು ಮೊದಲಬಾರಿಗೆ ಹೇಳುವ ಗತ್ತನ್ನು ತೋರುತ್ತಿರಲಿಲ್ಲ. ಕಲೆಗೆ ತನ್ನದೇ ಆದ ಅನನ್ಯತೆ ಇರುತ್ತದೆ. ವ್ಯಕ್ತಿಗತ ಸೃಜನಶೀಲತೆಯ ಎರಕದಲ್ಲಿ ಸಂವೇದನೆಗಳಾಗಿ ಪರಿವರ್ತನೆಯಾಗದ ಬರಹಗಳನ್ನು ಮಾರ್ಕ್ಸ್ ಕೂಡ ಕಲೆಯಾಗಿ ಸ್ವೀಕರಿಸಲಿಲ್ಲ. ಮಾರ್ಕ್ಸ್‌ವಾದಿಗಳೂ ಇದಕ್ಕೆ ಹೊರತಲ್ಲ. ಘೋಷಿತ ರಾಜಕೀಯ ನಿಲುವು ಹಾಗೂ ಸಾಹಿತ್ಯದ ಕರಳುಬಳ್ಳಿಯ ಸಂಬಂಧದಲ್ಲಿ ಕೂಡ ಶ್ರೇಷ್ಠ ಕಲಾಕೃತಿಗಳು ಸಾಧ್ಯವಾಗುವುದಕ್ಕೆ ಎಷ್ಟು ಉದಾಹರಣೆಗಳಿಲ್ಲ? ಜಗತ್ತಿನಲ್ಲಿ ಸಮಾಜವಾದವನ್ನು ಪ್ರತಿಪಾದಿಸುವ ಕೃತಿಗಳು ಕಲಾಕೃತಿಗಳೇ ಆಗಿಲ್ಲವೆಂಬ ಇವರ ಖಚಿತ ಹಾಗೂ ಅಗಾಧ ಪಾಂಡಿತ್ಯದ ಹಿಂದಿನ ರಾಜಕೀಯ ನಿಲುವಾದರೂ ಏನು? ಸಾಹಿತಿಯೂ ಮನುಷ್ಯನೇ. ಅವನಿಗೆ ಸಾಮಾಜಿಕ ರಾಜಕೀಯ ನಿಲುವುಗಳಿರುತ್ತವೆ. ಅವು ನೇರವೂ, ಸ್ಪಷ್ಟವೂ, ಸರಳವೂ ಆಗಿರಬೇಕಿಲ್ಲ ಆಗಿರುವುದೂ ಇಲ್ಲ. ಹಲವು ಚಿಂತನೆಗಳೊಂದಿಗೆ ವ್ಯಕ್ತಿ ತನ್ನ ಅನುಭವದ ಮೂಲಕ ಕಟ್ಟಿಕೊಳ್ಳುವ ಸಂಕರದ ಸ್ಥಿತಿ ಅಸ್ಪಷ್ಟವಾಗಿರಲೂಬಹುದು. ಆದರೆ ಕೃತಿಯೊಳಗಿನ ನಿಲುವು ಮುಖ್ಯ. ಅದು ಜೀವವಿರೋಧಿಯಾಗಿದ್ದರೂ ಒಪ್ಪಿಕೊಳ್ಳಬೇಕೇ? ರಕ್ತ ಮಾಂಸಗಳಿಂದ ಕೂಡಿದ ಮನುಷ್ಯರ ಪಾಡಿನ ಬಗ್ಗೆ ಕಥಿಸಿದ ಬಾಲ್ಜಾಕ್ ಎಲ್ಲಿ? ಬ್ರಾಹ್ಮಣ್ಯ, ಸನಾತನತೆ, ಕೋಮುವಾದಗಳ ಹಿಂಸಾತ್ಮಕ ನಿಲುವುಗಳನ್ನು ಕಥಿಸಿದ ಅಡಿಗರೆಲ್ಲಿ? ಅಡಿಗರ ಸಮರ್ಥನೆಗೆ ಫಣಿರಾಜ್ ಕಾರಂತರನ್ನು ಬಳಸಿಕೊಂಡಿದ್ದಾರೆ. ನನ್ನ 'ಹಿಂದೂತ್ವ'ದ ಪರಿಕಲ್ಪನೆಯ ಬಗ್ಗೆ ತಕರಾರು ತೆಗೆಯುವ ಫಣಿರಾಜರಿಗೆ ಕಾರಂತರ ಇಳಿಗಾಲದ 'ರಾಮ ಜನ್ಮ ಭೂಮಿ' ಪರ ನಿಲುವಿಗೂ, ಅಡಿಗರ 'ಹಿಂದೂತ್ವ'ಕ್ಕೂ ವ್ಯತ್ಯಾಸವೇ ಕಾಣದಿರುವುದು ಸೋಜಿಗ. ಕಾರಂತರು ಮಾತ್ರವಲ್ಲ, ಆಧುನಿಕ ಭಾರತದ 'ಲೇಖಕರೆಲ್ಲರ ಕೃತಿಗಳನ್ನೂ, ಸಾಹಿತ್ಯವನ್ನೂ ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆಯ ನೆಲೆಯಿಂದ ಮರುಮೌಲ್ಯಮಾಪನ ಮಾಡುವ ಅಗತ್ಯವೊಂದನ್ನು ಕಳೆದ ಮೂರು ದಶಕಗಳ ಭಾರತೀಯ ಬದುಕಿನ ಚಲನೆಗಳು ಹೇಳುತ್ತಿವೆ. ಈ ಹಿನ್ನೆಲೆಯಲ್ಲಿ ನಾನು ಅಡಿಗರ ಕಾವ್ಯದ ಓದುಗಳನ್ನು ಹಾಗೂ ಅಡಿಗರ ಕಾವ್ಯ ಮತ್ತು ಹಿಂದೂತ್ವದ ಸಂಬಂಧವನ್ನು ಪರಿಶೀಲಿಸುವ ಮೂಲಕ ಇವರ ಗೊಂದಲಗಳಿಗೆ ಉತ್ತರಿಸುತ್ತೇನೆ ಮತ್ತು ಇವರು ನಿಂತ ನಿಜದ ನೆಲೆಯನ್ನು ಸ್ಪಷ್ಟಪಡಿಸುತ್ತೇನೆ.

ಅಡಿಗರ ಕಾವ್ಯದ ಓದುಗಳು

ಕನ್ನಡದಲ್ಲಿ ಅಡಿಗರ ಕಾವ್ಯವನ್ನು ಕುರಿತಂತೆ ಸ್ಥೂಲವಾಗಿ ಮೂರು ಬಗೆಯ ಓದುಗಳು ಚಾಲ್ತಿಯಲ್ಲಿವೆ. ಎಡಪಂಥೀಯ ಮತ್ತು ಸಮಾಜವಾದಿ ಓದುಗಳು, ರೂಪ (ಅಡಿಗ) ನಿಷ್ಠ ಓದುಗಳು ಹಾಗೂ ಸಾಂಸ್ಕೃತಿಕ ಓದುಗಳು.

ಎಡ ಮತ್ತು ಸಮಾಜವಾದಿ ಓದುಗಳು

"ಅಡಿಗರು ರಾಜಕೀಯ ಪಕ್ಷವೊಂದನ್ನು ಪ್ರತಿನಿಧಿಸುವುದಕ್ಕೂ ಅವರ ಕಾವ್ಯದಲ್ಲಿ ಅಂತರ್ಗತವಾಗಿರುವ ಸಂಸ್ಕೃತಿ ಸೂಕ್ಷ್ಮಗಳಿಗೂ ಸಂಬಂಧವಿಲ್ಲವೆಂದು ಹೇಳಲಾಗದು" (ಸಾಹಿತ್ಯ ಮತ್ತು ರಾಜಕಾರಣ 71) ಎನ್ನುವ ಬರಗೂರು ರಾಮಚಂದ್ರಪ್ಪನವರು ಎಪ್ಪತ್ತರ ದಶಕದಲ್ಲಿಯೇ "ಅಡಿಗರ ರಾಜಕೀಯ ಧೋರಣೆ ಬಲಪಂಥೀಯವಾಗಿರುವುದಕ್ಕೆ ಅವರ ಕಾವ್ಯದಲ್ಲಿಯೇ ಆಧಾರವಿದೆ" (ಅದೇ) ಎಂಬ ಸತ್ಯದ ಮೇಲೆ ಬೆಳಕು ಚೆಲ್ಲಿದ್ದರು. ಅಡಿಗರ ಆರಂಭಿಕ ಸಮತಾವಾದಿ ಆಸಕ್ತಿ ಸಮಕಾಲೀನ ಲಹರಿಯ ಒತ್ತಡದಿಂದ ಬಂದಿದ್ದೇ ಹೊರತು ತಾತ್ವಿಕ ನೆಲೆಗಟ್ಟಿನದಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಚಂದ್ರಶೇಖರ ಪಾಟೀಲರು "ಅಡಿಗ ಶರ್ಮನ ಕೇಂದ್ರಿತ ನವ್ಯ ಬ್ರ್ಯಾಂಡು ಸುವ್ಯವಸ್ಥಿತ ಪ್ರಚಾರ ವ್ಯವಸ್ಥೆಯಿಂದಾಗಿ ಸಹಜವಾಗಿಯೇ ಮಣ್ಣಿನ ವಾಸನೆಯನ್ನು ತೊರೆದು ಮಂತ್ರದ ಘಾಟನ್ನು ಪಡೆಯತೊಡಗಿತು" ಎಂದು ದಾಖಲಿಸುತ್ತಾ ಕಾವ್ಯ ಮುಖೇನ ಹೀಗೆ ಪ್ರತಿಕ್ರಿಯಿಸಿದ್ದಾರೆ. "ಒಂದು ಜನಾಂಗದ ಕಣ್ಣು ತೆರೆಸಿ ಮಣ್ಣಿನ ವಾಸನೆ ತುಂಬಿದಾಸಾಮಿ, ಮತ್ತೊಂದು ಜನಾಂಗದ ಬಾಯಿತೆರೆಸಿ ಶ್ರೀರಾಮನವಮಿಯ ದಿವಸ ಸುರಿಯುತ್ತಿದ್ದಾನೆ. ಮಂತ್ರದ ವಾಸನೆಯ, ತನ್ನ ಸಾವಯವ ಸಂಬಂಧದ ನವರಸಪಾಕದಡಿಗೆ" (ಚಂಪಾಂಕಣ, 53). ರಾಜಶೇಖರ್ ಮತ್ತು ಫಣಿರಾಜ್ ಹಲ್ಲುಕಡಿಯುತ್ತಿರುವುದು ಈ ಓದುಗಳ ಬಗ್ಗೆ. ಅಡಿಗರ ವ್ಯಕ್ತಿತ್ವದ ವಿಶ್ವರೂಪದರ್ಶನವಾಗುವುದು ಸಮಾಜವಾದಿ ದೃಷ್ಟಿಕೋನದಿಂದ ಎಂಬ ಆತಂಕದಿಂದ ಈ ಓದುಗಳ ಮೇಲೆ ಮುಗಿಬೀಳುತ್ತಾರೆ.


ರೂಪನಿಷ್ಠ ಓದುಗಳು

ಇವು ಅಡಿಗರ ಭಜನಾ ಮಂಡಳಿಯ ಓದುಗಳು. ಅಡಿಗರ ಕಾವ್ಯವಿಮರ್ಶೆಯ ಬಹುಪಾಲು ಹುಟ್ಟಿದ್ದು ಇದೇ ಗಂಗೋತ್ರಿಯಲ್ಲಿ. ಅಡಿಗರ ಕಾವ್ಯದಲ್ಲಿ ಹಿಂದೂತ್ವದ ಪ್ರತಿಪಾದನೆಯಿಲ್ಲ, ಅವರು ಪರಂಪರೆಯನ್ನು ಪ್ರಶ್ನಿಸಿದ್ದೇ ಕ್ರಾಂತಿ, ಅವರ ಕಾವ್ಯದಲ್ಲಿ ವ್ಯಕ್ತವಾದ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ, ಅವರದು ಪ್ರಜಾಸತ್ತಾತ್ಮಕ ನಿಲುವು, 'ರೂಪರತಿ'ಯೇ ನಿಜವಾದ ವಿಮರ್ಶೆ. ಮೊದಲಾದ ಹುಸಿ ಮಿತ್‌ಗಳನ್ನು ಈ ಓದುಗಳು ಸೃಷ್ಟಿಸಿವೆ. "ಇಂಗ್ಲೆಂಡಿನ ನವ್ಯ ಕಾವ್ಯ ಪರಂಪರೆಯನ್ನಷ್ಟೇ ಅರಿತರೆ ಅಡಿಗರ ಈಗಿನ ಕವನಗಳಲ್ಲಿ ಶೇಕಡಾ ಹತ್ತರಷ್ಟು ಮಾತ್ರ ಅರ್ಥವಾದೀತು, ಉಳಿದ ತೊಂಬತ್ತು ಅರಿಯಲು ನಮ್ಮ ಆರ್ಯ ಸಂಪ್ರದಾಯ ಅರ್ಥವಾಗಲೇಬೇಕು" (ಅನನ್ಯ 35) ಹೀಗೆ ಹಿಂದೂತ್ವದ ಪೂರ್ವರೂಪವಾದ ಸನಾತನತೆಯನ್ನು ಪ್ರತಿಷ್ಠಾಪಿಸುವ ಮುಕ್ತ ಘೋಷಣೆಯೊಂದಿಗೆ ಅಡಿಗರ ಸಮರ್ಥನೆಗಿಳಿವ ಯು.ಆರ್. ಅನಂತಮೂರ್ತಿಯವರು ಈ ಓದುಗಳ ನಾಯಕರಿದ್ದಂತೆ. ಭೂಮಿಗೀತವನ್ನು ವ್ಯಾಖ್ಯಾನಿಸುವ ಅವರ ಬರಹದಲ್ಲಿ ವಸ್ತುವಿಗೆ ಸಂಬಂಧಿಸಿದಂತೆ ಮೂರು ಶಬ್ದಗಳ ಒಂದು ವಾಕ್ಯವಿದ್ದರೆ ಆಕೃತಿಗೆ ಸಂಬಂಧಿಸಿದಂತೆ ಮೂರು ಪುಟಗಳ ವಿವರಣೆಯಿದೆ. ಕಳೆದೆರಡು ದಶಕಗಳ ಭಾರತ ಹಾಗೂ ಕರ್ನಾಟಕದ ಕೋಮುವಾದ ವಿರೋಧಿ ಹೋರಾಟ ಹಾಗೂ ಚಿಂತನೆಗಳಿಗೆ ತೀವ್ರವಾಗಿ ಸ್ಪಂದಿಸಿರುವ ಶ್ರೀಯುತರು ಅಡಿಗರ ಕಾವ್ಯದ ಕೋಮುವಾದಿ ನಿಲುವುಗಳ ಬಗ್ಗೆ ಪ್ರಸ್ತಾಪಿಸಿಲ್ಲ. ಆದರೆ "ಭಯೋತ್ಪಾದಕ ಹಿಂಸಾಚಾರದಿಂದ ನಾವು ಮನುಷ್ಯನ ಸ್ವರೂಪದ ಬಗ್ಗೆಯೇ ಕಂಗೆಡುತ್ತಿರುವ ಈ ದಿನಗಳಲ್ಲಿ ಅಡಿಗರ ನಿಷ್ಠುರ ನಿಲುವುಗಳೂ, ಸತತವಾಗಿ 'ಆಗು'ತ್ತಲೇ ಇರುವ ಮನುಷ್ಯನ ಅಹಂಕಾರದ ಆಚೆಗಿನ ಜೈವಿಕ ಕ್ರಿಯೆಯ ಚಿರಗೂ ಅಗತ್ಯವಾಗಿ ಉಳಿದಿದೆ" ಎಂದು ಶಿಫಾರಸು ಮಾಡುವುದನ್ನು ಮರೆತಿಲ್ಲ. ಈ ಓದುಗಳಲ್ಲಿ ಪದೇ ಪದೇ ಪ್ರಸ್ತಾಪಗೊಳ್ಳುವ ಸಂಗತಿಯೆಂದರೆ 'ಅಡಿಗರ ಕಾವ್ಯ ಕೋಮುವಾದಿಯಲ್ಲ' ಎಂಬ ನಿಲುವು. "ನಾವಿಂದು ಕೋಮುವಾದವೆಂದು ಯಾವ... ದನ್ನು ಕರೆಯುತ್ತೇವೆಯೋ ಅದು ಅಡಿಗರ ಕೆ... ಕಾವ್ಯದಲ್ಲೂ ಸಿಕ್ಕುವುದಿಲ್ಲ" (ಶ್ರೀಧರಮೂರ್ತಿ... ಅನನ್ಯ 221), "ಅಡಿಗರು ಚುನಾವಣೆಗೆ ನಿಂ... ರಾಜಕೀಯ ಪಕ್ಷದ ಪ್ರಣಾಳಿಕೆ ಏನೇ ಇರ... ಸಾಹಿತ್ಯದಲ್ಲಿ ಅವರು ನಮ್ಮ ಪರಂಪರೆಯನ್ನು ಪ್ರಶ್ನಿಸುತ್ತಲೇ ಬೆಳೆದರು. ಅಡಿಗರಿಗೆ ಡೆಮಾಕ್ರ... ಯಲ್ಲಿ ಅಚಲವಾದ ನಂಬಿಕೆ" (ಎಸ್. ಆರ್. ವಿಜಯಶಂಕರ. ಪ್ರತಿಮಾಲೋಕ 10), "ಸನಾತನ ಮೌಲ್ಯಗಳಲ್ಲಿ ನಂಬಿಕೆ ಇದ್ದೂ ಅಡಿಗರು ಸನಾತನಿಗಳಾಗಲಿಲ್ಲ" (ಡಾ.ಜಿ.ಎಸ್.ಆಮೂರ... ಪ್ರತಿಮಾಲೋಕ), "ದೇವರು ಧರ್ಮ ಸಂಸ್ಕೃ... ಮತ್ತು ಪರಂಪರೆಗಳ ಜತೆಗೆ ಈ ಕವಿಗೆ ಇರು... ಸಂಕೀರ್ಣ ಸಂಬಂಧ ಹಿಂದೂತ್ವ ಅಧಿಕಾ... ಗ್ರಹಣದ ತಲೆಲೆಕ್ಕದ ಕ್ಷುದ್ರ ರಾಜಕೀಯದ... ಅಳವಿಗೆ ಮೀರಿದ್ದು" (ಜಿ.ರಾಜಶೇಖರ. ಅದೇ 30), "ಅಡಿಗರಿಗೆ ಸ್ವರ್ಣಯುಗವೊಂದರ... ನಂಬಿಕೆ ಇದೆ. ಈ ಯುಗವನ್ನು ಬೇಕಾದರೆ ನಾ... ರಾಮರಾಜ್ಯವೆಂದು ತಿಳಿಯಬಹುದು, ಆದ... ಇದೆಲ್ಲ ಒಂದು ರೂಪಕವೆಂದು ತಿಳಿಯಬೇಕು" (ಕೆ.ವಿ.ತಿರುಮಲೇಶ್. ಅದೇ 160) ಇಂ... ಪೆಂದಿ ಪೆಂದಿ ಹೇಳಿಕೆಗಳ ಉದ್ದೇಶವಾದರೂ ಏನು? ಈ ಉದ್ದೇಶವನ್ನೇ ತಲೆಮೇಲೆ ಹೊತ್ತು ನಿಂತಿರುವ ರಾಜಶೇಖರ ಮತ್ತು ಫಣಿರಾಜ್ ಅವರ ಸಿಂಗಲ್ ಅಜೆಂಡಾ ಎಂದರೆ ಅಡಿಗರ ಕಾವ್ಯವನ್ನು ಕೋಮುವಾದಿ ಹಣೆಪಟ್ಟಿಯಿಂದ ಬಿಡುಗಡೆಗೊಳಿಸುವುದು. ಈ ಓದುಗ... ಅತಿರೇಕಗಳಿಗೆ ಇನ್ನೆರಡು ಮಾದರಿಗಳನ್ನು ಮಾತ್ರ ನೀಡುತ್ತೇನೆ. ಸುಮತೀಂದ್ರ ನಾಡಿಗರು 'ಗೊಂದಲಪುರ' ಕವಿತೆಯನ್ನು ಪರಿಚಯಿಸುತ್ತ "ಕಮ್ಯುನಿಸಂ ಆಗಲಿ ಅಥವಾ ಸರ್ವಾಧಿಕಾ... ಉಳ್ಳ ಯಾವ ರಾಜಕೀಯ ಪದ್ಧತಿಯೇ ಆಗಲಿ..." (ಅಡಿಗ... ಕಾವ್ಯ 44) ಎನ್ನುವಲ್ಲಿ ಕಮ್ಯುನಿಸಂ ಸರ್ವಾಧಿಕಾರಿ ರಾಜಕೀಯ ಪದ್ಧತಿಯೆಂದು ಘೋಷಿಸಿದ್ದಾರೆ ಇದು ಅಡಿಗರ ಕಾವ್ಯ... ತಾಳಕ್ಕೆ ಹಾಕಿದ ವಿಮರ್ಶೆಯ ಹೆಜ್ಜೆ. ಪಾ.ವೆಂ. ಅವರ "ಹೊನ್ನಪಂಜರ; ಅಲ್ಲಿ ಒಳಹೊರಗು ಕಿಂಕಾಪು, ಕೀಲಿಮೆ... ತುಪ್ಪಳಿನ ಮೆತ್ತೆ ಮೆತ್ತೆ' ಎಂಬಲ್ಲಿ ಹೆಣ್ಣು ಪಂಜರವೆನ್ನುವಾ... ಅದು ರಕ್ತ ಮಾಂಸಮಯ ಹೆಣ್ಣಿಗಿಂತ ಮನುಷ್ಯನ ಸ್ವಭಾವ... ಪಂಜರವನ್ನೇ ನಿರ್ದೇಶಿಸುತ್ತದೆ" ಎಂದು ಅಡಿಗರನ್ನು ಸ್ತ್ರೀ ವಿರೋಧಿ ನಿಲುವುಗಳಿಂದ ಪಾರುಮಾಡಲು ಯತ್ನಿಸುತ್ತಾರೆ. ಜಾತಿ, ವರ್ಣ, ವರ್ಗ, ಲಿಂಗ, ಧರ್ಮ, ಮೊದಲಾದ ನೆಲೆಗಳಿಂದ 'ಉಚ್ಚ-ನೀಚ' ಎಂಬ ತರತಮಗಳನ್ನು ತಾತ್ವಿಕವಾಗಿ ಒಪ್ಪಿ ಅವು ನಿಸರ್ಗಸಹಜವೆಂದು ಪರಿಭಾವಿ... ಆತ್ಯಂತಿಕವಾಗಿ 'ಉಚ್ಚ'ರ ಪರನಿಲುವು ಸಂವೇದನೆಗಳಿಂ... ಜಡಗಟ್ಟಿ ಹೋಗಿರುವ ಅಡಿಗರ ಕಾವ್ಯ ಚಿನ್ನದ ಕತ್ತಿ! ಅದು ನೀಚತನಗಳನ್ನು ಮರೆಮಾಚುವ ವ್ಯಾಖ್ಯಾನಗಳು ಪರಾಕು ಪಂಪುಗಳು! ಈಗ ಈ ಬಳಗದ ಬಹುಪಾಲು ಜ... ಘೋಷಿತವಾಗಿ ಇಲ್ಲವೇ ಅಘೋಷಿತವಾಗಿ ಅಡಿಗರ ನೆಚ್ಚಿ... ರಾಜಕೀಯ ಪಕ್ಷದೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಹೊಂದಿರುವುದು ಆಶ್ಚರ್ಯದ ಸಂಗತಿಯಲ್ಲ. ಈ ವ್ಯಾಖ್ಯಾನಗಳು ಸಾಮೂಹಿಕವಾಗಿ ಹಿಂದೂತ್ವವನ್ನು ಕೆಲವೊಮ್ಮೆ ನೇರವಾ... ಕೆಲವೊಮ್ಮೆ ಪರೋಕ್ಷವಾಗಿ ಬೆಂಬಲಿಸುತ್ತವೆ. ಫಣಿರಾಜರು ಅಡಿಗರ ಕಾವ್ಯದ ಈ ಓದುಗಳನ್ನು ಗಮನಿಸಬೇಕೆಂದು ಸಲಹೆ ನೀಡಿದ್ದಾರೆ. ಅವರಿಗೆ ಧನ್ಯವಾದ.

ಸಾಂಸ್ಕೃತಿಕ ಓದುಗಳು

ಮಾರ್ಕ್ಸ್‌ವಾದ, ಮಾಹತೋತ್ತರ ಚಿಂತನೆ, ಆಧುನಿಕೋತ್ತರ ಚಿಂತನೆ ಹಾಗು ದೇಸಿ ಸಂಸ್ಕೃತಿ ಮೀಮಾಂಸೆಗಳ

ಸಂಕರಿತ ಪ್ರೇರಣೆಗಳಿಂದ ಸಾಹಿತ್ಯ ಪಠ್ಯದ ಸಾಂಸ್ಕೃತಿಕ ಓದುಗಳು ಆರಂಭವಾಗಿ ದಶಕಗಳೇ ಕಳೆದಿವೆ. ಇವು ರೂಪನಿಷ್ಠ ಓದಿಗೆ ಪ್ರತಿಕ್ರಿಯೆ ಎಂಬಂತಿವೆ. ಅಡಿಗರ ಕಾವ್ಯವನ್ನು ಕುರಿತಂತೆ ಈ ಓದುಗಳು ಸೂಕ್ಷ್ಮವಾದ ವ್ಯಾಖ್ಯಾನವನ್ನು ನೀಡುತ್ತಲೇ ಅಲ್ಲಿಯ ಸನಾತನತೆ, ಪುನರುತ್ಥಾನವಾದ, ಕೋಮುವಾದಗಳನ್ನು ಕುರಿತು ನಿಷ್ಠುರ ವಿಮರ್ಶೆ ಮಾಡುತ್ತ ಹೊಸ ಓದನ್ನು ಆರಂಭಿಸಲು ಸೂಚನೆ ನೀಡುತ್ತವೆ. ಡಿ.ಆರ್. ನಾಗರಾಜ್ ಅವರು 'ಶಕ್ತಿ ಶಾರದೆಯ ಮೇಳ'ದಂಥ ಆಧುನಿಕ ಕನ್ನಡ ಕಾವ್ಯಾಧ್ಯಯನಕ್ಕೆ ಮೀಸಲಾದ ಸಂಶೋಧನಾ ಗ್ರಂಥದಲ್ಲಿ ಅಡಿಗರ ಕಾವ್ಯಕ್ಕೆ ತುಂಬಾ ಕಡಿಮೆ ಸ್ಪೇಸ್ ನೀಡಿ ರುವುದು ಏನನ್ನು ಸೂಚಿಸುತ್ತದೆ? ಅಡಿಗರ ಕಾವ್ಯದ ಸರ್ವಾಧಿಕಾರ-ವಿರೋಧಿ ನೆಲೆಗಳನ್ನು ಗುರುತಿಸುತ್ತ ಅವರ ಕಾವ್ಯದಲ್ಲಿಯೇ ಇರುವ ಸರ್ವಾಧಿಕಾರಿ ನೆಲೆಗಳ ಅಧ್ಯಯನಕ್ಕೆ ಚಾಲನೆ ನೀಡಿದ್ದಾರೆ "ಆಶೀಷ್ ನಂದಿ ಭಾರತೀಯ ಸರ್ವಾಧಿಕಾರತ್ವದ ಇನ್ನೊಂದು ಮುಖ್ಯಗುಣವನ್ನು ಹೇಳುತ್ತಾರೆ. ಅದು ಭೂತದ ಬಗೆಗಿನ ನಾಸ್ಟಾಲ್ಜಿಯಾ. ಕಲ್ಪಿತ ಸ್ವರ್ಣಯುಗ ಒಂದರ ಬಗೆಗಿನ ಗಾಢ ಹಂಬಲ. ಈ ಕಾರಣದಿಂದಾಗಿಯೇ ಮಾತೃಭೂಮಿ ಮಾತೃಧರ್ಮ ಎಂದೆಲ್ಲಾ ಕೂಗುವ ರಿವೈವರಿಸ್ಟರು ಈ ನಾಡಿನ ಸರ್ವಾಧಿಕಾರತ್ವದ ಪ್ರತಿನಿಧಿಗಳೆಂದು ಅವರ ನಿಲುವು. ಈ ಹಿನ್ನೆಲೆಯಿಂದ ಅಡಿಗರ ಕಾವ್ಯದ ಸರ್ವಾಧಿಕಾರಿ ನೆಲೆಗಳನ್ನು ಪರೀಕ್ಷಿಸುವುದು ತುಂಬಾ ಜವಾಬ್ದಾರಿಯ ಕೆಲಸ" (ಶಕ್ತಿಶಾರದೆಯ ಮೇಳ, 321). ಲಂಕೇಶ್ ಅವರನ್ನು ಬಿಟ್ಟರೆ ಅಡಿಗರ ಕಾವ್ಯದ ಈ ನೆಲೆಗಳ ಬಗ್ಗೆ ಅತ್ಯಂತ ನಿಷ್ಠುರವೂ ಸೂಕ್ಷ್ಮವೂ ಆದ ಒಳನೋಟಗಳನ್ನು ನೀಡಿದವರು ಎಚ್. ಎಸ್. ಶಿವಪ್ರಕಾಶ್. ಅಡಿಗರದ್ದು ವ್ಯಕ್ತಿವಾದಿ ಪುರುಷಪ್ರಜ್ಞೆ ಎಂದು ಗುರುತಿಸುತ್ತ "ಅಡಿಗರ ಪರಂಪರೆ ಇಡೀ ಭಾರತೀಯ ಪರಂಪರೆಯಲ್ಲ, ಇಡೀ ಭಾರತೀಯ ಪರಂಪರೆಯೊಂದಿದೆ ಅನ್ನುವುದೇ ಪೂರ್ವವಾದಿಗಳು ಮತ್ತು ಹಿಂದೂ ರಾಷ್ಟ್ರೀಯವಾದಿಗಳ ಕಲ್ಪನೆ. ಅಡಿಗರಿಗೆ ಆರ್ಯ ಸಂಸ್ಕೃತಿಯೊಂದೇ ಆದರ್ಶದ ಸಂಕೇತಗಳ ಭಂಡಾರ", "ಜನಪದ ಆರಾಧ್ಯ ಸಂಕೇತಗಳು ಅಡಿಗರು ತಮ್ಮ ಕಾವ್ಯದಿಂದ ತಮ್ಮ ಜಗತ್ತಿನಿಂದ ಉಚ್ಚಾಟನೆ ಮಾಡಬಯಸಿದ ರಾಕ್ಷಸಿ ಸಂಸ್ಕೃತಿಯ ಪ್ರತಿಮೆಗಳು" (ಪ್ರತಿಮಾಲೋಕ, 361). ಈ ಸೂಕ್ಷ್ಮದ ಬೆನ್ನುಹತ್ತಿ ಅಡಿಗರ ಕಾವ್ಯದ ಪ್ರತಿಮಾಲೋಕವನ್ನು ಪ್ರವೇಶಿಸಿದರೆ ಅಡಿಗರ ಕೋಮುವಾದಿ ನೆಲೆಗಳು ಸ್ಪಷ್ಟವಾಗ ತೊಡಗುತ್ತವೆ. ಚಂದ್ರಶೇಖರ ನಂಗಲಿಯವರು 'ಪಾಂಚಜನ್ಯ'ದ ಅಡಿಗರಲ್ಲಿ "ಅಮಾಯಕ ಮುಗ್ಧ ಜನರ ಬಾಳಿನಲ್ಲಿ ಚೆಲ್ಲಾಟವಾಡುವ ಹಿಂದೂ ಜೆಹಾದಿ"ಯನ್ನು ಕಂಡಿದ್ದಾರೆ. "ಹಿಂದುತ್ವ ಮತ್ತು ಸ್ವದೇಶಿ ವಾದಗಳಿಂದ ಅಬ್ಬರಿಸಿ ಬೊಬ್ಬಿರಿಯುತ್ತಿರುವ ಮತೀಯರಾಜಕಾರಣದ ಹಿನ್ನೆಲೆಯಲ್ಲಿ ನೋಡಿದರೆ ಅಡಿಗರ ಕಾವ್ಯದಲ್ಲಿರುವ ಪರದೇಶಿನಗೆಯ ಕೋಲಾಹಲ, ಪಡುವಲದ ಗಾಳಿ, ಫರಂಗಿ ರೋಗ, ಪಶ್ಚಿಮದ ಸಂರುಷಾವಾತ, ಪರಾನುಕರಣೆಯ ಪರಾಕಾಷ್ಠೆ ಮುಂತಾದ ನುಡಿಗಟ್ಟುಗಳ ಹಿಂದಿರುವ ವೈಚಾರಿಕತೆಯನ್ನು ಸಂದೇಹಿಸು ವಂತಾಗುತ್ತದೆ" ಎಂಬ ಅವರ ಮಾತು ಅಡಿಗರ ಕಾವ್ಯದ ಹಿಂದೂತ್ವ ಪ್ರಜ್ಞೆಯ ಬಗ್ಗೆ ಚಿಂತಿಸಲು ಸೂಚನೆ ನೀಡುತ್ತದೆ.



ಒಂದು ಬಗೆಯ ಆತಂಕ ಮನೆ ಮಾಡಿದಂತಿದೆ. ಡಾ.ರಹಮತ್ ತರೀಕೆರೆಯವರೂ ಕೂಡ ಅಡಿಗರ ಸೃಷ್ಟಿ ಮೀಮಾಂಸೆಯನ್ನು ರಾಜಕೀಯ ತಾತ್ವಿಕತೆಯ ಪ್ರಸ್ತಾಪವಿಲ್ಲದೇ ಚರ್ಚಿಸಿದ್ದಾರೆ (ಅದೇ 307). ಡಾ.ಎಂ.ಎಸ್.ಆಶಾದೇವಿಯವರು ಅಡಿಗರ ಜನಸಂಘದ ಸಂಪರ್ಕದಿಂದ ಅವರ ಕಾವ್ಯದ ನಿಜಮೌಲ್ಯ ಮಾಪನ ನಡೆದಿಲ್ಲವೆಂದು ಕೊರಗಿದ್ದಾರೆ (ಅದೇ 105). ಡಾ.ಚಂದ್ರಶೇಖರ ನಂಗಲಿಯವರು ಅಡಿಗರ ಜಾತೀವಾದ ಮತೀಯವಾದಗಳೇನೇ ಇದ್ದರೂ ಅವರ ರೂಪಕಗಳು ಬಹುತ್ವದ ಕಡೆಗೆ ಚಲಿಸುತ್ತವೆಂದು ಹೇಳುತ್ತಾರೆ. ಡಾ.ರಾಜೇಂದ್ರ ಚೆನ್ನಿಯವರು ಅಡಿಗರ ಸಾಂಪ್ರದಾಯಕತೆ ಹಾಗೂ ಹಿಂದೂತ್ವದ ಸಾಂಪ್ರದಾಯಿಕತೆಗಳ ನಡುವೆ ವ್ಯತ್ಯಾಸ ಗುರುತಿಸುತ್ತಾರೆ. ಇಂಥಾ ಮಾತುಗಳ ಹಿಂದೆ 'ಅಡಿಗ ನಿಷ್ಠ ವಿಮರ್ಶಾ ಪರಂಪರೆ'ಯ ಭಾರ ಇದ್ದಿರಬಹುದೇ? ಯೋಚಿಸಬೇಕು. ಪತ್ರಿಕೆಯೊಂದರಲ್ಲಿ ಅಡಿಗಾನುಕರಣೀ ಕವಿಯೊಬ್ಬರು ಅಡಿಗರನ್ನು ಸಮರ್ಥಿಸುತ್ತ ನನಗೆ ಪರೋಕ್ಷವಾಗಿ ಪ್ರತಿಕ್ರಿಯಿಸಿದ್ದಾರೆ. ಸನಾತನಿಗಳಿಗೆ ಆಜ್ಞೆ ಮತ್ತು ತಂತ್ರಗಳು ಗೊತ್ತು, ಗುದ್ದಾಡುವವರು ಕಡೆಗೂ ರಾಜಶೇಖರ, ಫಣಿರಾಜರಂಥ ಸಮಾಜವಾದಿ ಹಿರಿಯರು.


ಅಡಿಗರ ಕಾವ್ಯದ ಹಿಂದೂತ್ವ ಸ್ವರೂಪ

'ನನ್ನ ವಿಮರ್ಶೆಗೆ ಅಡಿಗರ ಒಂದು ಪ್ರಚಾರ ಪದ್ಯಕ್ಕೂ ಅವರ ಕವಿತ್ವ ಶಕ್ತಿಗೂ ನಡುವೆ ಇರುವ ಬಿರುಕು ಒಂದು ಸಮಸ್ಯೆಯೇ ಅಲ್ಲ' ಅನ್ನುವುದು ಫಣಿರಾಜರ ಆತಂಕ. ಆದರೆ ಅವೆರಡರ ನಡುವೆ ಇರುವ ಕರುಳುಬಳ್ಳಿ ಸಂಬಂಧ ಫಣಿರಾಜರಿಗೇಕೆ ಮುಖ್ಯವಾಗುವದಿಲ್ಲವೆನ್ನುವದು ನನ್ನ ಪ್ರಶ್ನೆ. ಅಡಿಗರು ಕನ್ನಡ ಸಾಹಿತ್ಯ ಕಂಡ ಮಹಾನ್ ಪ್ರತಿಭಾವಂತ ಕವಿ ಎನ್ನುವುದರ ಬಗ್ಗೆ ಎರಡು ಮಾತಿಲ್ಲ,



ವಾದ ಹಾಗೂ ವರ್ಗ, ವರ್ಣ, ಜಾತಿ, ಲಿಂಗ, ಧರ್ಮ ಆಧಾರಿತ ಅಸಮಾನತೆಗಳನ್ನು ಪ್ರತಿಪಾದಿಸುವುದು. ಅಡಿಗರ ನೂರಾರು ಕವಿತೆಗಳು ಈ ಚಹರೆಗಳಿಂದ ಜಡವಾಗಿವೆ. ಇದನ್ನು ಹಿಂದೂತ್ವದ ಸರಳ ಗ್ರಹಿಕೆಯೆನ್ನುವದಾದರೆ ಸಂತೋಷ.

'ಹೆಣ್ಣು', 'ಇಂದು ನಮ್ಮೀನಾಡು' ಕವಿತೆಗಳ ಮಾಲಿಕೆಗಳು ಅಡಿಗರ ಪ್ರತಿಗಾಮಿ ಚಲನೆಯ ಆರಂಭದ ಬಿಂದುಗಳು. ಇಲ್ಲಿಂದ ಆರ್ಷೇಯ ಪುರಾಣ ಪ್ರತಿಮೆಗಳೊಂದಿಗೆ ಗತಕಾಲದ ಅಸಮಾನತೆಯನ್ನೂ ಹೊತ್ತುತರುವ ಸಹಜ ಸೃಜನಶೀಲತೆ ಖಚಿತವಾಗಿ ಆರಂಭವಾಯಿತು. ಉದಾರವಾದ, ನಿರ್ಮತೀಯ ರಾಷ್ಟ್ರೀಯವಾದ, ರಮ್ಯತೆ, ಸಮತಾವಾದಗಳ ಪ್ರಭಾವವನ್ನು ಕಾವ್ಯ ಸಂವೇದನೆಯಾಗಿಸುವಲ್ಲಿ ಅಡಿಗರಿಗೆ ಒದಗದ ತೀವ್ರ ಸಂವೇದನಾಶೀಲತೆ ಹಾಗೂ ಸಂಕೀರ್ಣ ಭಾಷಾಭಿವ್ಯಕ್ತಿಗಳು ಪುನರುತ್ಥಾನವಾದಿ ಕವಿತೆಗಳಿಗೆ ಸಹಜವಾಗಿ ದಕ್ಕಿರುವುದು ಅವರ ಒಳತೋಟಿಯನ್ನು ಸೂಚಿಸುತ್ತದೆ. ಭೂತ, ರಾಮ ನವಮಿಯ ದಿವಸ, ಆನಂದತೀರ್ಥರಿಗೆ, ಆಗಬೋಟಿ, ಅಜ್ಜ ನೆಟ್ಟಾಲ, ಬತ್ತಲಾರದ ಗಂಗೆ, ಅಂತಃಕರಣ ಮೊದಲಾದ ಹಲವಾರು ಕವಿತೆಗಳಲ್ಲಿ ಸನಾತನ ಸಂಸ್ಕೃತಿ ಅಳಿದು ಹೋಗುತ್ತಿರುವ ಸಂಕಟ, ಆಕ್ರಂದನ ವಿದೆ. ಅದನ್ನು ಪುನರ್ ಪ್ರತಿಷ್ಠಾಪಿಸುವ ಹಠ ಮಾರಿತನವಿದೆ. ಈ ಮಾದರಿಯ ಕಾವ್ಯವನ್ನು ವಸಾಹತುಶಾಹಿ ಸಂಸ್ಕೃತಿಗೆ ಕಟ್ಟಿಕೊಂಡ 'ಕಲ್ಪಿತ ಸ್ವರ್ಣಗತ' ಎಂದು ಭಾವಿಸಿ ಅಡಿಗರ ಕಾವ್ಯವನ್ನು ಹೊಗಳಲಾಗಿದೆ. ಆದರೆ ಭಾರತದ ಬಹುಸಾಂಸ್ಕೃತಿಕ ಗತದ ಕಲ್ಪನೆ ಇಲ್ಲಿ ಇಲ್ಲ. ಕೇವಲ ಆರ್ಯ ಸಂಸ್ಕೃತಿಯ ಕಟ್ಟುವಿಕೆಯಿದೆ. ಇದಕ್ಕೆ ತಳಸಮುದಾಯಗಳನ್ನು ನಿಯಂತ್ರಿಸುವ ಪ್ರಬಲ ಉದ್ದೇಶವಿದೆ. ಗೊಂದಪುರ,



ಹಾಗೂ 'ಗಾಂಧೀ 1985' ಕವಿತೆಗಳಲ್ಲಿ ಗಾಂಧೀವಾದವನ್ನು ಆರ್.ಎಸ್.ಎಸ್. ನೆಲೆಯಿಂದಲೇ ವಿರೋಧಿಸಿದ್ದಾರೆ. 'ಬಹುಮತ'ದಲ್ಲಿ ಪ್ರಜಾಪ್ರಭುತ್ವವನ್ನು ವಿರೋಧಿಸುತ್ತಾರೆ. 'ಪಟ್ಟಭದ್ರರ ಸಿಂಹಾಸನದ ಮೇಲೆ' ಶೂದ್ರ ಸಂಹಾರಕ್ಕೆ ಪರಶುರಾಮನ ಕೊಡಲಿಗೆ ಆಹ್ವಾನ ನೀಡಿದ್ದಾರೆ. ಅಡಿಗರ ಕಾವ್ಯದಲ್ಲಿ ಕೆಲವು ವ್ಯಕ್ತಿಗತ ಕವಿತೆಗಳನ್ನು ಬಿಟ್ಟರೆ 'ಹೆಣ್ಣು' ಪುರುಷ ಸಾಧನೆಗೆ ಅಡ್ಡಗಾಲೆಂಬ ಪ್ರತಿಪಾದನೆಯೇ ಮುಖ್ಯವಾಗಿದೆ. ಲೈಂಗಿಕ ಪ್ರತೀಕಗಳಲ್ಲಿ ಹೆಣ್ಣಿನ ದೇಹವನ್ನು ಭೋಗದ ವಸ್ತುವಾಗಿ ಬಳಸುತ್ತಾರೆ. ಅಂಬೇಡ್ಕರ್, ಶಾಂತವೇರಿ ಗೋಪಾಲಗೌಡರಂಥವರನ್ನು ಆರ್ಷೇಯ ಋಷಿಗಳೆಂದು ಕರೆದು ಜೈನ, ಬೌದ್ಧಗಳನ್ನು ಹಿಂದೂ ಧರ್ಮದೊಳಗೆ ಅರಗಿಸಿಕೊಳ್ಳಲು ಯತ್ನಿಸಿದ ಬ್ರಾಹ್ಮಣ್ಯದ ತಂತ್ರವನ್ನು ಅನುಸರಿಸುತ್ತಾರೆ. ಇನ್ನೂ ಹಲವಾರು ಕವಿತೆಗಳನ್ನು ಮೇಲಿನ ಚಹರೆಗಳಿಗೆ ಉದಾಹರಿಸಬಹುದು.

ಅಡಿಗ ಕಾವ್ಯ ಕನ್ನಡ ಭಾಷೆಗೆ ಕೊಟ್ಟದ್ದೇನು?

ಅಡಿಗರ ಕಾವ್ಯ ಕನ್ನಡ ಭಾಷೆಗೆ ಹೊಸ ಕಸುವನ್ನು ನೀಡಿದೆ, ಅದರ ಅಂತರ್ಯವನ್ನು ವಿಸ್ತರಿಸಿದೆಯೆಂಬ ಹೇಳಿಕೆಯನ್ನು ಮತ್ತೊಮ್ಮೆ ಮರು ಪರಿಶೀಲಿಸಬೇಕಿದೆ. ಬೇಂದ್ರೆ ಜನಪದ ನುಡಿಗಟ್ಟನ್ನು ಕಸಿಮಾಡಿ ಹಾಗೂ ಕುವೆಂಪು ವೈಚಾರಿಕ ಚಿಂತನೆಗಳನ್ನು ಧಾರೆ ಎರೆಯುವ ಮೂಲಕ ಕನ್ನಡ ಕಾವ್ಯ ಭಾಷೆ ಹಾಗೂ ಜನಭಾಷೆಗಳಿಗೆ ಹೊಸ ಕಸುವನ್ನು ನೀಡಿದರು. ಜಮೀನ್ದಾರಿ, ಅರಸೊತ್ತಿಗೆ, ಧಾರ್ಮಿಕ ಮೂಲಭೂತವಾದಿತನಗಳನ್ನು ಮೀರಿದ ಉದಾರವಾದಿ ಚಿಂತನೆಗಳಿಂದ (ಅಪವಾದವಿರಬಹುದು) ಹೊಸಗನ್ನಡಕ್ಕೆ ಹೊಸಶಕ್ತಿಯನ್ನು ತುಂಬಿದರು. ಜನಪದ ಹಾಗೂ ಪುರಾಣ ಪ್ರತೀಕಗಳನ್ನು ಮುರಿದು ಕಟ್ಟಿ ಕಾವ್ಯಭಾಷೆ ಮತ್ತು ಜನಭಾಷೆಗಳ ನಡುವೆ ಅವಿನಾಭಾವ ಸಂಬಂಧವನ್ನು ಬೆಸೆದರು. ಆದರೆ ಅಡಿಗರು ಪಶ್ಚಿಮ ಹಾಗೂ

> ಅಡಿಗರ ಕಾವ್ಯ ಕನ್ನಡ ಭಾಷೆಗೆ ಹೊಸ ಕಸುವನ್ನು ನೀಡಿದೆ, ಅದರ ಅಂತರ್ಯವನ್ನು ವಿಸ್ತರಿಸಿದೆಯೆಂಬ ಹೇಳಿಕೆಯನ್ನು ಮತ್ತೊಮ್ಮೆ ಮರು ಪರಿಶೀಲಿಸಬೇಕಿದೆ. ಬೇಂದ್ರೆ ಜನಪದ ನುಡಿಗಟ್ಟನ್ನು ಕಸಿಮಾಡಿ ಹಾಗೂ ಕುವೆಂಪು ವೈಚಾರಿಕ ಚಿಂತನೆಗಳನ್ನು ಧಾರೆ ಎರೆಯುವ ಮೂಲಕ ಕನ್ನಡ ಕಾವ್ಯ ಭಾಷೆ ಹಾಗೂ ಜನಭಾಷೆಗಳಿಗೆ ಹೊಸ ಕಸುವನ್ನು ನೀಡಿದರು. ಜಮೀನ್ದಾರಿ, ಅರಸೊತ್ತಿಗೆ, ಧಾರ್ಮಿಕ ಮೂಲಭೂತವಾದಿತನಗಳನ್ನು ಮೀರಿದ ಉದಾರವಾದಿ ಚಿಂತನೆಗಳಿಂದ (ಅಪವಾದವಿರಬಹುದು) ಹೊಸಗನ್ನಡಕ್ಕೆ ಹೊಸಶಕ್ತಿಯನ್ನು ತುಂಬಿದರು. ಜನಪದ ಹಾಗೂ ಪುರಾಣ ಪ್ರತೀಕಗಳನ್ನು ಮುರಿದುಕಟ್ಟಿ ಕಾವ್ಯಭಾಷೆ ಮತ್ತು ಜನಭಾಷೆಗಳ ನಡುವೆ ಅವಿನಾಭಾವ ಸಂಬಂಧವನ್ನು ಬೆಸೆದರು.

ಅನಂತಮೂರ್ತಿಯವರ ಅಡಿಗರ ಕಾವ್ಯದ ಸಂಸ್ಕೃತಿ ನಿಷ್ಕರ್ಷೆಯ ವಿಧಾನವನ್ನು ಪ್ರಶ್ನಿಸುವ ಡಾ. ರಾಜೇಂದ್ರ ಚೆನ್ನಿಯವರು "ಅಡಿಗರ ಕಾವ್ಯ ಹಾಗೂ ಅದು ಮಾಡುವ ನಿಷ್ಕರ್ಷೆಯ ಬಗ್ಗೆ ನಮ್ಮ ದೊಡ್ಡ ಜನಗಳ ಪ್ರಶ್ನೆಗಳು ಇವೆ" "ಅಡಿಗರ ಕಾಳಜಿಗಳೇ ಸಂಸ್ಕೃತಿಯ ಕಾಳಜಿಗಳು ಅಂದರೆ ಬಹಳ ತೊಂದರೆ ಉಂಟಾಗುತ್ತದೆ. ನಮ್ಮ ಚರಿತ್ರೆಯನ್ನೇ ನಿಜವಾಗಿ ನೋಡಿದರೆ ಅಲ್ಲೇನು ನಡೀತಾ ಇತ್ತು? ಜಾತಿ ವ್ಯವಸ್ಥೆಗಳಲ್ಲಿ ಏನಾಗ್ತಾ ಇತ್ತು? ಕೆಳವರ್ಗದ ಅಪೇಕ್ಷೆಗಳು ಏನಾಗಿದ್ದವು? ಹೇಗೆ ಅವು ಸಂಸ್ಕೃತಿಯ ರಾಜಕಾರಣದಲ್ಲಿ ಪ್ರವೇಶ ಮಾಡಲು ಪ್ರಯತ್ನ ಮಾಡ್ತಾ ಇದ್ದವು ಅನ್ನೋದು ಮುಖ್ಯ" (ಅದೇ 304). ಈ ಪ್ರಶ್ನೆಗಳಲ್ಲಿ ಅಡಿಗರ ಭೂತಾರಾಧನೆಯ ಕಾರಣ ಮತ್ತು ಪರಿಣಾಮಗಳು ಗೋಚರಿಸುತ್ತವೆ.



ರಾಜಶೇಖರ ಮತ್ತು ಫಣಿರಾಜ್ ಅವರು ಸಮಾಜವಾದಿಗಳಾಗಿದ್ದು ಅಡಿಗರ ನಿಷ್ಠೆಯಿಂದ 'ರೂಪನಿಷ್ಠ' ನೆಲೆಯಲ್ಲಿ ನಿಂತು ಅತ್ತ ಎಡಪಂಥೀಯ ಓದುಗಳ ಮೇಲೆ ಕಲ್ಲು ಒಗೆಯುತ್ತ, ಇತ್ತ ಸಾಂಸ್ಕೃತಿಕ ಓದುಗಳಿಗೆ ಪರೋಕ್ಷ ಸವಾಲುಗಳನ್ನು ನೀಡುತ್ತ ಇರುವುದು ಸ್ಪಷ್ಟವಾಗಿಯೇ ಇದೆ. ನಾನು ಈ ಓದುಗಳು ಸೂಚಿಸಿದ ಅಡಿಗರ ಜಗತ್ತಿನ ಇನ್ನೊಂದು ಲೋಕವನ್ನು ವಿಸ್ತೃತವಾಗಿ ಪ್ರವೇಶ ಮಾಡಲು ಪ್ರಯತ್ನಿಸಿದ್ದೇನೆ, ಪಾಲ್ ದಿಮ್ಯಾನ್ ಹೇಳುವ "ಎಲ್ಲ ಓದುಗಳೂ ತಪ್ಪ ಓದುಗಳೇ" ಎಂಬ ಎಚ್ಚರದಿಂದ.

ಆಧುನಿಕ ಕನ್ನಡ ಕಾವ್ಯದಲ್ಲಿ ಅಡಿಗರನ್ನು ಸರ್ವಶ್ರೇಷ್ಠ ಕವಿ ಎಂದು ಪ್ರತಿಷ್ಠಾಪಿಸುವ ವಿಮರ್ಶಾ ರಾಜಕಾರಣ ಎಷ್ಟು ಪ್ರಬಲವಾಗಿದೆಯೆಂದರೆ ಇಂದಿಗೂ ಅಡಿಗರ ಕಾವ್ಯದ ಮಿತಿಗಳ ಬಗ್ಗೆ ಮಾತನಾಡಲು ಸಾಂಸ್ಕೃತಿಕ ಜಗತ್ತಿನ ಆಳದಲ್ಲಿ

ಆದರೆ ಸಂಕೀರ್ಣವಾದ ಕಾವ್ಯದ ನಿತ್ಯಹರಿದ್ವರ್ಣ ಕಾಡನ್ನು ಸೃಷ್ಟಿಸಬೇಕಾದ ಆ ಮಹಾನ್ ಪ್ರತಿಭೆ ಪುನರುತ್ಥಾನ ಹಿಂದೂತ್ವಗಳ ಭಂಗಿಮರಗಳನ್ನು ನೆಟ್ಟಿತಲ್ಲ ಎಂಬ ಗಾಢ ವಿಷಾದ ಮತ್ತು ನೋವು ನನ್ನದು. ಫಣಿರಾಜ್ ಮತ್ತು ರಾಜಶೇಖರರು ಅಡಿಗರು ಬರೆದದ್ದು ಒಂದೇ ಕೆಟ್ಟ ಪ್ರಚಾರ ಪದ್ಯವೆಂಬ ಮಾತನ್ನು ಪದೇ ಪದೇ ಆಡಿದ್ದಾರೆ. 'ಮತ್ತೆ ಮೊಳಗಲಿ ಪಾಂಚಜನ್ಯ' ಹಿಂದೂತ್ವದ ಪ್ರಣಾಳಿಕೆಯ ಸ್ವರೂಪದ ಕವಿತೆ. ರಾಜಕೀಯ ಪಕ್ಷಗಳಿಗೆ ಪ್ರಣಾಳಿಕೆ ಒಂದೇ ಇರುತ್ತದೆ ಮತ್ತು ಕಾಲಕಾಲಕ್ಕೆ ಅದು ಬದಲಾಗುತ್ತದೆ. ಆದರೆ ಅದು ಅನೇಕ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಅಡಿಗರ ಕಾವ್ಯವೆಂಬ ಸಾಂಸ್ಕೃತಿಕ ಸಂಸ್ಥೆ ಪ್ರಣಾಳಿಕೆಯ ಸ್ವರೂಪದಲ್ಲಿ ಒಂದೇ ಕವಿತೆಯನ್ನು ಬರೆಯುವುದು ಸಹಜ. ಆದರೆ ವಿಭಿನ್ನ ಕಾರ್ಯಕ್ರಮಗಳು ಹಾಗೂ ಕಾಲಕ್ಕೆ ತಕ್ಕಂತ ಬದಲಾವಣೆಗಳು ಅವರ ನೂರಾರು ಕವಿತೆಗಳಲ್ಲಿ ಹಾಸುಹೊಕ್ಕಾಗಿವೆ. ಪ್ರಣಾಳಿಕೆ ಪದ್ಯಗಳಿಗಿಂತಲೂ ಇತರ ಪದ್ಯಗಳೇ ಅಪಾಯಕಾರಿ.

ಕೋಮುವಾದವು ಧಾರ್ಮಿಕ ಮುಖವಾಡತೊಟ್ಟ ರಾಜಕೀಯ ಆರ್ಥಿಕ ಚಿಂತನಾ ಕ್ರಮ ಹಾಗೂ ಕಾರ್ಯಾಚರಣೆಯಾಗಿದೆ. ಅರಸೊತ್ತಿಗೆ ಹಾಗೂ ಜಮೀನ್ದಾರೀ ವ್ಯವಸ್ಥೆಗಳಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದ ಮೇಲು ಜಾತಿ ಮೇಲು ವರ್ಗಗಳು ಬದಲಾದ ವಸಾಹತುಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಗಳಲ್ಲಿ ತಮ್ಮ ಪೂರ್ವ ಸ್ಥಾನಗಳನ್ನು ಪುನರುತ್ಥಾನಗೊಳಿಸಿಕೊಳ್ಳುವ ಹೋರಾಟವಾಗಿದೆ. ಇದಕ್ಕೆ ಎರಡು ಧರ್ಮಗಳ ಮೇಲು ವರ್ಗಗಳು ಹೊಸ ಅವಕಾಶಗಳಿಗಾಗಿ ನಡೆಸುವ ಸ್ಪರ್ಧೆಯ ಆಯಾಮವಿದೆ.




ಹಾಗೆಯೇ ಆ ಧರ್ಮಗಳು ತಮ್ಮತಮ್ಮ ತಳ ಸಮುದಾಯಗಳನ್ನು ಹಳೆಯ ವ್ಯವಸ್ಥೆಯಲ್ಲಿ ಬಂಧಿಸಿಡುವ ಹುನ್ನಾರವಿದೆ. ಹೊಸ ಅವಕಾಶಗಳಿಂದ ಅವರನ್ನು ವಂಚಿತರನ್ನಾಗಿಸಲು ಯತ್ನಿಸುತ್ತವೆ. ಹಿಂದೂತ್ವದ ಕೆಲವು ಚಹರೆಗಳೆಂದರೆ, ಅಲ್ಪಸಂಖ್ಯಾತವಾದ, ಸಮತಾವಾದ, ಶೂದ್ರವಾದ, ದಲಿತವಾದ, ಸ್ತ್ರೀವಾದಗಳನ್ನೂ ಅವುಗಳ ಪ್ರತಿಪಾದಕರನ್ನೂ ದಮನಿಸಲು ಯತ್ನಿಸುವುದು. ಪುನರುತ್ಥಾನ

ಹಿಮಗಿರಿಯ ಕಂದರ ಮಾದರಿಯ ಕವಿತೆಯಲ್ಲಿ ವ್ಯಕ್ತವಾದ ಆಧುನಿಕತೆಯ ಭೀಭತ್ಸತೆ ಈ ನೆಲದ ಸಹಜ ಸಂವೇದನೆಯೇ ಅಲ್ಲ ಪಶ್ಚಿಮದಿಂದ ಹೊತ್ತು ತಂದಿದ್ದು. ವಸಾಹತುಶಾಹಿ ಆಧುನಿಕತೆಯನ್ನು ಜಮೀನ್ದಾರೀ ವ್ಯವಸ್ಥೆಯಿಂದ ಬಿಡುಗಡೆ ಎಂದು ಭಾರತದ ತಳ ಸಮುದಾಯಗಳು ಸಂಭ್ರಮದಿಂದ ಸ್ವಾಗತಿಸಿವೆ. ಕವಿ ನೀಡುವ ನಗರದ ಚಿತ್ರಗಳು ಕಲ್ಪಿತ ಹಿಂಸೆಗಳು. ಒಂದು ಕಲ್ಪಿತ ವಿಕಾರೀ ಭೀಭತ್ಸ ಆಧುನಿಕತೆಯನ್ನು ಚಿತ್ರಿಸಿ ಅದಕ್ಕೆ ಪರ್ಯಾಯವೆಂದರೆ "ಕಲ್ಪಿತ ಸುವರ್ಣ ಭೂತ"ವೆಂಬ ಪ್ರತಿಪಾದನೆಯಿದೆ. 'ನಾನು ಹಿಂದೂ ನಾನು ಬ್ರಾಹ್ಮಣ', 'ನೆಲ ಸಪಾಟಲ್ಲ', 'ಹೊಸಯುಗಾದಿಗೆ' ಮೊದಲಾದ ಕವಿತೆಯಲ್ಲಿ ನೇರವಾಗಿ ಜಾತಿವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ. ಮೀಸಲಾತಿಯನ್ನು ವಿರೋಧಿಸುತ್ತಾರೆ. ಅವರ ಈ ಕವಿತೆಗಳು "ಹಿಂದೂ ಸಮಾಜ ವ್ಯವಸ್ಥೆಯಲ್ಲಿ ದೋಷಗಳು ಇವೆ ಯೆಂದು ಕೆಲವರು ಬೊಬ್ಬೆ ಹೊಡೆಯುತ್ತಾರೆ. ಆದರೆ ಅಂಥ ಯಾವ ದೋಷಗಳೂ ಸರ್ವಥಾ ಇಲ್ಲ, ನಮ್ಮ ಸನಾತನ ವೈಭವವನ್ನು ಪುನರ್‌ಸ್ಥಾಪಿಸಲು ಇದು ಯಾವರೀತಿಯಲ್ಲೂ ಮಾರಕವಾಗದು" (ನಾವು ಮತ್ತು ನಮ್ಮ ರಾಷ್ಟ್ರೀಯ ವ್ಯಾಖ್ಯೆ ಪು.63) ಎಂಬ ಎಂ.ಎಸ್. ಗೋಳ್ವಾಳ್ಕರ್ ಅವರ ಚಿಂತನೆಯನ್ನೇ ತೀವ್ರ ಸಂವೇದನಾಶೀಲತೆಯಲ್ಲಿ ಪ್ರಕಟಪಡಿಸುತ್ತವೆ. ಪಕ್ಷ, ಗಜೇಂದ್ರ ಮೋಕ್ಷ, ಎಡ-ಬಲ, ಡೊಂಕು ಬಾಲಕ್ಕೆ ಚಿನ್ನದ ನಳಿಕೆ, ಮೊದಲಾದ ಕವಿತೆಗಳಲ್ಲಿ ತಮ್ಮ ಬಲಪಂಥೀಯ ಬದ್ಧತೆಯ ಕಾರಣದಿಂದಲೇ ಎಡವಾದವನ್ನು ವಿರೋಧಿಸುವ ಬಗ್ಗೆ ಖಚಿತ ಪಡಿಸಿದ್ದಾರೆ. ಜಗತ್ತಿನ ಕಮ್ಯುನಿಷ್ಟ ಸರಕಾರಗಳ ಸರ್ವಾಧಿಕಾರಿ ನಡೆಯನ್ನು ಅಡಿಗರು ವಿರೋಧಿಸಿದರೆಂದು ಸಮರ್ಥಿಸಲಾಗುತ್ತದೆ. ಸರಿ, ಅದೇ ವೇಳೆಗೆ ಬಲಪಂಥೀಯ ಹಿಂಸೆಯನ್ನು ಪ್ರಚೋದಿಸಿದರಲ್ಲವೇ? ಜನಸಮುದಾಯವನ್ನು ನಿಕೃಷ್ಟವಾಗಿ ಕಾಣುವ ನಿಲುವು, ಎಮರ್ಜೆನ್ಸಿ ಪೂರ್ವ ಭಾರತದಲ್ಲಿಯೇ ಸರ್ವಾಧಿಕಾರದ ಬಹುದೊಡ್ಡ ಕಲ್ಪಿತ ಕ್ಯಾನ್‌ವಾಸ್ ಕೊಡುವುದು- ಇವೆಲ್ಲ ಬಲಪಂಥೀಯ ನೆಲೆಯಿಂದ ಎಡವಾದವನ್ನು ವಿರೋಧಿಸುವ ರೂಪಗಳು. 'ಗಾಂಧೀ ರಾಜ್ಯ'



ಆರ್ಯ ಚಿಂತನೆಗಳ ಆಡಿಯಾಳಾದರು. ಆ ಮೂಲಕ ಕನ್ನಡಕ್ಕೆ ಹರಿದು ಬಂದಿದ್ದು ಜೀವವಿರೋಧಿ ಚಿಂತನೆ. ಅವುಗಳನ್ನು ಅರ್ಥವಾಗದಂತೆ ಹೇಳುವ ಆಕರ್ಷಕ ಪುರಾಣ ಪ್ರತಿಮೆಗಳು ಹಾಗೂ ಆಧುನಿಕ ರೂಪಕಗಳು. ಅಡಿಗರ ಕಾವ್ಯವನ್ನು ಕನ್ನಡ ಪ್ರಜ್ಞೆ ಹಾಗೂ ಭಾಷೆಗಳು ಅರಗಿಸಿಕೊಂಡೇ ಇಲ್ಲ, ಅದೊಂದು ಅಜೀರ್ಣ ಕಾವ್ಯ. 'ಬೆರಳೆಣಿಕೆಯ ಶ್ರೇಷ್ಠ'ರಿಗೆ ಅರ್ಥವಾಗಿ ಅವರಿಂದ ಅನರ್ಥಕಾರಿ ವ್ಯಾಖ್ಯಾನಗಳನ್ನು ಪಡೆದ ಕಾವ್ಯ. ಓದುಗನಲ್ಲಿ ಕೀಳರಿಮೆಯನ್ನು ಸೃಷ್ಟಿಸಿ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಿದ ಕಾವ್ಯ. ಇಂದಿಗೂ ಕನ್ನಡ ಕಾವ್ಯ ಪರಂಪರೆಯಲ್ಲಿ ಜನಸಮುದಾಯದ ಮಟ್ಟಿಗೆ ದ್ವೀಪವಾಗಿ, ಅನಾಥವಾಗಿ, ಬಿದ್ದಿರುವ ಕಾವ್ಯ. ಪಂಪನಂಥ ಅರಸೊತ್ತಿಗೆ ಕಾಲದ ಕವಿ ಕಾವ್ಯದ ಹೊರರೂಪದಲ್ಲಿ ಪ್ರಭುತ್ವಪರತೆಯನ್ನು ಒಳರೂಪದಲ್ಲಿ ಜನಪರತೆಯನ್ನು ರೂಪಿಸಲು ಯತ್ನಿಸಿದ. ಅಡಿಗರು ಹೊರರೂಪದಲ್ಲಿ ಅರ್ಥವಾಗದ ಆಕರ್ಷಣೆಯನ್ನೂ ಒಳರೂಪದಲ್ಲಿ ಅಮಾನವೀಯ ಚಿಂತನೆಗಳನ್ನೂ ತುಂಬಿದರು. ಅಡಿಗರ ಕಾವ್ಯದ ಮೂಲಕ ಕನ್ನಡ ಕಾವ್ಯ ಭಾಷೆ ಸ್ವಲ್ಪಮಟ್ಟಿಗಾದರೂ ತನ್ನ ನೈತಿಕ ಕಸುವನ್ನು ಕಳೆದುಕೊಂಡಿತು.

ಗೋಪಾಲಕೃಷ್ಣ ಅಡಿಗರಂಥ ಮಹತ್ವದ ಕವಿಯನ್ನು ಸಂಪೂರ್ಣವಾಗಿ ತಿರಸ್ಕರಿಸುವ ಇರಾದೆ ನನ್ನದಲ್ಲ. ಅಡಿಗರು ನನ್ನಂಥವನನ್ನು ಮತ್ತೆ ಮತ್ತೆ ಕಾಡುವುದು, ಆಳಕ್ಕೆ ಇಳಿಯುವುದು, ಅಂತಃಕರಣವನ್ನು ತಟ್ಟುವುದು ಅವರ ಸಹಜ ಕಾವ್ಯದಿಂದ. ವ್ಯಕ್ತಿಗತ ಬದುಕಿನ ಪ್ರಾಮಾಣಿಕ ಅನುಭವಗಳನ್ನು ತೀವ್ರವಾಗಿ ದಾಖಲಿಸುವ 'ಒಳ ತೋಟಿ', 'ಮೌನದ ಸುವರ್ಣ ಪುತ್ಥಳಿ', 'ತೀರ್ಥರೂಪರಿಗೆ', 'ನಮ್ಮ ಹುಟ್ಟು', 'ನರಸಿಂಗನನ್ನು ನೆನೆದು', 'ಚಿಂತಾಮಣಿಯಲ್ಲಿ ಕಂಡ ಮುಖ'ಗಳಂಥ ಕವಿತೆಗಳಿಂದ. 'ಒಳ್ಳೆಯತನ ಸಹಜವಲ್ಲ', 'ಸಾಮಾನ್ಯನಂತೆ ಈ ನಾನು' ಕವಿತೆಗಳ ಸಹಜ ದಾರ್ಶನಿಕತೆಯಿಂದ. 'ಮನೆಯಿಲ್ಲದವರು' ಕವಿತೆಯ ಸಾಮಾಜಿಕ ಸ್ಪಂದನಶೀಲತೆಯಿಂದ. 'ವಿಮರ್ಶಕ', 'ಹೇಳಬೇಕಾದದ್ದು ಕವಿತೆಗಳ' ಸೃಜಶೀಲ ಎಚ್ಚರದಿಂದ. ಇವೆಲ್ಲದರಾಚೆ ಬೇಂದ್ರೆಯವರ ನಂತರ ನಾನು ಅತಿ ಹೆಚ್ಚು ಪ್ರೀತಿಯಿಂದ ನೆನಪಿಟ್ಟುಕೊಂಡ ಸಾಲುಗಳು ಅಡಿಗರದ್ದೇ. ಈಗ ಹೆಚ್ಚು ಚರ್ಚೆಯಾಗಬೇಕಾದದ್ದು ಅಡಿಗರ ಸಹಜಕಾವ್ಯದ ಬಗ್ಗೆ.


ಪಲ್ಲವಿ ಚಿತ್ರದಲ್ಲಿ ಲಂಕೇಶ್....

ಪ್ರಶಸ್ತಿ ಪಡೆಯಲು ದೆಹಲಿಗೆ ಪಯಣ

'ಪಲ್ಲವಿ' ಶಿವಮೊಗ್ಗೆಯಲ್ಲಿ ಬಿಡುಗಡೆಗೊಂಡಾಗ ಅದನ್ನು ನೋಡಲು ಲಂಕೇಶರ ಕೂನಗವಳ್ಳಿಯ ಅರ್ಧಕ್ಕರ್ಧ ಜನ ಶಿವಮೊಗ್ಗೆಗೆ ಹೋಗಿದ್ದರು. ಆ ಚಿತ್ರವನ್ನು ನೋಡಿದ ನಂತರ ಮಾವ ನಂದೀಬಸಪ್ಪನವರು "ತಾಯಿ, ಆ ಸಿನಿಮಾದಲ್ಲಿ ನನಗೆ ಏನೂ ಅರ್ಥವಾಗಲಿಲ್ಲ. ಆ ಹುಡುಗಿಯನ್ನ ಎಲ್ಲಿಂದ ಹಿಡಿದುಕೊಂಡು ಬಂದ ಲಂಕೇಶಪ್ಪ? ಅವನಿಗೆ ಬೇರೆ ಯಾರೂ ಸಿಗಲಿಲ್ಲವಾ?'' ಎಂದು ನನ್ನನ್ನು ಕೇಳಿದ್ದರು.

ಲಂಕೇಶರ ತಂದೆ ನಂದೀಬಸಪ್ಪನವರು ಶಿವಮೊಗ್ಗೆಯಲ್ಲಿ ಕಟ್ಟಿಸಿದ್ದ ಹಿಂದೊಮ್ಮೆ ನನ್ನ ಅಪ್ಪಯ್ಯ ಬಾಡಿಗೆಗೆ ಪಡೆದಿದ್ದ, ಆನಂತರ ನಾವಿಬ್ಬರೂ ನಮ್ಮ ದ್ಹಾಂಪತ್ಯ ಜೀವನವನ್ನು ಪ್ರಾರಂಭಿಸಿದ್ದ ಮನೆ ಇತ್ತು, ಅದು ಜೋಡಿ ಮನೆಯಾಗಿದ್ದು ಅವುಗಳಲ್ಲಿ ಒಂದು ಲಂಕೇಶರ ಅಣ್ಣ ಶಿವರುದ್ರಪ್ಪನವರ ಪಾಲಾಗಿದ್ದರೆ ಇನ್ನೊಂದು ಲಂಕೇಶರ ಪಾಲಿಗೆ ಬಂದಿತ್ತು. ಲಂಕೇಶರು ತಮ್ಮ ಅಣ್ಣ ತನಗಿಂತ ಹೆಚ್ಚು ಮಕ್ಕಳನ್ನು ಹೊಂದಿದ್ದರಿಂದ ಮತ್ತು ತಾನು ತನ್ನ ಅಣ್ಣನಿಗಿಂತ ಹೆಚ್ಚು ವಿದ್ಯೆಯನ್ನು ಪಡೆದಿದ್ದರಿಂದ ತಮ್ಮ ಪಾಲಿಗೆ ಬರಬೇಕಿದ್ದ ಕೊನಗವಳ್ಳಿಯ ಜಮೀನನ್ನೆಲ್ಲ ತನ್ನ ಅಣ್ಣನಿಗೆ ಬಿಟ್ಟು ಈ ಒಂದು ಮನೆಯನ್ನು ಮಾತ್ರ ಪಡೆದಿದ್ದರು.

ಅವತ್ತು ಲಂಕೇಶರ ಹೆಸರಲ್ಲಿದ್ದದ್ದು ಇದೊಂದೇ ಆಸ್ತಿ. ಸಿನಿಮಾ ಮಾಡಲು ಈ ಮನೆಯನ್ನು ಲಂಕೇಶರು ಮಾರಿದರು. ಆದರೆ ಅದಕ್ಕೆಂದು ಬಂದದ್ದು 45,000 ರೂಪಾಯಿಗಳು. ಸಿನಿಮಾಗೆ ಅದಕ್ಕಿಂತ ಹೆಚ್ಚು ಹಣ ಬೇಕಿದ್ದರಿಂದ ಲಂಕೇಶರು ಹಲವು ಗೆಳೆಯರಿಂದ ಮತ್ತು ಬ್ಯಾಂಕ್‌ನಿಂದ ಸಾಲ ಪಡೆದರು.

ಈ ಸಿನಿಮಾಕ್ಕೆ ಲಂಕೇಶರು ಸಿ.ಎಂ.ಇಬ್ರಾಹಿಂ ಅವರನ್ನೇ ಹೀರೋ ಆಗಿಯೂ; ವಿಮಲಾ ನಾಯ್ಡು ಎಂಬಾಕೆಯನ್ನು ಹೀರೋಯಿನ್ ಆಗಿಯೂ ಆಯ್ಕೆ ಮಾಡಿದರು. ಚಿತ್ರದ ಇನ್ನೊಂದು ಮುಖ್ಯ ಪಾತ್ರಕ್ಕೆ ಟಿ.ಎನ್.ಸೀತಾರಾಂ ಆಯ್ಕೆಯಾದರು. 'ಪಲ್ಲವಿ' ಚಿತ್ರದ ಶೂಟಿಂಗ್ ಪ್ರಾರಂಭವಾಯಿತು. ಆಗ ಇಬ್ರಾಹಿಂ ಅವರನ್ನು ಚಿತ್ರೀಕರಣದ ಸ್ಥಳಕ್ಕೆ ಕರೆದುಕೊಂಡು ಬರುವ ಜವಾಬ್ದಾರಿಯನ್ನು ನನ್ನ ತಮ್ಮ ಶಿವಕುಮಾರ್‌ಗೆ ವಹಿಸಲಾಗಿತ್ತು, ಶಿವು ಕಷ್ಟ ಪಟ್ಟು ಇಬ್ರಾಹಿಂ ಅವರನ್ನು ಎದ್ದೇಳಿಸಿ ಕರೆದುಕೊಂಡು ಹೋಗುತ್ತಿದ್ದ.

ಇಬ್ರಾಹಿಂ ಗಟ್ಟುಮುಟ್ಟಾದ ವ್ಯಕ್ತಿಯಾಗಿದ್ದರೆ ಅವರ ಹೀರೋಯಿನ್ ಆಗಿ ನಟಿಸುತ್ತಿದ್ದ ವಿಮಲಾ ಸಣಕಲಿ. ಎಷ್ಟು ಸಣಕಲಿ ಎಂದರೆ ಆಕೆ ಕೈ ಚಾಚಿದರೆ ಅದು ಸೊಟ್ಟಗೆ ಕಾಣಿಸುತ್ತಿತ್ತು. ಆಕೆಯನ್ನು ಅದು ಹೇಗೆ ಲಂಕೇಶರು ಆಯ್ಕೆ ಮಾಡಿಕೊಂಡರು ಎಂದು ಎಲ್ಲರಿಗೂ ಅಚ್ಚರಿಯಾಗಿತ್ತು, ಒಮ್ಮೆ ಒಂದು ದೃಶ್ಯದಲ್ಲಿ ಇಬ್ರಾಹಿಂ ಆಕೆಯ ಗಲ್ಲವನ್ನು ಸವರಿ "ನೀನು ಎಷ್ಟು ಬ್ಯೂಟಿಫುಲ್ ಆಗಿದ್ದೀಯ" ಎನ್ನಬೇಕಿತ್ತು, ಆಗ ಇಬ್ರಾಹಿಂ "ಆಕೆಗೆ ನಾನು ಈ ಡೈಲಾಗ್ ಹೇಗೆ ಹೇಳಲಿ? ನನ್ನ ಬಾಯಿಂದ ಮಾತುಗಳು ಹೊರ ಬರುತ್ತಿಲ್ಲ" ಎಂದು ಶಿವಕುಮಾರ್ ಮುಂದೆ ತಮಾಷೆ ಮಾಡಿದ್ದರು.

ಶೂಟಿಂಗ್ ಪ್ರಾರಂಭವಾದ ಕೆಲ ದಿನಗಳ ನಂತರ ಇಂದಿರಾ ಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದರು. ಅಷ್ಟೇ ಅಲ್ಲ, ಅವತ್ತಿನ ಅರಸು ಸರ್ಕಾರ ಇಬ್ರಾಹಿಂ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಿತು. ಆಗ ಆ ಪಾತ್ರವನ್ನು ತಾವೇ ಮಾಡಲು ಲಂಕೇಶರು ನಿರ್ಧರಿಸಿದರು.


ಸಿನಿಮಾದ ಶೂಟಿಂಗಿಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಹಣ ಖರ್ಚಾಗುತ್ತಿತ್ತು, ಆಗ ಅದನ್ನು ಕಡಿಮೆ ಮಾಡಲು ಶೂಟಿಂಗ್ ಯೂನಿಟ್ಟನಲ್ಲಿದ್ದ 25ಕ್ಕಿಂತಲೂ ಹೆಚ್ಚು ಜನರಿಗೆ ನಾನೇ ಮನೆಯಲ್ಲಿ ಅಡುಗೆ ಮಾಡಿ ಕಳುಹಿಸಲು ಮುಂದಾದೆ. ಒಂದೆಡೆ ಅಷ್ಟೊಂದು ಜನಕ್ಕೆ ಊಟ, ಇನ್ನೊಂದೆಡೆ ಮಕ್ಕಳ ಜವಾಬ್ದಾರಿ... ಎರಡನ್ನೂ ಏಕಕಾಲದಲ್ಲಿ ನಿಭಾಯಿಸಲಾಗುವುದಿಲ್ಲವೆಂದು ನಮ್ಮ ಮಕ್ಕಳನ್ನು ಶಾಂತಾಳ ಮನೆಗೆ ಕಳುಹಿಸಿದೆ.

ಆಗ ಸಿನಿಮಾದ ಯೂನಿಟ್ಟಿನ ಎಲ್ಲರಿಗೂ ಅಡುಗೆ ಮಾಡಲು ನನಗೆ ನೆರವಾಗಲು ನಮ್ಮ ಮನೆ ಎದುರಿದ್ದ ಕೊಂಕಣಿ ಕುಟುಂಬದ ದಿನಕರ್ ಬಂದ. ನಾವಿಬ್ಬರೂ ಸೇರಿ ಅಡುಗೆ ಮಾಡುತ್ತಿದ್ದೆವು. ನನಗೆ ಸಹಾಯ ಮಾಡಿದ್ದಕ್ಕೆ ನಾನು ದಿನಕರನಿಗೆ ಒಂದು ವಾಚ್ ತೆಗೆದುಕೊಟ್ಟೆ. ಆಮೇಲೆ ಆ ಸಿನಿಮಾದ ಡಬ್ಬಿಂಗ್, ರೆಕಾರ್ಡಿಂಗ್ ಇತ್ಯಾದಿ ಕೆಲಸಗಳೆಲ್ಲ ನಡೆದಾಗ ತಾಂತ್ರಿಕ ವರ್ಗದವರಿಗೆ ಹೋಟೆಲ್ ರೂಮ್ ಮಾಡಲಾಗುವುದಿಲ್ಲವೆಂದು ಅವರೆಲ್ಲರಿಗೂ ನಮ್ಮ ಮನೆಯನ್ನೇ ಬಿಟ್ಟು ಕೊಟ್ಟು ಮಕ್ಕಳೊಂದಿಗೆ ಶಾಂತಾಳ ಮನೆ ಸೇರಿದೆ.

ಬಹಳ ಕಷ್ಟಪಟ್ಟು ಕೊನೆಗೂ ಲಂಕೇಶರು ಸಿನಿಮಾವನ್ನು ಮುಗಿಸಿದರು.

'ಪಲ್ಲವಿ' ಸಿನಿಮಾಕ್ಕೆ ಹಾಕಿದ್ದ ದುಡ್ಡು ವಾಪಸ್ ಬರದಿದ್ದರೆ ಅಂತ ಯೋಚಿಸಿದಾಗಲೆಲ್ಲ ನನಗೆ ಭಯವಾಗುತ್ತಿತ್ತು. ಲಂಕೇಶರೂ ಒಮ್ಮೆ "ಸಿನಿಮಾ ಫ್ಲಾಪ್ ಆದರೆ ನಮ್ಮ ಗತಿ ಏನು" ಅಂತ ನನ್ನ ತೊಡೆಯ ಮೇಲೆ ತಲೆ ಇಟ್ಟು ಅತ್ತುಬಿಟ್ಟರು. ಆಗ ನನ್ನನ್ನು, ನಮ್ಮ ಮಕ್ಕಳನ್ನು ಇನ್ನೊಬ್ಬಳಿಗಾಗಿ ತೊರೆದು ಹೋಗಲು ಸಿದ್ಧರಿದ್ದ ವ್ಯಕ್ತಿ ಇವರೇನಾ ಅನ್ನಿಸಿತ್ತು ನನಗೆ.


****



ಹೀಗೆ ಪ್ರೀತಿ ಇಲ್ಲದಿದ್ದರೂ ಸಹಮತವಿದ್ದ ಹೇಗಾದರೂ ಜೀವನವೆಂಬ ಪಯಣದಲ್ಲಿ ಸಾಗಬೇಕೆಂದಿದ್ದ ನನ್ನ ಮತ್ತು ಲಂಕೇಶರ ಜೀವನ ನಡೆಯುತ್ತಿತ್ತು, ಅಂತಹ ಒಂದು ದಿನ ನಾನು ಈ ಹಿಂದೆ ಬಿಚ್ಚಿಟ್ಟಿದ್ದ ತಾಳಿಯನ್ನು ಮತ್ತೆ ಹಾಕಿಕೊಳ್ಳಲು ಶುರುಮಾಡಿದೆ.

ಲಂಕೇಶರು ಆಗ ಅಧ್ಯಾಪಕರಾಗಿದ್ದರಿಂದ 'ಪಲ್ಲವಿ' ಚಿತ್ರವನ್ನು ಇಂದಿರಾ ಲಂಕೇಶ್ ಪ್ರೊಡಕ್ಷನ್ ಎಂಬ ಹೆಸರಿನಲ್ಲಿ ನಿರ್ಮಿಸಿದ್ದರು. 1977ರಲ್ಲಿ 'ಪಲ್ಲವಿ' ಚಿತ್ರಕ್ಕೆ

ದೆಹಲಿಯಲ್ಲಿ ಗೌರಿ, ಇಂದಿರಾ, ಅಜಿತ್, ಕವಿತಾ, ವಿಮಲಾ ಮತ್ತು ಅಪ್ಪಯ್ಯ



'ರಜತ ಕಮಲ' ಪ್ರಶಸ್ತಿಯ ಜೊತೆ ಲಂಕೇಶರಿಗೆ 'ಅತ್ಯುತ್ತಮ ನಿರ್ದೇಶಕ' ಪ್ರಶಸ್ತಿಯೂ ಪ್ರಕಟಗೊಂಡಿತು. ಅದನ್ನು ಕೇಳಿ ಲಂಕೇಶರಿಗೆ ಎಷ್ಟು ಸಂತೋಷವಾಯಿತೆಂದರೆ ಅವರನ್ನು ಹಿಡಿಯುವವರೇ ಇಲ್ಲದಂತಾಯಿತು.

ನನ್ನ ಮಾವ ನಂದೀಬಸಪ್ಪ ಮತ್ತು ನನ್ನ ಅಪ್ಪಯ್ಯ ಸೋಮಸುಂದರ್ ಅವರಿಗೂ ಲಂಕೇಶರಿಗೆ ರಾಷ್ಟ್ರ ಪ್ರಶಸ್ತಿ ಬಂದದ್ದು ಸಂತೋಷ ನೀಡಿತ್ತು, ನನ್ನ ಅಪ್ಪಯ್ಯನಂತೂ ತಮ್ಮ ಶಿವಮೊಗ್ಗೆಯ ಮನೆ ಮುಂದೆ ನಿಂತು ದಾರಿಯಲ್ಲಿ ಹೋಗುತ್ತಿದ್ದ ಕಂಡಕಂಡವರನ್ನೆಲ್ಲ ನಿಲ್ಲಿಸಿ "ನನ್ನ ಅಳಿಯನ ಪಿಕ್ಚರ್‌ಗೆ ನ್ಯಾಷನಲ್ ಅವಾರ್ಡ್ ಬಂದಿದೆ" ಎಂದು ಹಿಗ್ಗಿದ್ದರು.


'ಪಲ್ಲವಿ' ಶಿವಮೊಗ್ಗೆಯಲ್ಲಿ ಬಿಡುಗಡೆಗೊಂಡಾಗ ಅದನ್ನು ನೋಡಲು ಲಂಕೇಶರ ಕೂನಗವಳ್ಳಿಯ ಅರ್ಧಕ್ಕರ್ಧ ಜನ ಶಿವಮೊಗ್ಗೆಗೆ ಹೋಗಿದ್ದರು. ಆ ಚಿತ್ರವನ್ನು ನೋಡಿದ ನಂತರ ಮಾವ ನಂದೀಬಸಪ್ಪನವರು "ತಾಯಿ, ಆ ಸಿನಿಮಾದಲ್ಲಿ ನನಗೆ ಏನೂ ಅರ್ಥವಾಗಲಿಲ್ಲ, ಆ ಹುಡುಗಿಯನ್ನ ಎಲ್ಲಿಂದ ಹಿಡಿದುಕೊಂಡು ಬಂದ ಲಂಕೇಶಪ್ಪ? ಅವನಿಗೆ ಬೇರೆ ಯಾರೂ ಸಿಗಲಿಲ್ಲವಾ?" ಎಂದು ನನ್ನನ್ನು ಕೇಳಿದ್ದರು.

ಮಾವ ನಂದೀಬಸಪ್ಪನವರು ಆಗಾಗ ಬೆಂಗಳೂರಿಗೆ ಬರುತ್ತಿದ್ದರು. ಹಾಗೆ ಅವರು ಬಂದಾಗಲೆಲ್ಲ ನಾನು ತುಂಬಾ ಪ್ರೀತಿಯಿಂದ ಅವರಿಗೆ ಪಂಚೆ, ಶರ್ಟ್ ಬಟ್ಟೆ, ಶಾಲು ಇತ್ಯಾದಿಗಳನ್ನು ನಮ್ಮ ಮನೆಯ ಮಾಲೀಕರ ಒಡೆತನದ 'ಸಿದ್ಧೋಜಿ ರಾವ್ ಅಂಡ್ ಸನ್ಸ್' ಅಂಗಡಿಯಿಂದ ಖರೀದಿಸಿ ಕೊಡುತ್ತಿದ್ದೆ. ಒಮ್ಮೆ ನಾನು ಕೊನಗವಳ್ಳಿಗೆ ಹೋದಾಗ ನಾನು ನನ್ನ ಮಾವನವರಿಗೆಂದು ಕೊಡಿಸಿದ್ದ ಬಟ್ಟೆಗಳನ್ನೆಲ್ಲ ಭಾವ ಶಿವರುದ್ರಪ್ಪನವರ ಮಕ್ಕಳು ಹೊಲಿಸಿ ಹಾಕಿಕೊಂಡಿರುವುದನ್ನು ನೋಡಿದೆ. ಇದಾದ ನಂತರ ನಾನು ಮಾವನವರಿಗೆ ಮಾತ್ರ ಸೂಟ್ ಆಗುವಂತಹ, ಅವರು ಮಾತ್ರ ಬಳಸಬಹುದಾದಂತಹ ಬಟ್ಟೆಗಳನ್ನು ಕೊಡಿಸುತ್ತಿದ್ದೆ. ಅಥವಾ ನಾನೇ ಇಲ್ಲೇ ಹೊಲಿಸಿ ಕೊಡುತ್ತಿದ್ದೆ.

ಆಗ ಮಾವನವರಿಗೆ ವಯಸ್ಸಾಗಿತ್ತು. ಹಿಂದಿನಂತೆ ಅವರಿಂದ ಜಮೀನಿಗೆ ಹೋಗಿ ಕೆಲಸ ಮಾಡುವುದು ಆಗುತ್ತಿರಲಿಲ್ಲ. ಅವರ ಹಿರಿಯ ಪುತ್ರ ಶಿವರುದ್ರಪ್ಪನವರಿಗೆ ಜಮೀನಿಗೆ ಹೋಗಿ ಕೆಲಸ ಮಾಡುವುದು ಗೊತ್ತಿರಲಿಲ್ಲ. ಅಷ್ಟುಹೊತ್ತಿಗೆ ಭಾವನವರಿಗೆ ಹತ್ತು ಮಕ್ಕಳಾಗಿದ್ದವು. ಜವಾಬ್ದಾರಿ ಹೆಚ್ಚಾಗಿದ್ದರೂ ಅವರು ತಮ್ಮ ಪುಢಾರಿಗಿರಿಯನ್ನು ಬಿಡಲಿಲ್ಲ. ಇದೆಲ್ಲದರಿಂದಾಗಿ ಹಿಂದೊಮ್ಮೆ ನೆಮ್ಮದಿಯಿಂದಿದ್ದ ಸಾಕಷ್ಟು ಆಸ್ತಿಪಾಸ್ತಿ ಮಾಡಿಕೊಂಡಿದ್ದ ಕೊನಗವಳ್ಳಿ ಮನೆಯನ್ನು ಒಂದು ರೀತಿಯಲ್ಲಿ ಬಡತನ ಕಾಡಲಾರಂಭಿಸಿತು.

****

'ಪಲ್ಲವಿ' ಚಿತ್ರಕ್ಕೆ ಬಂದಿದ್ದ ಪ್ರಶಸ್ತಿಯನ್ನು ಪಡೆಯಲು ದೆಹಲಿಗೆ ಹೋಗುವ ತಯಾರಿ


ಕವಿತಾ, ವಿಮಲಾ, ಗೌರಿ, ಅಜಿತ್ ಮತ್ತು ಅಪ್ಪಯ್ಯ

ಶುರುವಾಯಿತು. ಲಂಕೇಶರಿಗೆ ನಿರ್ದೇಶಕನಾಗಿ ಪ್ರಶಸ್ತಿ ಬಂದಿದ್ದರೆ, ಅವರು ಸಿನಿಮಾವನ್ನು ನನ್ನ ಹೆಸರಲ್ಲಿ ನಿರ್ಮಿಸಿದ್ದರಿಂದ ನಾನೂ ಪ್ರಶಸ್ತಿ ಪಡೆಯಲಿದ್ದೆ. ಹೇಗಿದ್ದರೂ ಆ ಚಿತ್ರದ ನಿರ್ಮಾಣಕ್ಕೆ ನನ್ನ ಶ್ರಮ, ತ್ಯಾಗ ಮತ್ತು ಸೇವೆಯೂ ಇತ್ತಲ್ಲ.

ನನ್ನ ಅಪ್ಪಯ್ಯ "ನನ್ನ ಅಳಿಯ ರಾಷ್ಟ್ರಪತಿಯವರಿಂದ ಅವಾರ್ಡ್ ಪಡೆಯುವುದನ್ನು ನಾನು ನೋಡಬೇಕು" ಎಂದು ಊರಿಗೆ ಮುಂಚೆಯೇ ಹೊರಟು ನಿಂತರು. ಈಗ ಅಪ್ಪಯ್ಯನಿಗೆ ಲಂಕೇಶರ ಬಗ್ಗೆ ಕೋಪ, ಮನಸ್ತಾಪ ಇರಲಿಲ್ಲ. ಬದಲಾಗಿ ಹೆಮ್ಮೆ ಇತ್ತು, ಕಂಡಕಂಡವರಲ್ಲಿ "ಲಂಕೇಶರಿಗೇ ನನ್ನ ಮಗಳನ್ನು ಕೊಟ್ಟಿರುವುದು" ಎಂದು ಹೇಳಿಕೊಳ್ಳುತ್ತಿದ್ದರು. ಹಾ[...] ಹೇಳುವಾಗ ನನ್ನ ಹೆಸರನ್ನೂ ಹೇಳುವ ಅಗತ್ಯ ಅವರ[...] ಕಂಡುಬರುತ್ತಿರಲಿಲ್ಲ!

ಸಿನಿಮಾ ಮುಗಿದಿದ್ದರೂ ವಿಮಲಾ ನಾಯ್ಡು ಆಗ[...] ನಮ್ಮ ಮನೆಗೆ ಬರುತ್ತಿದ್ದಳು. ಹರಿಹರಪ್ರಿಯ ನ[...] ಮನೆಯವರಲ್ಲಿ ಒಬ್ಬರಂತಾಗಿದ್ದರು. ಈ ಮಧ್ಯೆ ನ[...] ಎರಡನೇ ಮಗಳು ಕವಿತಾಳನ್ನು ನಿವೇದಿತಾ ಸ್ಕೂಲ[...] ಹಾಕಿದ್ದೆ. ಆದರೆ ಏಕೋ ಆಗ ತಾನೇ ಪ್ರಾರಂಭವಾಗ[...] ಆ ಶಾಲೆಯಿಂದಲೂ ನನಗೆ ಸಮಾಧಾನ ಆಗಿರಲಿ[...] ನಂತರ ಆಕೆಯನ್ನು ಸೆಂಟ್ ತೆರೆಸಾ ಕಾನ್ವೆಂಟ್‌ಗೆ ಸೇರಿಸಿ[...] ಕೊನೆಗೂ ಆಕೆ ಆ ಶಾಲೆಗೆ ಹೊಂದುಕೊಂಡು ಅಲ್ಲಿಯ[...] ಹೈಸ್ಕೂಲ್ ಮುಗಿಸಿದಳು. ನಮ್ಮ ಮಗ ಅಜಿ[...] ಹೋಮ್ ಸ್ಕೂಲ್‌ಗೆ ಹೋಗುತ್ತಿದ್ದ. ಗೌರಿ ವಿಜಯ[...] ಹೈಸ್ಕೂಲ್ ಸೇರಿದ್ದಳು.

ದೆಹಲಿಗೆ ಮಗನನ್ನು ಕರೆದುಕೊಂಡು ಹೋಗ[...] ಅನುಮತಿ ಬೇಕೆಂದು ಹೋಮ್ ಸ್ಕೂಲ್‌ನ ಸರ್ವಾಧಿಕಾರಿ[...] ಮಿಸ್ ಮಾದಪ್ಪನವರನ್ನು ಕೇಳಿದೆ. ಆಕೆ ಅಷ್ಟು ದಿನ ರ[...] ಕೊಡಲಾಗುವುದಿಲ್ಲ ಎಂದು ನಿರಾಕರಿಸಿದರು. ಮನೆಯವ[...] ಹೊರಟಿರುವಾಗ ಮಗನನ್ನು ಮಾತ್ರ ಹೇಗೆ ಮತ್ತು ಎ[...] ಬಿಟ್ಟುಹೋಗುವುದು. ಆದದ್ದಾಗಲಿ ಎಂದು ಮೂವರ[...] ಮಕ್ಕಳನ್ನು ಕರೆದುಕೊಂಡು ಲಂಕೇಶ್ ಮತ್ತು ನಾನು ದೆಹ[...] ಹೊರಟೆವು.

ಆದರೆ ನಾವೆಲ್ಲ ಜೊತೆಯಾಗಿ ಹೋಗಲಿಲ್ಲ, ಲಂಕೇಶ[...] ವಿಮಲಾ ನಾಯ್ಡು ಜೊತೆ ವಿಮಾನದಲ್ಲಿ ಹಾರಿ ಹೋದ[...] ಆದರೆ ನಾನು, ನಮ್ಮ ಮೂವರು ಮಕ್ಕಳು, ಅಪ್ಪಯ್ಯ, [...] ತಮ್ಮ ಶಿವಕುಮಾರ್, ಶಿವು ಹೆಂಡತಿ ವಿಮಲಾ... ಎಲ್ಲರಿಗ[...] ಬುತ್ತಿ ಕಟ್ಟಿಕೊಂಡು, ಸೆಕೆಂಡ್ ಕ್ಲಾಸ್ ಟ್ರೈನ್ ಹತ್ತಿ ಹೊರ[...] ದೆಹಲಿಯಲ್ಲೂ ಲಂಕೇಶರು ಯಾವುದೋ ಹೋಟೆಲ್‌ನ[...] ಉಳಿದುಕೊಂಡಿದ್ದರು. ನಾವೆಲ್ಲ ಯಾರದ್ದೋ ಚಿಕ್ಕಮನೆಯ[...] ಉಳಿದುಕೊಂಡೆವು.

ಅವಾರ್ಡ್ ಫಂಕ್ಷನ್ ವಿಜ್ಞಾನ ಭವನದಲ್ಲಿ ಏರ್ಪಾ[...] ಗಿತ್ತು, ಆ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ಬರಲಿದ್ದರಿಂದ ಎಲ್ಲ[...] ಅರ್ಧ ಗಂಟೆ ಮುಂಚಿತವಾಗಿಯೇ ಒಳ[...] ಹೋಗಿರಬೇಕಿತ್ತು. ಆದರೆ ನಮಗೆ ದೆಹಲಿ ಹೊಸ[...] ನಾವೆಲ್ಲ ಹೊರಟು ವಿಜ್ಞಾನ ಭವನವನ್ನು ತಲುಪುವು[...] ಸ್ವಲ್ಪ ತಡವಾಯಿತು. ಅಲ್ಲಿ ನೋಡಿದರೆ ತುಂ[...] ಬಂದೋಬಸ್ತು, ಯಾವ ಬಾಗಿಲಿನಿಂದ ಒಳಗೆ ಹೋ[...] ಬೇಕು ಎಂದೂ ನನಗೆ ಗೊತ್ತಾಗಲಿಲ್ಲ, ಲಂಕೇಶರ[...] ಕೇಳೋಣವೆಂದರೆ ಅವರು ಅಷ್ಟು ಹೊತ್ತಿಗಾಗ[...] ವಿಮಲಾ ನಾಯ್ಡು ಜೊತೆ ಒಳಗೆ ಕೂತಿದ್ದರು. ಕೊನೆ[...] ನನ್ನ ಜೊತೆಯಲ್ಲಿದ್ದವರನ್ನೆಲ್ಲ ಹೊರಗೆ ಬಿ[...] ಪೊಲೀಸರಿಗೆ ನಾನೂ ಪ್ರಶಸ್ತಿ ವಿಜೇತೆ ಎಂದು ಹೇ[...] ಹೇಗೋ ಕಷ್ಟಪಟ್ಟು ಒಳಗೆ ಪ್ರವೇಶ ಪಡೆದೆ.

ನಾನು ಆ ಬೃಹತ್ ಹಾಲಿನೊಳಗೆ ಕಾಲಿಡು[...] ದಕ್ಕೂ, ಇಂದಿರಾ ಲಂಕೇಶರಿಗೆ ಪ್ರಶಸ್ತಿ ಎಂದು ಅನೌ[...] ಮಾಡುವುದಕ್ಕೂ ಸರಿಹೋಯಿತು. ಆದರೆ ನಾನು ವೇದಿಕೆ[...] ಹತ್ತಿರ ಹೋಗುವ ಮುನ್ನ ವಿಮಲಾ ನಾಯ್ಡು ಎದ್ದು ವೇ[...] ಏರಿ ನನ್ನ ಪ್ರಶಸ್ತಿ ಸ್ವೀಕರಿಸಿದಳು. ಅಲ್ಲಿದ್ದ ಛಾಯಾಗ್ರಾಹಕ[...] ಆಕೆಯ ಫೋಟೋ ತೆಗೆದರು. ಆ ನಂತರ ಲಂಕೇಶರು ಆಕೆ[...] ಫೋಟೋ ಪತ್ರಿಕೆಗಳಲ್ಲಿ ಪ್ರಕಟಗೊಳ್ಳದಂತೆ ನೋ[...] ಕೊಂಡರು.

ಆದರೂ ನಾನು ಕುದ್ದು ಹೋದೆ.

ಆದರೆ ಲಂಕೇಶರ ಜೊತೆ ಜಗಳವಾಡಿ ಯ[...] ಪ್ರಯೋಜನವೂ ಇರಲಿಲ್ಲ.

ಹೀಗೆ ನಾವಿಬ್ಬರೂ ಸ್ವಲ್ಪಸ್ವಲ್ಪ ದೂರವಾಗುತ್ತಾ ಹೋದ[...]

ಕುಮಾರಸ್ವಾಮಿ ಸೈನ್ಯ ಕಿಸ್ಕಿಂದೆಲಿ ಬೀಡುಬುಟ್ಟಿದಂತೆ!

"ಈ ಸದಾನಂದ ಗೌಡ ಯಂಗೇ?" ಎಂದು ಸೀರ ಹಣ್ಣು ಕೊಡುವ ಮಾವನಂತೆ ಒಂದು ಗುಮಾನಿ ಮಾತನ್ನು ಎಸೆದ.

"ಯಂಗೆ ಅಂದ್ರೆ, ಯಾವ ತರನೊ ಸೀರ ಮಾವ?" ಎಂದ ಉಗ್ರಿ.

ಬಯಲುಸೀಮೆ

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

"ಮುಖ್ಯಮಂತ್ರಿಯಾಗಿ ಯಂಗಿವುನು ಅಂದೆ ಕಂಡ್ಯ."

"ಆ ಎಡೂರಪ್ಪ ಮಠದೋರು ಕೇಳದೆಯಿದ್ರೂ ದುಡ್ಡು ಕೊಟ್ಟ. ಈ ಸದಾನಂದ ಮಠಮಾನ್ಯಗಳಿಗೆ ಯಾರೇಳಿದ್ರು ದುಡ್ಡು ನಿಲ್ಸಲ್ಲ, ಕೊಟ್ಟೆ ಕೊಡ್ತಿನಿ ಅಂತನೆ. ಅಲ್ಲಿಗೆ ಇವುನು ಎಡೂರಪ್ಪನ ತಮ್ಮ ತಾನೆ?"

"ಇವುನು ಪರವಾಗಿಲ್ಲ ಕಂಡ್ಯ. ನಗನಗ್ತ ಮಾತಾಡ್ತನೆ" ಎಂದಳು ಜುಮ್ಮಿ.

"ಎಡೂರಪ್ಪ ಸಿಟ್ಟಲ್ಲಿ ಮಾಡೋ ಕ್ಯಲಸವ ಇವುನು ನಗ್ತ ಮಾಡ್ತನೆ ಅಷ್ಟೆ ಕಣೆ."

"ಅಲ್ಲ ಕಂಡ್ಯ, ಕಬ್ಬು ಬೆಳದಿರೊ ರೈತರು ಒಂದು ನ್ಯಾಯವಾದ ಬ್ಯಲೆ ಕೊಡಿ ಅಂತ ಹೋರಾಟ ಮಾಡ್ತ ಅವುರೆ. ಅವುರಿಗೇನಾರ ಕೊಡದುಬುಟ್ಟು ಮಠಕ್ಕೆ ದುಡ್ಡು ಕೊಡ್ತನೆ ಅಂದ್ರೆ, ಇವುನು ಸರಿಲ್ಲ ಕಂಡ್ಯ" ಎಂದ ಕಾಳಮಾವ.

"ನಿನ್ನ ಪ್ರಶ್ನೆಗೆ ಉತ್ತರ ಸಿಗತೇನೊ ಸೀರಮಾವ?" ಎಂದ ಉಗ್ರಿ.

"ಏನೇ ಆಗ್ಲಿ, ರೈತರ ಪಾಡು ಗೊತ್ತಿದ್ದೋನು ದ್ಯಾವೇಗೌಡನೆ ಕಂಡ್ಯ. ಅವುನು ಅಧಿಕಾರದಲ್ಲಿದ್ದಾಗ ರೈತ ವ್ಯವಸಾಯ ಮಾಡುವಾಗ ಸತ್ತರೆ, ಇಲ್ಲ ಗಾಯಾಳಾದ್ರೆ ಸರ್ಕಾರದಿಂದ ಪರಿಯಾರ ಕೊಡಂಗೆ ಮಾಡಿದ್ದ ಗೊತ್ತೆ" ಎಂದ ಕಾಳಮಾವ.

"ರೈತರ ಇವತ್ತಿನ ಸ್ಥಿತಿಗೆ, ಅದರಲ್ಲೂ ಬೆಂಗಳೂರು ಸುತ್ತಮುತ್ತ ಇರೊ ರೈತರು ಅನುಭವುಸ್ತಯಿರೊ ತೊಂದ್ರೆಗೆ, ಅವುನೆ ಕಾರಣ ಅಂತ ಹೇಳ್ತಿನಿ. ಇದಕೇನೇಳ್ತಿಯೋ ಮಾವ?"

"ನೀನು ಸುಮ್ಮಸುಮ್ಮನೆ ಹೇಳಿಬುಟ್ರೆ ಕೇಳಿಬುಟ್ಟನೆ. ಅವುನು ಇಂತ ವಯಿಸನಲ್ಲಿ ಬೆಂಗಳೂರಲ್ಲಿ ರೈತರಿಗಾಗಿ ಗಾಂಧಿಮಾತ್ಮನ ಪೋಟಾ ಹಿಡಕಂಡು ಉಪಾಸ ಕುಂತಿದ್ದನಂತೆ."

"ಅದಕೂ ಅವುನೇ ಕಾರಣ ಕಣಮಾವ. ಬೆಂಗಳೂರು ಸುತ್ತರಸ್ತೆ ಮಾಡು ಭೂಮಿ ಕೊಡ್ತಿನಿ ಅಂತ ಕೇಣಿ ಕರಕೊಂಡು ಬಂದೊರ‍್ಯಾರು? ಈಗ ನಂದಿ ರಸ್ತೆ ವಿಷಯದಲ್ಲಿ ಭೂಮಿ ಕಳಕಂಡ ರೈತರು ಬೀದಿಗೆ ಬಿದ್ದು ಗಲಾಟೆ ಮಾಡಿದ್ರು. ಆ ಗಲಾಟೆ ಮುಂದಾಳತನನೂ ದ್ಯಾವೇಗೌಡ್ನೆ ವಯಿಸ್ಯವುನೆ. ಸರಿ ಈಗ ರಸ್ತೆ ಮಾಡಕ್ಕೆ ಅಂತ ಭೂಮಿ ಕಳಕಂಡು ಕೂಗ್ಯಾಡತಿದ್ದ ಜನದ ಕ್ವಲೆ ಆಗ್ಯದೆ. ಅದಕ್ಯಾರು ಕಾರಣ ಮಾವ?" ಎಂದ ಉಗ್ರಿ.

"ಆ ಕೇಣಿ ವಳ್ಳೊನಂತೆ ಕಂಡ್ಯ" ಎಂದ ಸೀರ.

"ಅವುನ ವಳ್ಳೆತನ ನಿನಿಗ್ಯಂಗೆ ಗೊತ್ತಾಯ್ತೋ?"

"ಚುಂಚನಗಿರಿ ಸ್ವಾಮಿ ಅವಾರ್ಡು ಕೊಟ್ಟು ಸನುಮಾನ ಮಾಡ್ಯವುರೆ ಗೊತ್ತೆ."

"ಅದಕೆ ವಳ್ಳೆ ಮನುಸಾದ ಅನ್ನು. ಅಲ್ಲಾ ನಮ್ಮ ಚುಂಚನಗಿರಿ ಸ್ವಾಮಿ ಕರದು ಬಿರುದುಕೊಟ್ಟು ಸನುಮಾನ ಮಾಡ್ತರೆ ಅಂದ್ರೆ ಸುಮುಸುಮ್ಮನೆ ಮಾಡ್ತರೇನೊ?"

"ವಳ್ಳೆ ಯೋಗ್ಯವಂತ, ಗುಣವಂತಾಗಿದ್ರೆ ಕರುದು ಮಾಡೇ ಮಾಡ್ತರೆ."

"ಸರಿಯಪ್ಪ, ನಿನಿಗೆ ಅವ್ವರಡೂ ಇಲ್ಲ, ಇದೇ ಚುಂಚನಗಿರಿ ಸ್ವಾಮಿ ಕೈಲಿ ಸನುಮಾನ ಮಾಡಿಸಿ 'ಮಠಸೇವಾ ರತ್ನ' ಅಂತ ಬಿರುದು ಕೊಡುಸ್ಲ?"

"ಕೊಡಸಪ್ಪ ನೋಡನ. ಅದೂ ಒಂದಾಗೇಬುಡ್ಲಿ."

"ಆದ್ರೆ ನಿನ್ನ ಆಸ್ತಿನ್ಯಲ್ಲ ಮಠಕ್ಕೆ ಬರಿಬೇಕು, ಬರಿತಿಯಾ?"

"ಆಸ್ತಿ ಬರದು ಬಿರುದು ತಗಳದೇನ್ಲ?"

"ತಗಂಡ ಮ್ಯಾಲೆ ಬಿದುರು ಮ್ಯಾಲೆ ಹೋಗದೆಯ ಕಂಡ್ಯ" ಎಂದಳು ಜುಮ್ಮಿ.

"ತಮಾಸಿಯಲ್ಲ ಕಣೆ. ಕೇಣಿ ಮಠದ ಆಸ್ಪಲಿಗೆ ಬೇಕಾದೋಟು ದುಡ್ಡು ಕೊಟ್ಟನಂತೆ. ಸ್ವಾಮಿಗಳು ಬಿರುದು ಕೊಟ್ರಂತೆ. ಚುಂಚನಗಿರಿ ಮಠದ ಬಿರುದು ಬಾವುಲಿಗೆಳ್ಯಲ್ಲ ಬಿಕರಿಗವೆ ಕಣೇ. ಯಾರು ಬೇಕಾದ್ರು ಕೊಳ್ಳಬವುದು, ಯಾವ ಜಾತಿಯೋರಾದ್ರು ಕೊಳ್ಳಬವುದು, ಗೊತ್ತೆ?"

"ಚುಂಚನಗಿರಿ ಮಠದ ಬಿರುದು ಬಿಕರಿಗಿದ್ರೆ, ಸರ್ಕಾರದ ಪ್ರಶಸ್ತಿ ಸಿಪಾರಸ್ಸಿನ ಮ್ಯಾಲೆ ನಿಂತವೆ ಕಣೊ ಉಗ್ರಿ" ಎನ್ನುತ್ತಾ ವಾಟಿಸ್ಸೆ ಬಂದ.

"ಸರ್ಕಾರದ ಪ್ರಶಸ್ತಿಯಲ್ಲಾ ಶಿಫಾರಸ್ಸಿನ ಮ್ಯಾಲೆ ಅಲವೇನೊ ಇರದು. ಆದ್ರು ಈ ಸತಿ ರಾಜ್ಯೋತ್ಸವ ಪ್ರಶಸ್ತಿ ಕೊಡುವಾಗ ಸದಾನಂದ ಗೌಡ ಬಿಗಿಯಾಗಿದ್ದು ಐವತ್ತೇ ಜನಕೆ ಕೊಟ್ಟ ಅಂತ ಜನ ಮೆಚ್ಚತಾ ಅವುರೆ."

"ತಗಂಡಿರೊ ಐವತ್ತು ಜನಕೆ ಅವುಮಾನಾಗಿರದು ಇನ್ನು ಯಾರಿಗೂ ಗೊತ್ತಾಗ್ತಿಲ್ಲವಂತೆ ಕಣೊ. ರಿಯಲಿ ಇಟೀಸ್ ಸೇಮ್. ನನಿಗೇನಾರ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಕೊಟ್ರೆ ರಿಜಕ್ಟ್ ಮಾಡ್ತಿನಿ."

"ರಿಜಕ್ಟ್ ಮಾಡದು ಆಮ್ಯಾಲೆ. ಮೊದಲು ನಿನಿಗೆ ಕೊಡಬೇಕಲ್ಲೊ."

"ಮನಸು ಮಾಡಿದ್ರೆ ತಗಬವುದು ಕಣೊ ಉಗ್ರಿ. ಇದೇ ನಮ್ಮ ಚುಂಚನಗಿರಿ ಸ್ವಾಮಿಗೇಳ್ಸಿದ್ರೆ ಕೊಟ್ಟೆ ಕೊಡ್ತರೆ. ಅಂತ ದೊಡ್ಡ ಸಿಪಾರಸ್ಸು ಬೇಕಾಗಿಲ್ಲ, ಇಲ್ಲೆ ವಿ.ಭಟ್ಟ ಅಂತ ಒಬ್ಬ ಚಿಡ್ಡಿ ಪ್ರೆಂಡವುನೆ. ಅವುನಿಗೇಳಿದ್ರೆ ಸಾಕು ಮುಂದಿನ ವರ್ಷ ನನಿಗೂ ಒಂದು ರಾಜ್ಯೋತ್ಸವ ಪ್ರಶಸ್ತಿ ಗ್ಯಾರಂಟಿ."

"ಸರಿ ಐವತ್ತು ಜನಕೆ ಅವುಮಾನಾಗ್ಯದೆ ಅಂದಲ್ಲ ಅದೇನೇಳ್ಳು?"

"ಮಂಡೇವುದಲ್ಲಿ ಒಬ್ಬ ಪೇಪರಿಗೆ ಬರಿಯೋನಿದ್ದನಂತೆ. ಅವುನು ಸರ್ಕಾರಕ್ಕೆ ಸುಳ್ಳೇಳಿ ನನಿಗೆ ಮನೆಮಠ ಇಲ್ಲ, ಅನಾಥ ಅಂತ ಸೈಟು ತಗಂಡನಂತೆ. ಇನ್ನೊಸಿದಿನಾದ ಮ್ಯಾಲೆ ಯಾವಳ್ನೊ ಕಟಗಂಡು ಇವುಳು ಅನಾಥೆ ಸೈಟು ಕೊಡಿ ಅಂತ ಈಸಗಂಡನಂತೆ. ಈಗ ಅವುನೂ ರಾಜ್ಯೋತ್ಸವ ಪ್ರಶಸ್ತಿ ಹೊಡಕಂಡನಂತೆ. ಇದು ಉಳದೋರಿಗೆ ಅವುಮಾನಲವೇನೊ."

"ಥೂ ನಿನ್ನ, ಅಲ್ಲೊ ವಾಟಿಸ್ಸೆ ಮಂಡ್ಯದ ಎಮ್ಮೆಲ್ಸೆ ಪಾಂಡುಪುರದ ಪುಟ್ರಾಜ, ಶ್ರೀರಂಗಪಟ್ನದ ಬಂಡಿಸಿದ್ದೇಗೌಡನುಡುಗ, ಮನೆ ಸೈಟು ಏನೂ ಇಲ್ಲ ಅಂತ ಹೇಳಿ ಸೈಟ್ ತಗಂಡಿರುವಾಗ ಅವುನ್ಯಾರೊ ಪುಟಗೋಸಿ ಪತ್ರಕರ್ತನ ಸುದ್ದಿ ತಂದಿದ್ದಿಯಲ್ಲೊ ಹೇಳಕ್ಕೆ."

"ಮಿಸ್ಟರ್ ಉಗ್ರಿ, ಅಷ್ಟೊಂದು ನೆಗ್ಲೆಟ್ಟಾಗಿ ಮಾತಾಡಬ್ಯಾಡ ನೀನು. ಸಮಾಜಕ್ಕೆ ನೀತಿ ಹೇಳೊ ಪೇಪರ್‌ನೋರು ನ್ಯಟ್ಟಗಿರಬೇಕು ಗೊತ್ತಾ?"

"ಇವತ್ಯಾವನಿದ್ದನಯ್ಯ ಅಂಗೆ. ಪಿ.ಸಿ.ಗಳು ಬೇಕು ಇವುರು ಬ್ಯಾಡ ಅಂಗಾಗ್ಯವುರೆ. ಅವುರ ಸುದ್ದಿ ಬುಡು. ಬಳ್ಳಾರಿದೇನಾರ ಇದ್ರೇಳು."

"ಬಳ್ಳಾರಿಗೆ ಎಡೂರಪ್ಪ ಹೋದ ಮ್ಯಾಲೆ ಕಾವೇರತಾ ಅದೆ. ಇದ್ದಕ್ಕಿದ್ದಂಗೆ ಜೈಲಿಗೋಗಿ ಬಂದೋನಿಗೂ, ಮುಂದೆ ಹೋಗೋನಿಗೂ ಮಾರಾಮಾರಿ ಬಿದ್ದದೆ ಕಣೊ ಉಗ್ರಿ."

"ಬಂದೊನ್ಯಾರು, ಹೊಗೋನ್ಯಾರು ಹೇಳ್ಳ" ಎಂದಳು ಜುಮ್ಮಿ.

"ಎಡೂರಪ್ಪ ಜೈಲಿಂದ ಬಂದೋನು ಕಣಕ್ಕ. ಹೋಗೋನ್ಯಾರು ಅಂದ್ರೆ ಶ್ರೀರಾಮುಲು. ಅವುನು ಯಾವತ್ತೋಯ್ತನೊ ಏನೊ. ಎಡೂರಪ್ಪ ಮಾತ್ರ ನನ್ನ ಶತ್ರುಗೂ ಬ್ಯಾಡ ಜೈಲುವಾಸ, ನೀವ್ಯಾರು ಹೋಗಬ್ಯಾಡಿ, ಯಾರನ್ನೆ ಆಗ್ಲಿ ಜೈಲಿಗೆ ಹೋಗೋ ತರ ಮಾಡಬ್ಯಾಡಿ ಅಂತ ಕುಂತವುನೆ."

"ಅಂಗರೆ ಜೈಲಲ್ಲಿ ಬಾಳ ನೊಂದಿರಬೇಕು ಕಂಡ್ಯ" ಎಂದ ಕಾಳಮಾವ.

"ನೊಂದಿರದಿರ್ಲಿ ದ್ವಡಪ್ಪ, ಆ ದಡ್ಡ ಏನು ತಿಳಕಂಡವುನೆ ಅಂತೀ. ನಾನು ಜೈಲಿಗೊದಾಗ ದೀಪಾವಳಿ ಬಂದಿತ್ತು, ಆಗ ಜನ ಹಬ್ಬ ಮಾಡಿ ಪಟಾಕಿನೆ ವಡೆದಿಲ್ಲ ಅಂತ ತಿಳಕಂಡವುನೆ."

"ಅವುನಿಗೆ ಬೆಂಗಳೂರು ಪಟಾಕಿ ಸದ್ದು ಕೇಳಿಲ್ಲ ಅಂಗರೆ?"

"ಬೆಂಗಳೂರಲ್ಲ ಕಣೊ. ಅವುನ ಕಾನ್ಸಿಟುಯೆನ್ಸಿ ಜನ ತಾನು ಜೈಲಿಗೋಗಿದ್ದಕೆ ಹಬ್ಬ ಮಾಡಿ ಪಟಾಕಿನ ವಡದಿಲ್ಲ ಅಂತ ತಿಳಕೊಂಡವುನೆ. ಅದ್ಕೆ ಬಿಡುಗಡೆಯಾದೇಟಿಗೆ ಊರಿಗೋಗಿ ಬಸ್ಸಲ್ಲಿ ಜನ ತರಿಸಿ 'ನಾನು ಜೈಲಿಂದ ಬಂದಿದ್ದಿನಿ. ನೀವು ದೀಪಾವಳಿ ಮಾಡಿ ಪಟಾಕಿ ವಡಿರಿ' ಅಂದನಂತೆ. ಜನ ವಳಗೆ ನಗಾಡಿ ಜೈಲಿಂದ ಬಂದ ಮನಸ ಹುಚ್ಚಾಸ್ಪತ್ರೆ ದಾರಿ ಹಿಡಿಯೋನಂಗೆ ಮಾತಾಡ್ತನಲ್ಲಾ, ಎಷ್ಟೇ ಆಗ್ಲಿ ಹುಚ್ಚರಾಯಸ್ವಾಮಿ ಭಕ್ತಲವೆ. ಇವುನು ಇರದೆ ಹಿಂಗೆ ಅನ್ನಕಂಡ್ರಂತೆ."

"ದೇವರಪ್ಪಣೆ ಆದ್ರೆ ಬಳ್ಳಾರಿಗೋಯ್ತಿನಿ ಅಂತಿದ್ನಲ್ಲಾ? ಆಯ್ತೆ?"

"ಆಗದೆಯಿದ್ರು ಹೋಯ್ತಿದ್ದ ಕಣೊ ಅವುನು. ಕ್ಯಾಂಡೇಟ್ ಹಾಕದೆಯಿರೊ ಕುಮಾರಸ್ವಾಮಿನೇ ಹೋಗಿ ಏನೇನೊ ಮಾತಾಡ್ತಯಿರುವಾಗ, ಇನ್ನ ಯಾವಾಗ್ಲು ತುರುಸು ನಾಲಗೆ ಮಡಿಕಂಡಿರೊ ಎಡೂರಿದ್ದನೇನೊ."


"ಕ್ಯಾಂಡೇಟ್ ಇಲ್ಲದ ಮ್ಯಾಲೆ ಕುಮಾರಸ್ವಾಮಿಗೇನು ಕೇಪೂ ಅಲ್ಲೀ?"

"ಅರೆ, ಈಗ ರಾಮುಲು ಪ್ರೆಂಡು ಕಣೊ. ಕುಮಾರಸ್ವಾಮಿಗೆ ಮುಂದೆ ಬಳ್ಳಾರಿ ಕಡೆ ಗೆದ್ದು ಬರೊ ಶಾಸಕರ ಸಪ್ಪೋರ್ಟು ತಗಂಡು ಸರಕಾರ ಮಾಡೊ ದುರಾಲೋಚನೆ ಇರದರಿಂದ ಈಗ ಹೋಗಿ 'ನೀನೇ ರಾಮ, ನಾನೇ ಆಂಜನೇಯ, ನಮ್ಮಪ್ಪನೇ ಜಾಂಬವ, ನಮ್ಮ ರಘುಪತಿನೇ ಸುಗ್ರೀವ, ನಮ್ಮ ದಳದ ಕಪಿಸೈನ್ಯದ ಪುಲ್ ಸಪ್ಪೋರ್ಟು ನಿನಿಗೇ ಕಣೊ ರಾಮು' ಅಂತ ಕುಮಾರಣ್ಣನ ಟೀಮು ಕಿಸ್ಕಿಂದೆಲಿ ಬೀಡುಬುಟ್ಟದಂತೆ. ಅಲ್ಲಿಗೆ ರಾಮುಲು ಗೆದ್ದಂಗೆ. ಬೇಕಾದ್ರೆ ಬರದಿಟಗೊ."

"?!"




ಎನ್.ಎಸ್. ಸೀತಾರಾಮಶಾಸ್ತ್ರಿ



ಈ ಸಲ ಟಿಎಸ್ಸಾರ್ ಪ್ರಶಸ್ತಿ ಗೆದ್ದಿರುವ ಎನ್.ಎಸ್. ಸೀತಾರಾಮಶಾಸ್ತ್ರಿ ಹಳೇ ಕಾಲದ ಪತ್ರಕರ್ತರು. ಇವರ ಗುರು ಸಿದ್ದವನಹಳ್ಳಿ ಕೃಷ್ಣ ಶರ್ಮ, ಮೆಚ್ಚಿಗೆಯ ವ್ಯಕ್ತಿಗಳು ತಿ.ತಾ. ಶರ್ಮ, ಡಿ.ವಿ. ಗುಂಡಪ್ಪ ಮುಂತಾದವರು. ಆರು ದಶಕದ ಹಿಂದೆ 'ವಿಶ್ವ ಕರ್ನಾಟಕ'ದಲ್ಲಿ ಪತ್ರಕರ್ತರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಸೀತಾರಾಮಶಾಸ್ತ್ರಿಯವರನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರು ಸಿದ್ದವನಹಳ್ಳಿ ಕೃಷ್ಣಶರ್ಮ, ಡಿವಿಜಿಯವರಿಂದ ಹೇಗೆ ಭಿನ್ನ ಎಂಬುದನ್ನು ಗಮನಿಸಬೇಕು. ಅವರಿಗೂ ಅವರ ಮಾರ್ಗದರ್ಶಿಗಳಿಗೂ ಸಮಾನವಾದ ಅಂಶಗಳು ನಿಚ್ಚಳವಾಗಿವೆ; ಗಾಂಧೀಜಿಯ ನೆರಳಲ್ಲಿ ಅವರೆಲ್ಲ ಬೆಳೆದವರು; ಸ್ವಾತಂತ್ರ್ಯಕ್ಕಾಗಿ ಹೋರಾಟ ಮತ್ತು ಗಾಂಧೀಜಿಯ ಆದರ್ಶಗಳನ್ನು ತಮ್ಮ ವ್ಯಕ್ತಿತ್ವದ ಬುನಾದಿಯಾಗಿ ಸ್ವೀಕರಿಸಿದವರು. ಕೃಷ್ಣಶರ್ಮ, ಡಿವಿಜಿ ಮುಂತಾದವರು ಅರ್ಧ ಪತ್ರಕರ್ತರಾಗಿ ಇನ್ನರ್ಧ ರಾಜಕೀಯ ನಾಯಕರಾಗಿ ಇದ್ದವರು; ಇದು ಅವರಿಗೆ ದ್ವಂದ್ವವಾಗಿ ಕಾಣಿಸಲಿಲ್ಲ, ಆದರೆ ಸೀತಾರಾಮಶಾಸ್ತ್ರಿ ಶುದ್ಧ ಪತ್ರಕರ್ತರು; ರಾಜಕೀಯ ನಾಯಕರಲ್ಲ. ಆದರೆ ಶುದ್ಧ ಪತ್ರಕರ್ತರಲ್ಲಿರಬೇಕಾದ ತುಂಟತನ, ರಾಜರನ್ನೂ ರಾಜಗಾಂಭೀರ್ಯವನ್ನೂ ಒಟ್ಟಾಗಿಯೇ ಪ್ರಶ್ನಿಸಲು ಬೇಕಾದ ಛಾತಿ ಶಾಸ್ತ್ರಿಗಳಲ್ಲಿ ಕಡಿಮೆ ಇತ್ತು. ಇದರಿಂದಾಗಿ ಶಾಸ್ತ್ರಿ ತಮ್ಮ ವೃತ್ತಿಯ ಪರಾಕಾಷ್ಠೆಯಲ್ಲಿದ್ದಾಗ ಕೂಡ ಗಾಂಧೀ ಕಚೇರಿಯ ಗುಮಾಸ್ತರಂತೆಯೇ ಇದ್ದರು. ಇದು ಆಮೇಲೆ ಕಂಡುಬಂದ ಪತ್ರಕರ್ತರ ನೀಚತನಕ್ಕಿಂತ ಉತ್ತಮ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ನಾನು ಈ ಶಾಸ್ತ್ರಿಗಳ ಹೆಸರು ಕೇಳಿದ್ದು ಅವರು 'ಜನಪ್ರಗತಿ'ಯ ಸಂಪಾದಕರಾಗಿದ್ದಾಗ. ಆಗ ಆ ವಾರಪತ್ರಿಕೆಯನ್ನು ನಡೆಸುತ್ತಿದ್ದವರು ಹೊಸಾಳಿ ಕುಟುಂಬದವರು; ಆಗಿನ್ನೂ ಬಿ.ಎಸ್. ಗುಪ್ತರು ಅದನ್ನು ವಹಿಸಿಕೊಂಡಿರಲಿಲ್ಲ. 'ಜನಪ್ರಗತಿ'ಯಲ್ಲಿ ಶಾಸ್ತ್ರಿಗಳು ಬರೆಯುತ್ತಿದ್ದ ಸಂಪಾದಕೀಯಗಳು, ಪತ್ರಿಕೆಯ ವಿವಿಧ ಆಸಕ್ತಿಗಳನ್ನು ಮಂಡಿಸುತ್ತಿದ್ದ ರೀತಿ, ನಿರಂಜನ ಮುಂತಾದವರಿಗೆ ಕೊಡುತ್ತಿದ್ದ ಪ್ರೋತ್ಸಾಹ ಎಳೆಯನಾಗಿದ್ದ ನನ್ನ ಮೆಚ್ಚಿಗೆ ಗಳಿಸಿದ್ದವು. ಶಾಸ್ತ್ರಿ ಕನ್ನಡವನ್ನು ಸರಳವಾಗಿ, ಸ್ಪಷ್ಟವಾಗಿ ಜಾಣತನದಿಂದ ಬರೆಯುತ್ತಿದ್ದರು; ಸಂಪಾದಕರಾಗಿ ಹಿನ್ನೆಲೆಯಲ್ಲೇ ಇದ್ದು ಎಲ್ಲವನ್ನೂ ನಿರ್ವಹಿಸುತ್ತಿದ್ದರು. ನಾನು ಆಗ ಶಾಸ್ತ್ರಿಗಳನ್ನು ನೋಡಲಿಲ್ಲ, ಅವರು ಆಮೇಲೆ 'ಕೈಲಾಸ' ಪತ್ರಿಕೆಯ ಸಂಪಾದಕರಾಗಿದ್ದಾಗ ನನ್ನಿಂದ ಬರೆಸಲು ಪ್ರಯತ್ನಿಸಿದರು. ಆದರೆ ನಾನು ಅಷ್ಟಾಗಿ ಬರೆದಂತೆ ಕಾಣಲಿಲ್ಲ, 'ಕೈಲಾಸ' ಮಾಸಿಕದ ಜೊತೆಯ 'ಗೋಕುಲ' ವಾರಪತ್ರಿಕೆಯ ಖಾದ್ರಿ ಶಾಮಣ್ಣ ನನ್ನ ಮಿತ್ರರಾಗಿದ್ದರು (ನನ್ನ ಪದ್ಯ 'ಅವ್ವ' ಪ್ರಕಟವಾಗಿದ್ದು 'ಗೋಕುಲ'ದಲ್ಲಿ). ಶಾಸ್ತ್ರಿ ಎಷ್ಟೇ ಪ್ರಯತ್ನಿಸಿದರೂ 'ಕೈಲಾಸ' ಬೆಳೆಯಲಿಲ್ಲ; ಅದರ ಮಾಲೀಕರು 'ಪತ್ರಿಕೆ'ಯನ್ನು ಕಾಂಟ್ರಾಕ್ಟರ್ ರೀತಿಯಲ್ಲಿ ನಡೆಸುತ್ತಿದ್ದರು; ಲೇಖಕರು, ಸಂಪಾದಕರು, ವರದಿಗಾರರು ಅಲ್ಲಿ ಮುಖ್ಯವಾಗಿರಲಿಲ್ಲ.




ಇದಾದ ಮೇಲೆ ಶಾಸ್ತ್ರಿಗಳನ್ನು ನಾನು ಇಷ್ಟಪಟ್ಟದ್ದು ಅವರು ದಿನಪತ್ರಿಕೆಯೊಂದಕ್ಕೆ ವಾರ್ತಾಶನ ಎಂಬ ಹೆಸರಲ್ಲಿ ಚಿಕ್ಕಚಿಕ್ಕ ವ್ಯಕ್ತಿಚಿತ್ರಗಳನ್ನು ಕೊಡುತ್ತಿದ್ದಾಗ. ಹತ್ತೇ ಮಾತುಗಳಲ್ಲಿ ಮನಮುಟ್ಟುವಂತೆ ವಾರದ ವ್ಯಕ್ತಿಗಳನ್ನು ಚಿತ್ರಿಸುತ್ತಿದ್ದುದು ಅದ್ಭುತವಾಗಿತ್ತು.

ಇದೆಲ್ಲದರಷ್ಟೇ ಮುಖ್ಯ ಶಾಸ್ತ್ರಿಗಳ ವಸ್ತುನಿಷ್ಠೆ, ಪ್ರಾಮಾಣಿಕತೆ ಮತ್ತು ಅನಾಮಿಕತೆ. ಅದು ಅವರ ನಿಜವಾದ ಶಕ್ತಿಯಾಗಿತ್ತು. ಒಬ್ಬ ವಿದ್ವಾಂಸರ ತಿಳಿವಳಿಕೆ ಮತ್ತು ಪತ್ರಕರ್ತನ ಕಠೋರ ನಿಷ್ಠುರತೆ ಹೊಂದಿದ್ದ ಶಾಸ್ತ್ರಿ ಎಂದೂ ವೇದಿಕೆಗಳಿಂದ ಮಿಂಚಲು, ರಾಜಕಾರಣಿಗಳ ಮಧ್ಯೆ ಮೆರೆಯಲು ಇಷ್ಟಪಡುತ್ತಿರಲಿಲ್ಲ. ಅದು ಪತ್ರಕರ್ತನ ಜೀವಸೂತ್ರ. ಈ ಶಾಸ್ತ್ರಿ ತಮ್ಮ ಆತ್ಮಚರಿತ್ರೆ ಬರೆದರೆ ಅವರ ಶೈಲಿ ಮತ್ತು ನಂಬಿಕೆ ನಮ್ಮ ಅನೇಕ ಎಳೆಯರಿಗೆ ಉಪಯುಕ್ತವಾಗಬಲ್ಲವು. ಟಿಎಸ್ಸಾರ್ ಪ್ರಶಸ್ತಿಗೆ ನಿಜಕ್ಕೂ ಅರ್ಹವಾದ ವ್ಯಕ್ತಿ ಈತ.

–ಜನವರಿ 24, 1996

ಬ್ರಹ್ಮನಿಗೆ ಇಂಗ್ಲಿಷ್ ಬರುತ್ತೆ!



ಎಚ್.ಎಲ್. ಕೇಶವಮೂರ್ತಿ

ಅಣಕ

ತಾತಾ ತಾತಾ' ಅಂತು ಚುಲ್ಬಾರಿ.

'ಏನ್ಮರಿ' ಅಂದೆ.

'ರಾವಣನಿಗೆ ಯಾಕೆ ಹತ್ತು ತಲೆ' ಅಂತು.

'ಅವನು ದಶಕಂಠ ಅದಕ್ಕೆ' ಅಂದೆ.

'ಅದೇ ಅದು ಯಾಕೆ ಅಂತ' ಮರುಪ್ರಶ್ನೆ ಹಾಕಿತು.

ಈಗಿನ ಕಾಲದ ಮಕ್ಕಳೇ ಹಾಗೆ ಎಂದು ಕಾಣುತ್ತೆ. ಕೇಳುವುದೆಲ್ಲ ಇಂತಹ ತರಲೆ ಪ್ರಶ್ನೆಗಳನ್ನೆ.

'ಹೋಗುಮರಿ. ಆಟ ಆಡಿಕೊ ಹೋಗು' ಎಂದು ಪ್ರಶ್ನೆ ಮರೆಸಲು ಪ್ರಯತ್ನಿಸಿದೆ. ಅದು ಹೋಗಲಿಲ್ಲ. ಕೈಲಿದ್ದ ಪೆನ್ಸಿಲ್ಲನ್ನು ಹಲ್ಲಲ್ಲಿ ಕಚ್ಚುತ್ತ ಏನೋ ದೀರ್ಘಾಲೋಚನೆಯಲ್ಲಿ ಮುಳುಗಿತು. ಸ್ವಲ್ಪಸಮಯದ ನಂತರ 'ದೇವರು ಅಡ್ಡ ಕಸುಬಿ ತಾತಾ' ಅಂದುಬಿಡೋದೆ!

ಹಾಳಾದ ಮಕ್ಕಳು. ದೇವರು ದಿಂಡಿರು ಅಂದರೆ ಭಯ, ಭಕ್ತೀನೆ ಇಲ್ಲ.

'ಹಾಗೆಲ್ಲ ಅನ್ನ ಬಾರದು ಮರಿ' ಅಂತ ತಲೆ ಸವರಿದೆ.

'ಇನ್ನೇನು ತಾತಾ. ರಾವಣನ್ನ ಸೃಷ್ಟಿಸಿದೋರು ಯಾರು ತಾತಾ'

'ರಾವಣ ಒಬ್ಬನನ್ನೇ ಅಲ್ಲ ಮರಿ. ಎಲ್ಲಾರನ್ನೂ ಸೃಷ್ಟಿಸಿದೋನು ಆ ಬ್ರಹ್ಮನೆ.'

'ಅಂದರೆ ಬ್ರಹ್ಮನೂ ದೇವರು ತಾನೆ?'

'ಹೌದು.'

'ಅವನಿಗೆ ಸ್ವಲ್ಪ ಆದರೂ ಸೆನ್ಸ್ ಇದೆಯ?'

ಎಂತಹ ನಾನ್‌ಸೆನ್ಸ್ ಪ್ರಶ್ನೆ ಇದು. ಹಾಳಾದ್ದು ಏನೇನೋ ಕೇಳುತ್ತೆ.

'ದೇವರಿಗೆ ಹಾಗೆಲ್ಲ ಅನ್ನಬಾರದು ಮರಿ. ನಿನ್ನ ಕಣ್ಣು ಕಿತ್ತುಕೊಂಡು ಬಿಡುತ್ತೆ' ಅಂತ ಸ್ವಲ್ಪ ಹೆದರಿಕೆ ಬರಿಸಲು ಪ್ರಯತ್ನಿಸಿದೆ.

'ಆದಿರ್ಲಿ ತಾತ. ರಾವಣನ್ನೇ ನೋಡು. ಒಂದು ಕಡೆ ಐದು ತಲೆ ಇನ್ನೊಂದು ಕಡೆ ನಾಲ್ಕು ತಲೆ. ಬ್ಯಾಲೆನ್ಸ್ ಆಗುತ್ತಾ ತಾತ?'

ಹಾಳಾದ್ದಕ್ಕೆ ಪ್ರಳಯಾಂತಕ ಬುದ್ಧಿ. ಐದು ತಲೆ ಇರುವ ಕಡೆ ತಲೆ ಒಲಿಸಿಯೇ ಓಡಾಡಬೇಕು. ಸದಾ ಹೀಗೆ ಇರುವುದು ಶ್ರಮದಾಯಕ ಅನ್ನುವುದು ಅದರ ವಾದ. ಸದ್ಯ ಮಗ್ಗಲಾಗಬೇಕಾದಾಗ ರಾವಣ ಏನು ಮಾಡುತ್ತಿದ್ದ ಅಂತ ಹುಳುಬಿಡಲಿಲ್ಲ!

'ನಾಲ್ಕು ತಲೆ ತೂಕ ಹೆಚ್ಚಿಸಿ ಐದು ತಲೆ ತೂಕಕ್ಕೆ ಸಮ ಮಾಡಿರಬಹುದು. ಆಗ ಸಮತೂಕ ಆಗುತ್ತಲ್ಲ ಮರಿ' ಅಂದೆ.

'ಈ ಬಂಡಲ್ ಎಲ್ಲ ಬ್ಯಾಡ ತಾತ. ಆ ಬ್ರಹ್ಮ ರಾವಣನಿಗೆ ಇನ್ನೊಂದು ತಲೆ ಇಡಬೇಕಾಗಿತ್ತು. ಆಗ ಬ್ಯಾಲೆನ್ಸ್ ಆಗ್ತಿತ್ತು' ಅಂತ ಬ್ರಹ್ಮನ ಕುಶಲತೆಯನ್ನೇ ಓರೆಗೆ ಹಚ್ಚಿತ್ತು ಆ ಪಿಲ್ಟು.



ರಾವಣನ ಹೆಸರನ್ನು ಸಾವಿರಾರು ಸಲ ಕೇಳಿದ್ದೆ. ಹತ್ತು ತಲೆ ರಾವಣನನ್ನು ಹಲವು ಬಾರಿ ನೋಡಿದ್ದೆ. ಹೀಗಿರುವುದೇ ಸಹಜ ಅಂದುಕೊಂಡಿದ್ದೆ. ಈಗ ನೋಡಿದರೆ ಈ ಹಾಳಾದ ಪಿಲ್ಟು ಏನೇನೋ ಹೇಳಿ ತಲೆಗೆ ಹುಳುಬಿಟ್ಟಿತು. ಬ್ರಹ್ಮ ಯಾಕೆ ರಾವಣನಿಗೆ ಇನ್ನೊಂದು ತಲೆ ಇಡಲಿಲ್ಲ? ರಾವಣನ ದೇಹಕ್ಕೆ ತಲೆಗಳನ್ನು ಜೋಡಿಸುತ್ತಾ ಹೋಗಿರಬೇಕು. ಹತ್ತು ತಲೆ ಆಗುವಷ್ಟರಲ್ಲಿ ತನ್ನ ಕಲಾಕೃತಿಗೆ ಬೇಕಾದ ಪರಿಕರಗಳು ಮುಗಿದು ಹೋಗಿರಬೇಕು. ಬ್ಯಾಲೆನ್ಸ್‌ಗೆ ಅತ್ಯವಶ್ಯಕವಾದ ಹನ್ನೊಂದನೇ ತಲೆ ಜೋಡಿಸಲು ಸಾಧ್ಯವಾಗಿಲ್ಲದಿರಬೇಕು. ಇಲ್ಲದಿದ್ದಲ್ಲಿ ಹನ್ನೊಂದನೇ ತಲೆ ಜೋಡಿಸದಿರಲು ಕಾರಣ ಏನಿರಬಹುದು?

ಇದರ ಯೋಚನೆಯಲ್ಲೇ ಮುಳುಗಿರುವಾಗ 'ಗುಜರಾತಿ ವ್ಯಂಗ್ಯ ಕಿರುಗತೆಗಳು' ಪುಸ್ತಕ ಸಿಕ್ಕಿತು. ಅದನ್ನು ಬರೆದಿದ್ದವರು ವಿನೋದ ಭಟ್ಟ ಅವರು. ಅದನ್ನ ಕನ್ನಡಕ್ಕೆ ತಂದಿರುವವರು ಡಿ.ಎಸ್. ಶ್ರೀನಾಥ್ ಅವರು. ಅದರಲ್ಲಿನ ಒಂದು ಕಿರುಗತೆ ಸಂಕ್ಷಿಪ್ತವಾಗಿ ಹೀಗಿದೆ.

ರಾವಣ ಸ್ವರ್ಗದಲ್ಲಿ ಅಡ್ಡಾಡಲು ಹೋಗಿದ್ದ. ಕಾಫಿ ಕುಡಿಯುವ ಚಟ. 'ಕೆಫೆ ದ ಹೆವೆನ್'ಗೆ ಹೋದ. ಒಂದು ಖಾಲಿ ಮೇಜನ್ನು ನೋಡಿದ. ಅದರ ಬಳಿಯ ಕುರ್ಚಿಯಲ್ಲಿ ಕುಳಿತ. ಮಾಣಿ ಬಂದ. 'ಮೆನು' ಇಟ್ಟುಹೋದ. ರಾವಣ ಅದನ್ನು ತೆಗೆದು ನೋಡಲಾರಂಭಿಸಿದ. ಕಾಫಿ ಎದುರು ಹತ್ತು ರೂಪಾಯಿ ಎಂದು ಬರೆಯಲಾಗಿತ್ತು.

ಒಂದು ಕಾಫಿಗೆ ಆರ್ಡರ್ ಮಾಡಿದ. ಕಾಫಿ ಬಂತು. ಕುಡಿದ. ಮಾಣಿ ಬಿಲ್ ತಂದಿತ್ತ. ಅದನ್ನು ನೋಡಿ ರಾವಣ ಹೌಹಾರಿದ. ಮಾಣಿಯನ್ನು ಕುರಿತು 'ಇದೇನಿದು ನೂರು ರೂಪಾಯಿ ಬಿಲ್ ಕೊಟ್ಟಿರುವೆ. ಅದನ್ನು ಬರೆಯುವವನಿಗೆ ಇಂತಹ ಸಣ್ಣ ಲೆಕ್ಕವೂ ಬರುವುದಿಲ್ಲವೆ? ಎಂತಹ ಅಜ್ಞಾನಿ ಅವನು' ಎಂದು ಹೇಳಿದ. ಲೆಕ್ಕ ಮಾಡಲು ಬರದವರನ್ನು ಕಂಡು ಕೋಪವೆ ಬಂದಿತು. ಸೀತೆಯ ಅಪಹರಣದ ವೇಳೆಯಲ್ಲಿ ಅಟ್ಟಹಾಸ ಮಾಡಿ ನಕ್ಕಂತೆಯೇ ನಕ್ಕ.

ಮಾಣಿಗೆ ಏನನ್ನಿಸಿತೋ ತಿಳಿಯದು. ಬಿಲ್ ತೆಗೆದುಕೊಂಡು ಹೋದ. ಸ್ವಲ್ಪ ಸಮಯದ ನಂತರ ಮ್ಯಾನೇಜರ್ ಜೊತೆ ಬಂದ.

'ರಾವಣ ಸಾರ್ ತಮ್ಮ ಸಮಸ್ಯೆ ಏನು?' ನಯವಿನಯದ ಮೂರ್ತಿಯೇ ಆಗಿದ್ದ ಮ್ಯಾನೇಜರ್ ವಿನಂತಿಸಿಕೊಂಡ.

'ನಾನು ಒಂದು ಕಪ್ ಕಾಫಿ ಕುಡಿದಿದ್ದೇನೆ. ಮೆನ್ಯುನಲ್ಲಿ ಒಂದು ಕಪ್ ಕಾಫಿ ಹತ್ತು ರೂಪಾಯಿ ಎಂದು ಇದೆ. ಆದರೆ ನನಗೆ ನೂರು ರೂಪಾಯಿ ಬಿಲ್ ಕೊಡಲಾಗಿದೆ. ಏನಿದರ ಅರ್ಥ? ಸರಿಯಾದ ಬಿಲ್ ಅನ್ನೂ ಕೊಡುವುದಕ್ಕೆ ಬರುವುದಿಲ್ಲವೆ?'

'ಕ್ಷಮಿಸಿ ಸಾರ್. ಮೆನ್ಯು ಸರಿಯಾಗಿ ನೋಡಿ. ಅದರಲ್ಲಿ ಕಾಫಿ ಪರ್ ಹೆಡ್ ಮುಂದೆ ಹತ್ತು ರೂಪಾಯಿ ಎಂದು ಇದೆ. ನಿಮಗೆ ಹತ್ತು ತಲೆ ಇದೆ. ಅದಕ್ಕೆ ನೂರು ರೂಪಾಯಿ ಆಗುತ್ತೆ. ಹೌದು ತಾನೇ'

ರಾವಣ ತಲೆಗಳನ್ನು ಶಪಿಸಿಕೊಂಡು ನೂರ ರೂಪಾಯಿ ಪೀಕಿದ!

ರಾವಣನಿಗೇಕೆ ಹತ್ತು ತಲೆ ಎಂಬುದಕ್ಕೆ ಪರಿಹಾ ದೊರಕಿತ್ತು.

ಹನ್ನೊಂದು ತಲೆ ಇದ್ದಿದ್ದರೆ ಒಂದೂನೂರ ಹತ ರೂಪಾಯಿ ಕೊಡಬೇಕಿತ್ತು!

ಇನ್ನೂ ಒಂದು ಸ್ಪಷ್ಟ ಆಯಿತು. ಬ್ರಹ್ಮನಿಗೆ ಇಂಗ್ಲಿಷ ಬರುತ್ತಿತ್ತು!

ಅದಕ್ಕೆ ಇರಬೇಕು, ದೇಶದ ದೈವಭಕ್ತರೆಲ್ಲ ತಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರಿಸಲ ಮುಗಿಬೀಳುತ್ತಿರುವುದು!

ನರಕವನ್ನೇ ಸ್ವರ್ಗ ಮಾಡುತ್ತೇನೆ

ಓರ್ವ ಮುಖ್ಯಮಂತ್ರಿ. ಅಭಿವೃದ್ಧಿ ಮಂ ಜಪಿಸುತ್ತಲೇ ಇದ್ದ.

ಅವನ ಮಾತು ಸುಳ್ಳಾಗಲಿಲ್ಲ.

ಅವನ ಅಭಿವೃದ್ಧಿಯಾಯಿತು!

ಜನರ ಬಡತನ ಹೆಚ್ಚಾಯಿತು!

ತಾನು ಚಿರಂಜೀವಿ ಎಂದು ಭಾವಿಸಿದ್ದ ಅವನ ಅವನಿಗೂ ಸಾವು ಬಂದಿತು.

ಸತ್ತ ಮೇಲೆ ಅವನ ಸ್ಥಾನ ಎಲ್ಲಿ?

ನರಕದಲ್ಲಿ!

ಕೋಪೋದ್ರಿಕ್ತನಾದ. ಮುಖ್ಯಮಂತ್ರಿಯಾಗಿದ್ದವನ ನ್ಯಾಯವಾಗಿ ಸ್ವರ್ಗ ಸಿಗಬೇಕು. ನನಗೂ ನರಕವೇ ಎಂದ ಯಮಧರ್ಮನನ್ನು ದಬಾಯಿಸಿದ. ಯಮರಾಜ ಇದ ಸಮರ್ಥವಾಗಿ ಉತ್ತರಿಸಿದ. 'ಸ್ವರ್ಗದಲ್ಲಿ ನೀನು ಒಂ ನಿನ್ನ ಗೆಳೆಯರೆಲ್ಲ ಇಲ್ಲಿಯೇ ಇದ್ದಾರೆ.'

ನರಕದಲ್ಲಿ ಚುನಾವಣೆ ಬಂತು.

ಬಹುಮತ ಸಿಕ್ಕಿತು ಅವನಿಗೆ.

'ನರಕವನ್ನು ಸ್ವರ್ಗವನ್ನಾಗಿ ಅಭಿವೃದ್ಧಿ ಪಡಿಸುತ್ತೇ ಎಂದು ಹೇಳುತ್ತಲೇ ಬಂದ.

ನರಕದ ಜನ ನಂಬಿದರು.

ನರಕ ನರಕವಾಗಿಯೇ ಉಳಿಯಿತು!

'ಪತ್ರಿಕೆ'ಯಿಂದಾಗಿ ಪ್ರತೀವಾರ ಬ್ರೈನ್ ಅಪ್‌ಡೇಟ್ ಆಗುತ್ತೆ!!

ನವೆಂಬರ್ 30, 2011ರ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನಗಳು ಒಂದಕ್ಕೊಂದು ಪೈಪೋಟಿಗಿಳಿದಂತೆ ಚೆನ್ನಾಗಿ ಮೂಡಿಬಂದಿವೆ. ಓದುತ್ತಾ ಓದುತ್ತಾ ಸಮಕಾಲೀನ ಸ್ಥಿತಿಗತಿಯನ್ನು ಬ್ರೇನ್ ಎಂಬ ಕಂಪ್ಯೂಟರ್ ಡೌನ್‌ಲೋಡ್ ಮಾಡಿಕೊಂಡು ಅಪ್‌ಡೇಟ್ ಆದಂಗಾಯ್ತು!!

ಶಿವಸುಂದರ್ ಸರ್ ಅವರ ಬಹಿರಂಗ ಪತ್ರ, ಗೌರಿ ಮೇಡಮ್ಮರ ಕಂಡಹಾಗೆ, ಮಲ್ಲಿಗೆಯವರ ಹೃದಯಸ್ಪರ್ಶಿ ಲೇಖನ, ರೆಡ್ಡಿಯ ರಾಕೆಟ್ ವೇಗದ ಏರುವಿಕೆಯೂ ಅಷ್ಟೇ ವೇಗದಲ್ಲಿ ಪಾತಾಳ ಸೇರುವಿಕೆಯೂ, ಪರ್ವತದಂಥ ಗಟ್ಟಿ ಮನೋಬಲದ ಪಾರ್ವತಮ್ಮನವರ ಜೀವನಗಾಥೆ, ಟಿ.ಅವಿನಾಶ್ ಅವರ ಅನುಪಮ ಶಬ್ದಾಂಜಲಿಯೂ, ಇಂದಿರಾ ಲಂಕೇಶರ ನಿರಾಡಂಬರ ಬರವಣಿಗೆ...

ಒಂದೆ, ಎರಡೇ? ಸೂಪರ್ ಆಗಿದೆ ಪತ್ರಿಕೆ. ನೀವೆಲ್ಲ ಹೀಗೇ ಮುನ್ನುಗ್ಗಿ. ಗೌರಿ ಲಂಕೇಶ್ ತಂಡಕ್ಕೆ ಅಭಿನಂದನೆಗಳು.

- ಡಾ.ಅಮೀರುದ್ದೀನ್ ಖಾಜಿ, ಬಿಜಾಪುರ


ಲೋಕಾಯುಕ್ತದ ಮಾಜಿ ಪೊಲೀಸ್ ಅಧಿಕಾರಿ ಮಧುಕರ್ ಶೆಟ್ಟಿ ಅವರು ಪತ್ರಕರ್ತರೊಬ್ಬರೊಂದಿಗೆ ನಡೆಸಿದ ಉಭಯ ಕುಶಲೋಪರಿ ಸಂಭಾಷಣೆಯನ್ನೇ ಸೆನ್ಸೇಷನಲ್ ಸುದ್ದಿಯಂತೆ ಮುದ್ರಿಸಿದ್ದಲ್ಲದೇ, ಅದನ್ನು ಟಿ.ವಿ. ಚಾನೆಲ್‌ನಲ್ಲೂ ಪ್ರಸಾರ ಮಾಡುವ ಮೂಲಕ ನಾಡಿನುದ್ದಗಲಕ್ಕೂ ಜನರ ಮನಸ್ಸಿನಲ್ಲಿ ಲೋಕಾಯುಕ್ತ ಸಂಸ್ಥೆಯ ಬಗ್ಗೆಯೇ ಅನುಮಾನ ಮೂಡುವಂತೆ ಹಲವರು ಮಾಡಿದ್ದು ಈಗ ಸ್ಪಷ್ಟವಾಗಿದೆ.

ಎಲ್ಲರಿಗೂ ಚಳ್ಳೇಹಣ್ಣು ತಿನ್ನಿಸಿ, ಇಡೀ ಸರ್ಕಾರವನ್ನು ಅಲುಗಾಡಿಸುವ ಮಟ್ಟಕ್ಕೆ ಬೆಳೆದಿದ್ದ ರೆಡ್ಡಿಯೆಂಬ ಜನಾರ್ದನ ರೆಡ್ಡಿಯೇ ಗಣಿ ಕೇಸಿನಲ್ಲಿ ಸಿ.ಬಿ.ಐ. ಕೈಗಳಿಗೆ ಸಿಕ್ಕಿಹಾಕಿಕೊಂಡು ಚಂಚಲಗುಡ ಜೈಲಿನಲ್ಲಿ ಮುದ್ದೆ ಮುರಿಯುತ್ತಿರುವಾಗ ಇನ್ನು ನಮಗೇನು ಕಾದಿದೆಯೋ ಎಂದು ಗುಣಾಕಾರ, ಭಾಗಾಕಾರ ಮಾಡಿದ ಲಂಚ ತಿಂದ ಈ ಮಂಗಗಳು, ಪ್ರಾಮಾಣಿಕರಾದ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರ ವಿರುದ್ಧ ಬಿದ್ದಿದ್ದು ದುರಂತ.

ಆದರ್ಶ, ಮಾನವೀಯತೆ, ದೇಶಭಕ್ತಿ ನಾಡಿನ ಬಗ್ಗೆ ಕಳಕಳಿ ಎಂದು ಬೊಗಳೆ ಬಿಡುತ್ತಲೇ ಗಣಿ ಕುಳಗಳಿಂದ ಲಕ್ಷಗಟ್ಟಲೇ ಭಕ್ಷೀಸು ಪಡೆದಿರುವ ಇವರು ಈಗ ತಮ್ಮ ತಪ್ಪಿನ ಮೇಲೆ ತಿಪ್ಪೆ ಸಾರಿಸಲು ಸಂತೋಷ್ ಹೆಗ್ಡೆ ಅವರನ್ನು ಟಾರ್ಗೆಟ್ ಮಾಡಿಕೊಂಡಿದ್ದಾರೆ.

ಇಂತಹವರ ಕುತಂತ್ರಗಳನ್ನು ಗಟ್ಟಿ ಧೈರ್ಯದಿಂದ ಎದುರಿಸುತ್ತಿರುವ ಸಂತೋಷ್ ಹೆಗಡೆ ಅವರಿಗೆ ಅಭಿನಂದನೆಗಳು. ಲಂಚ ತಿಂದು ತೇಗು ಹಾಕುತ್ತಿರುವ ಪತ್ರಕರ್ತರೆಂಬ ಮುಸುಕು ಹಾಕಿಕೊಂಡಿರುವ ಗೋಮುಖ ವ್ಯಾಘ್ರಗಳಿಗೆ ಕಾನೂನು ರೀತಿಯಲ್ಲಿ ಸರಿಯಾದ ಶಿಕ್ಷೆಯಾಗಬೇಕಿದೆ. ಹೆಗ್ಡೆ ಅವರ ವಿರುದ್ಧ ಏನೆಲ್ಲಾ ಮಸಲತ್ತು ನಡೆಯುತ್ತಿದೆ, ಯಾವ್ಯಾವ ಪತ್ರಕರ್ತರು ಡಬಲ್‌ಗೇಮ್ ಆಡುತ್ತಿದ್ದಾರೆ ಎನ್ನುವುದನ್ನೆಲ್ಲ ಸವಿಸ್ತಾರಗೊಳಿಸಿದ ಪಾರ್ವತೀಶ ಅವರಿಗೆ ಧನ್ಯವಾದಗಳು.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



- ಬಸವರಾಜ ಹಳ್ಳಿ, ಹಾಸುಮಕಲ್

ಇವತ್ತು ಕರ್ನಾಟಕದ ಬಹುತೇಕ ಪತ್ರಿಕೆ ಮತ್ತು ಟಿವಿ ಮಾಧ್ಯಮಗಳ ಮೇಲೆ ಪುರೋಹಿತಶಾಹಿಗಳೇ ಹಿಡಿತಹೊಂದಿದ್ದು ಅವರೆಲ್ಲ ಈ ಪ್ರಭಾವಿ ಮಾಧ್ಯಮಗಳ ಮೂಲಕ ಅಹಿಂದ ವರ್ಗದವರ ಮೇಲೆ ಕೆಂಡಕಾರುತ್ತಿದ್ದಾರೆ.

ಪಿ.ಲಂಕೇಶರು ಇದ್ದಾಗ ಅವರು ಈ ಪುರೋಹಿತಶಾಹಿಗಳ ಕುತಂತ್ರಗಳನ್ನು ಕಟುವಾಗಿ ಟೀಕಿಸುತ್ತಾ ಜನರನ್ನು ಎಚ್ಚರಿಸುತ್ತಿದ್ದರು. ಅವರ ಹೊರತಾಗಿ ಬೇರೆ ಯಾರೂ ಈ ಅಹಿಂದ ವಿರೋಧಿಗಳನ್ನು ಎದುರುಹಾಕಿಕೊಳ್ಳುತ್ತಿರಲಿಲ್ಲ. ಈಗ ಅದೇ ಪುರೋಹಿತಶಾಹಿ ಮೀಡಿಯಾ ಮಾಫಿಯಾ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ವಿರುದ್ಧ ತಿರುಗಿಬಿದ್ದಿದ್ದಾರೆ. ಆದಕ್ಕೆ ಕಾರಣ ಹೆಗ್ಡೆ ಅವರ ತನಿಖೆ ಈ ಪುರೋಹಿತಶಾಹಿಗಳ ಭ್ರಷ್ಟಾಚಾರವನ್ನು ಬಯಲುಗೊಳಿಸಿದ್ದು.

ಸಮಾಜದ ಬಗ್ಗೆ ಕಾಳಜಿ ಹೊಂದಿರುವವರೆಲ್ಲರೂ ಈಗ ಸಂತೋಷ್ ಹೆಗ್ಡೆ ಅವರ ಬೆಂಬಲಕ್ಕೆ ನಿಲ್ಲಬೇಕಿದೆ.

- ಸೂರ್ಯಪ್ರಕಾಶ್ ಕೋಲಿ, ಈ ಮೇಲ್ ಮೂಲಕ

ಪಾರ್ವತಮ್ಮನವರಿಗೆ ಕ್ಯಾನ್ಸರ್ ಆಗಿರುವ ವಿಷಯ 'ಪತ್ರಿಕೆ'ಯ ಮುಖಾಂತರ ತಿಳಿದು ನಮ್ಮನ್ನು ತುಂಬಾ ಘಾಸಿಗೊಳಿಸಿದೆ. ರಾಜ್‌ಕುಮಾರ್ ಅವರ ನಿರ್ಗಮನದ ನಂತರ ಯಾರ್‍ಯಾರನ್ನೋ ಕನ್ನಡ ಚಿತ್ರರಂಗದ ಕಣ್ಣುಗಳೆಂದು ಬಿಂಬಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಕನ್ನಡ ಚಿತ್ರರಂಗದ ನಿಜವಾದ ಶಕ್ತಿ ಎಂದರೆ ಅದು ಪಾರ್ವತಮ್ಮ ರಾಜ್‌ಕುಮಾರ್ ಅವರು.



ನಟನೆಯೊಂದನ್ನು ಹೊರತುಪಡಿಸಿದರೆ, ಅಣ್ಣಾವ್ರು ನಮ್ಮೊಂದಿಗೆ ಈಗಿಲ್ಲ ಎಂಬ ಕೊರಗನ್ನು ಖಂಡಿತವಾಗಿಯೂ ಅಮ್ಮ ತುಂಬುತ್ತಿದ್ದಾರೆ.

ಬಗ್ಗಿ ಜಗ್ಗಿ ಕುಣಿದಳು ಭಾವನಾ

ಕೆಲ ದಿನಗಳಿಂದ ಸುದ್ದಿಯಲ್ಲಿ ಇಲ್ಲದಿದ್ದ ಭಾವನಾ ಇದ್ದಕ್ಕಿದ್ದಂತೆ ಪ್ರತ್ಯಕ್ಷಳಾಗಿದ್ದಾಳೆ. ಅದೂ ಹೇಗೆ? ಒಂದೆಡೆ ವಿಮರ್ಶಕರು ಮೆಚ್ಚುವಂತಹ ಕಲಾತ್ಮಕ ಚಿತ್ರದಲ್ಲಿ ನಟಿಸುತ್ತಾ ಇನ್ನೊಂದೆಡೆ ಪಡ್ಡೆ ಹುಡುಗರು ಶಿಳ್ಳೆ ಹೊಡೆಯುವಂತಹ ಐಟಂ ಡ್ಯಾನ್ಸಿನಲ್ಲಿ ಕುಣಿಯುತ್ತಾ ಪ್ರತ್ಯಕ್ಷಳಾಗಿದ್ದಾಳೆ.

ದರ್ಶನ್ ನಾಯಕನಾಗಿ ನಟಿಸಿರುವ 'ಚಿಂಗಾರಿ' ಚಿತ್ರದಲ್ಲಿ ಮುಂಬೈ ಬೆಡಗಿಯರನ್ನೂ ನಾಚಿಸುವ ರೀತಿಯಲ್ಲಿ ಭಾವನಾ ತನ್ನ ಮೈಸಿರಿಯನ್ನು ಪ್ರದರ್ಶಿಸಿದ್ದಾಳೆ ಎಂಬ ಮಾತು ಕೇಳಿಬರುತ್ತಿದೆ. ಇದೇ ಸಂದರ್ಭದಲ್ಲಿ ಆಕೆ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಭಾಗೀರಥಿ' ಎಂಬ ಕಲಾತ್ಮಕ ಚಿತ್ರದಲ್ಲೂ ನಟಿಸಿರುವುದನ್ನು ಆ ವಲಯದ ಜನರು ಅತ್ಯಂತ ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಇದೆಲ್ಲದರ ಮಧ್ಯೆ ಭಾವನಾ ವರ್ಷಕ್ಕೊಮ್ಮೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಭರತನಾಟ್ಯ ಪ್ರದರ್ಶನವನ್ನು ನೀಡುತ್ತ ತನ್ನ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾಳೆ.

ವಿಜಯ ರಾಘವೇಂದ್ರ ನಾಯಕನಟನಾಗಿ ಮೊದಲ ಬಾರಿಗೆ 'ನಿನಗಾಗಿ' ಚಿತ್ರದಲ್ಲಿ ಕಾಣಿಸಿಕೊಂಡಾಗ ಭಾವನಾ ಅದೇ ಚಿತ್ರದಲ್ಲಿ ಮೊಟ್ಟಮೊದಲ ಬಾರಿಗೆ ಐಟಂ ಸಾಂಗ್ ಒಂದರಲ್ಲಿ ಕಾಣಿಸಿಕೊಂಡು ಪ್ರೇಕ್ಷಕರು ಮಾತ್ರವಲ್ಲ, ಗಾಂಧಿನಗರದ ಜನ ಬೆಚ್ಚಿಬೀಳುವಂತೆ ಮಾಡಿದ್ದರು. ಆದರೆ ಆಗ "ಇದು ಐಟಂ ಸಾಂಗ್ ಅಲ್ಲ" ಎಂದು ಭಾವನಾ ವಾದಿಸಿದ್ದರು. ಆ ನಂತರ ಐಟಂ ಸಾಂಗ್‌ಗಳಲ್ಲಿ ಕಾಣಿಸಿಕೊಳ್ಳಲು ಆಕೆಗೆ ಅವಕಾಶಗಳು ಸಿಕ್ಕಿದ್ದವು "ನನಗೆ ಯಾವುದೇ ಕಾರಣಕ್ಕೂ ಐಟಂ ಸಾಂಗ್ ಗರ್ಲ್ ಎಂದು ಬ್ರ್ಯಾಂಡ್ ಆಗುವ ಇಚ್ಛೆಯಿಲ್ಲ" ಎಂದು ಆಕೆ ಅವುಗಳನ್ನು ಜಾಣತನದಿಂದ ನಿರಾಕರಿಸಿದ್ದಳು.




ಇಂತಹ ಭಾವನಾ ಈಗ 'ಚಿಂಗಾರಿ'ಯಲ್ಲಿ ಪಡ್ಡೆ ಹುಡುಗರ ನಿದ್ದೆ ಕೆಡಿಸುವ ರೀತಿಯಲ್ಲಿ ಕುಣಿದಿದ್ದಾಳೆ ಎಂದು ಸ್ವತಃ ಆ ಚಿತ್ರದ ನಿರ್ಮಾಪಕ ಮಹದೇವ್ ಮೊನ್ನೆ ಹೇಳಿದರು. ಅವರ ಪ್ರಕಾರ ಭಾವನಾಳ ನೃತ್ಯವೇ ಇಡೀ ಚಿತ್ರದ ಹೈಲೈಟ್ ಆಗುವ ಸಾಧ್ಯತೆಯಿದೆಯಂತೆ.

ಭಾವನಾಳ ಅಭಿಮಾನಿಗಳಿಗೆ ನಮ್ಮ ಕಿವಿಮಾತು. ಆಕೆಯ ನಟನಾ ಪ್ರತಿಭೆಯನ್ನು ನೋಡಬೇಕಾದರೆ ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಭಾಗೀರಥಿ' ಚಿತ್ರವನ್ನು ನೋಡಿ. ಆಕೆಯ ಗ್ಲಾಮರ್ ಮತ್ತು ತಳುಕು-ಬಳುಕಿನ ಮೈಮಾಟವನ್ನು ನೋಡಬೇಕಾದರೆ ನೇರವಾಗಿ 'ಚಿಂಗಾರಿ' ಪ್ರದರ್ಶನವಾಗುವ ಥಿಯೇಟರ್‌ಗೆ ಹೋಗಿ. ಆಫ್‌ಕೋರ್ಸ್ ಆಕೆಯ ಭರತನಾಟ್ಯ ಪ್ರದರ್ಶನ ನೋಡಬೇಕಾದರೆ ಇನ್ನೆರಡು ತಿಂಗಳು ಕಾಯಿರಿ.

ಏನೇ ಇರಲಿ, ಕನ್ನಡದ ಹುಡುಗಿ ಭಾವನಾ ಹೀಗೆ ಎಲ್ಲಾ ವಿಭಾಗಗಳಲ್ಲಿ ದುಡಿಯುತ್ತಿರುವುದು ಮೆಚ್ಚುವ ಸಂಗತಿ.

ಬದಲಾದ ದರ್ಶನ



ಮೊನ್ನೆ 'ಸಾರಥಿ' ಚಿತ್ರದ 50ನೇ ಯಶಸ್ವೀ ಪ್ರದರ್ಶನದ ಬಗ್ಗೆ ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು. ಸುಮಾರು ಎರಡು-ಮೂರು ತಿಂಗಳ ನಂತರ ನಾಯಕ ನಟ ದರ್ಶನ್ ಸಿನಿಮಾ ಪತ್ರಕರ್ತರೊಂದಿಗೆ ಹರಟೆ ಹೊಡೆಯಲು ಅಂದು ಆ ವೇದಿಕೆ ಪ್ರಯೋಜನವಾಯಿತು.

ದರ್ಶನ್ ಜೈಲಿನಿಂದ ಬಿಡುಗಡೆಯಾದ ನಂತರ ಅವರ ಮಾತು ಹಾವಭಾವಗಳಲ್ಲಿ ನಿರೀಕ್ಷೆಗಿಂತಲೂ ಹೆಚ್ಚು ಬದಲಾವಣೆಗಳಾಗಿವೆ. ಅದಕ್ಕೆ ಒಂದು ಸಿಂಪಲ್ ಉದಾಹರಣೆಯನ್ನು ಕೊಡಬಹುದು.

'ಸಾರಥಿ' ಸಿನಿಮಾ ಹಿಟ್ ಆದ ಕೂಡಲೇ ದರ್ಶನ್ ಮತ್ತು ಅವರ ಸಹೋದರ ದಿನಕರ್ ಈ ಚಿತ್ರದ ಮಾರಾಟದ ಹಕ್ಕುಗಳನ್ನು ಪಡೆದುಕೊಂಡು ನಿರ್ಮಾಪಕರನ್ನು ಯಾಮಾರಿಸುತ್ತಿದ್ದಾರೆ ಎಂಬ ಗಾಳಿಸುದ್ದಿ ಗಾಂಧಿನಗರದಲ್ಲಿ ಹಬ್ಬಿತ್ತು. ಈ ಪುಕಾರನ್ನು ಯಾರು ಹುಟ್ಟುಹಾಕಿದ್ದು? ಯಾವ ಕಾರಣಕ್ಕಾಗಿ ಹುಟ್ಟುಹಾಕಿದರು? ಎಂಬುದನ್ನು ಸುಲಭವಾಗಿ ಊಹಿಸಬಹುದು.

ಈ ಹಿಂದೆ ಇಂತಹ ಆರೋಪಗಳು ಕೇಳಿಬಂದಾಗ ದರ್ಶನ್ ತನ್ನ ಸಿನಿಮಾದ ಮಾದರಿಯಲ್ಲೇ - ಅಥವಾ ಲಾಂಗ್ ಮಚ್ಚು ಭಾಷೆಯಲ್ಲೇ - ಉತ್ತರಿಸುತ್ತಿದ್ದರು.

ಆದರೆ ಮೊನ್ನೆ ದರ್ಶನ್ ಈ ಪುಕಾರಿಗೆ ಪ್ರತಿಕ್ರಯಿಸಿದ ರೀತಿ ವಿಭಿನ್ನವಾಗಿತ್ತು. ಸಮಾರಂಭದ ವೇದಿಕೆಯಲ್ಲಿ ಮೈಕು ಹಿಡಿದು ಈ ವಿಷಯವನ್ನು ನೇರವಾಗಿ ಪ್ರಸ್ತಾಪಿಸಿದ ದರ್ಶನ್ "ಈ ಚಿತ್ರಕ್ಕಾಗಿ ನಾನು ಒಂದೇ ಒಂದು ಪೈಸೆ ಸಂಭಾವನೆಯನ್ನೂ ಪಡೆದಿರಲಿಲ್ಲ. ಹಾಗೆಯೇ ನನ್ನ ತಮ್ಮ ದಿನಕರ್ ಚಿತ್ರದ ಸ್ಕ್ರಿಪ್ಟ್ ಮಾಡಲು ಅಥವಾ ಲೊಕೇಶನ್ ನೋಡುವ ಸಂದರ್ಭದಲ್ಲಿ ಕೂಡಾ ಒಂದೇ ಒಂದು ಪೈಸೆ ಮುಂಗಡ ಹಣವನ್ನು ಪಡೆದಿರಲಿಲ್ಲ. ಆ ಹಂತದಲ್ಲೇ ನಮಗಿಬ್ಬರಿಗೆ ಒಂದೊಂದು ಏರಿಯಾವನ್ನು ಕೊಡುವುದಾಗಿ ನಿರ್ಮಾಪಕರ ಜೊತೆ ಒಪ್ಪಂದ ಆಗಿತ್ತು. ಈ ಚಿತ್ರ ಆರಂಭಿಸಿದ ನಿರ್ಮಾಪಕ ಕೆ.ಸಿ.ಎನ್.ಚಂದ್ರಶೇಖರ್ ಮತ್ತು ಆನಂತರ ಈ ಚಿತ್ರದ ಜವಾಬ್ದಾರಿ ನಿರ್ವಹಿಸಿದ ಸತ್ಯಪ್ರಕಾಶ್ ಇದ್ದಾರೆ. ಅವರನ್ನೇ ಇದರ ಬಗ್ಗೆ ಕೇಳೋಣ" ಎನ್ನುತ್ತಾ ದರ್ಶನ್ ಅವರಿಬ್ಬರತ್ತ ತಿರುಗಿ "ಸಾರ್, ನಾನೇನಾದರೂ ನಿಮ್ಮ ಬಳಿ ಹಣ ತೆಗೆದುಕೊಂಡಿದ್ದರೆ ಇಲ್ಲೇ ಪತ್ರಕರ್ತರ ಸಮ್ಮುಖದಲ್ಲೇ ಹೇಳಿ" ಎಂದು ಸವಾಲು ಹಾಕಿದರು.

ದರ್ಶನ್ ಈ ರೀತಿ ಮಾತನಾಡುವುದನ್ನು ನೋಡಿ ನಿರ್ಮಾಪಕದ್ವಯರು ಮುಖ ಕೆಳಗೆ ಹಾಕಿಕೊಂಡು ಕುಳಿತರು. ಅಲ್ಲಿಗೆ ದರ್ಶನ್ ಬಗ್ಗೆ ಇರುವ ಆರೋಪಕ್ಕೆ ಇತಿಶ್ರೀ ಹಾಡಿದಂತಾಯಿತು.

ಸಾಧಾರಣವಾಗಿ ಇಂತಹ ಗಾಳಿಸುದ್ದಿಗಳು, ಆರೋಪಗಳು ಬಂದಾಗ ನಾಯಕ ನಟರು ಕೂಡ ಕೆಟ್ಟಕೆಟ್ಟದಾಗಿ ಮಾತನಾಡುತ್ತಾ ಇನ್ನಷ್ಟು ದೊಡ್ಡ ರಂಪ ಹುಟ್ಟುಹಾಕುತ್ತಾರೆ. ಆದರೆ ಮೊನ್ನೆ ಸಮಸ್ತ ಮಾಧ್ಯಮದ ಸಮ್ಮುಖದಲ್ಲಿ ಈ ಒಂದು ಆರೋಪವನ್ನು ದರ್ಶನ್ ಬಗೆಹರಿಸಿದ ರೀತಿ ಮೆಚ್ಚುವಂತಿತ್ತು. ಇದು ದರ್ಶನ್‌ನಲ್ಲಿ ಜೈಲುವಾಸ ತಂದಿರುವ ಬದಲಾವಣೆ ಎಂಬುದರಲ್ಲಿ ಸಂಶಯವಿಲ್ಲ.

ಬಾಬು ಆಟ ಬಲ್ಲವರಾರು?

ಶೈಲೇಂದ್ರಬಾಬು ತನ್ನ ಮಗ ಸುಮಂತ್‌ಗಾಗಿ ಅದ್ದೂರಿಯಾಗಿ ನಿರ್ಮಿಸಿದ 'ಆಟ' ಚಿತ್ರ ಕಳೆದ ವಾರ ಬಿಡುಗಡೆಗೊಂಡಿದೆ. ಏನೇ ಆದರೂ ತನ್ನ ಮಗ ನಾಯಕನಾಗಿ ನಟಿಸಿದ ಮೊದಲ ಚಿತ್ರವನ್ನು ಗೆಲ್ಲಿಸಲೇಬೇಕು ಎಂದು ಹಟ ತೊಟ್ಟಿದ್ದ ಶೈಲೇಂದ್ರಬಾಬು ಚಿತ್ರದ ಬಿಡುಗಡೆಯ ಮೊದಲೇ ಭಾರೀ ಪ್ರಚಾರ ಮತ್ತು ಗಿಮಿಕ್‌ಗಳನ್ನು ಮಾಡಿದ್ದರು. ಆದರೆ ಅವರು ನಿರೀಕ್ಷಿಸಿದಷ್ಟು ಪ್ರೇಕ್ಷಕರು ಆ ಚಿತ್ರದತ್ತ ತಲೆ ಹಾಕದೆ ಥಿಯೇಟರ್ ಬಿಕೋ ಎನ್ನುತ್ತಿದೆ. ಆದರೂ ಶೈಲೇಂದ್ರಬಾಬು ಅವರ ಪುತ್ರ ವ್ಯಾಮೋಹ ಕಡಿಮೆಯಾಗಿಲ್ಲ.




ಅದಕ್ಕೆ ಅವರೀಗ ಈಗಾಗಲೇ ಬಿಡುಗಡೆಗೊಂಡಿರುವ 'ಆಟ' ಚಿತ್ರದ ಕೆಲವು ಭಾಗಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಲು ನಿರ್ಧರಿಸಿದ್ದಾರೆ. ಒಂದು ಹಾಡನ್ನೇ ಸಂಪೂರ್ಣವಾಗಿ ಕತ್ತರಿಸಿಬಿಸಾಡಿರುವ ಶೈಲೇಂದ್ರಬಾಬು ಸಾಧುಕೋಕಿಲ ಮತ್ತವರ ತಂಡ ನಟಿಸಿದ್ದ ಹಾಸ್ಯ ದೃಶ್ಯಗಳಿಗೂ 'ಮುಕ್ತಿ' ತೋರಿಸಿದ್ದಾರೆ. ಪರಿಣಾಮವಾಗಿ ಸಾಧುಕೋಕಿಲ ಈಗ ಚಿತ್ರದ ಟೈಟಲ್ ಕಾರ್ಡ್‌ನಲ್ಲಿ ಮಾತ್ರ ಕಾಣಿಸುತ್ತಾರೆ. ಸಿನಿಮಾದಲ್ಲಿ ದುರ್ಬೀನ್ ಹಾಕಿ ಹುಡುಕಿದರೂ ಅವರು ನಿಮಗೆ ಸಿಗುವ ಸಾಧ್ಯತೆ ಕಡಿಮೆ. ಇದರ ಜೊತೆಜೊತೆಗೆ ನಾಯಕ ಮತ್ತು ನಾಯಕಿ ನಟಿಸಿರುವ ಕೆಲವು ಹಾಸ್ಯ ದೃಶ್ಯಗಳನ್ನು ಸೇರಿಸಿದ್ದಾರೆಂಬ ಮಾತೂ ಕೇಳಿಬರುತ್ತಿದೆ.

ಇತ್ತೀಚಿಗೆ ಗಾಂಧಿನಗರದಲ್ಲಿ ಚಿತ್ರ ಬಿಡುಗಡೆಯಾದ ನಂತರ ಜನರ ಅಭಿಪ್ರಾಯ ಕೇಳಿ ಒಂದಿಷ್ಟು ಭಾಗವನ್ನು ಕತ್ತರಿಸುವುದು, ಇನ್ನೊಂದಿಷ್ಟು ಭಾಗವನ್ನು ಸೇರಿಸುವುದು ಒಂದು ಹೊಸ ಸಂಪ್ರದಾಯವಾಗಿದೆ. ಇತ್ತೀಚಿಗೆ 'ಐ ಆ್ಯಮ್ ಸಾರಿ ಮತ್ತೆ ಬನ್ನಿ ಪ್ರೀತ್ಸೋಣ' ಚಿತ್ರದ ನಿರ್ದೇಶಕ ರವೀಂದ್ರ ಸ್ವಲ್ಪ ಭಾಗ ಕತ್ತರಿಸಿ ಆಮೇಲೆ ಒಂದಿಷ್ಟು ಭಾಗ ಸೇರಿಸಿದ್ದರು. ಅದಾದ ನಂತರ ಯೋಗರಾಜ್ ಭಟ್‌ರ ಪಟ್ಟದ ಶಿಷ್ಯ ಪವನ್ 'ಲೈಫು ಇಷ್ಟೇನೆ' ಚಿತ್ರಕ್ಕೆ ಹೀಗೆಯೇ ಮಾಡಿದ್ದರು. ಇದೀಗ ಆ ಸಾಲಿಗೆ ಶೈಲೇಂದ್ರಬಾಬು ಸೇರುತ್ತಾರೆ. ಕನ್ನಡ ಚಿತ್ರರಂಗದಲ್ಲಿ ಪುತ್ರವ್ಯಾಮೋಹಕ್ಕೆ ಒಳಗಾದವರಲ್ಲಿ ಅನೇಕರಿದ್ದಾರೆ. ರಾಜೇಂದ್ರಸಿಂಗ್ ಬಾಬು, ಎಸ್.ನಾರಾಯಣ್, ಹಂಸಲೇಖ ಮೊದಲಾದವರು ತಮ್ಮ ಮಗನನ್ನು ಹೀರೋ ಮಾಡಲು ಹೋಗಿ ಕೈಸುಟ್ಟುಕೊಂಡಿದ್ದರು. ಈಗ ಶೈಲೇಂದ್ರಬಾಬು ಕೂಡ ಅವರಂತೆಯೇ ವರ್ತಿಸುತ್ತಿದ್ದಾರೆ.

'ಆಟ' ಚಿತ್ರದಲ್ಲಿನ ಅದ್ದೂರಿತನಕ್ಕಾಗಿ ನಿರ್ಮಾಪಕ ಶೈಲೇಂದ್ರಬಾಬು ಸುರಿದಿರುವ ಹಣವನ್ನು ನೋಡಿದರೆ ಅವರಿಗೆ ತಮ್ಮ ಮಗನ ಮೇಲೆ ಎಷ್ಟು ಪ್ರೀತಿಯಿದೆ ಎಂದೂ, ಪ್ರೇಕ್ಷಕರ ಮೇಲೆ ಎಷ್ಟು ತಿರಸ್ಕಾರವಿದೆ ಎಂದೂ ಗೊತ್ತಾಗುತ್ತದೆ!

'ಜೈ ಭಜರಂಗ ಬಲಿ'



ಇದು ಯೋಗರಾಜ್ ಭಟ್ ಅವರ ನಿರ್ದೇಶನದ ಹೊಸ ಚಿತ್ರದ ಹೆಸರಂತೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಇನ್ನೂ ಈ ಹೆಸರಿಗೆ ಅನುಮತಿ ನೀಡಿಲ್ಲ. 'ಜೈ ಭಜರಂಗ ಬಲಿ' ಎಂಬ ಹೆಸರೇ ವಿಚಿತ್ರವಾಗಿದೆ. ಹಾಗಂತ ಇದು ಕೋಮುವಾದಿ ಆರ್‌ಎಸ್‌ಎಸ್‌ಗಳ ಪರ ತುತ್ತೂರಿ ಊದುವ ಚಿತ್ರವಲ್ಲವಂತೆ. ಸಾಧಾರಣವಾಗಿ ಈ ತರಹ ವಿಶೇಷ ಹೆಸರುಗಳನ್ನು ತಮ್ಮ ಚಿತ್ರಕ್ಕೆ ನೀಡುವುದು ಯೋಗ್‌ರಾಜ್ ಭಟ್ಟರ ಹವ್ಯಾಸ. ಅವರು ತಮ್ಮ ಮೊದಲ ಚಿತ್ರಕ್ಕೆ 'ಮಣಿ' ಎಂದು ಹೆಸರಿಟ್ಟಿದ್ದರು. ಆನಂತರದ ಅವರ ಚಿತ್ರಗಳ ಹೆಸರು 'ರಂಗ ಎಸ್‌ಎಸ್‌ಎಲ್‌ಸಿ', 'ಮುಂಗಾರು ಮಳೆ', 'ಗಾಳಿಪಟ', 'ಮನಸಾರೆ', 'ಪಂಚರಂಗಿ' ಮತ್ತು ಮೊನ್ನೆಮೊನ್ನೆ ಬಂದ 'ಪರಮಾತ್ಮ'. ಈಗ ಅವರು 'ಜೈ ಭಜರಂಗ ಬಲಿ' ಎನ್ನಲು ಹೊರಟಿದ್ದಾರೆ. ಈ ಟೈಟಲ್ ಯಾವ್ಯಾವ ಅವಾಂತರವನ್ನು ಹುಟ್ಟುಹಾಕುತ್ತದೋ ನೋಡಬೇಕು.


ಪತ್ರಿಕೆ ಬರೆದಿರುವಂತೆ ಪಾರ್ವತಮ್ಮನವರು ನಿಜಕ್ಕೂ ಗಟ್ಟಿ ಮನೋಸ್ಥೈರ್ಯ ಹೊಂದಿರುವ ಮಹಿಳೆ. ಅವರ ಈ ಮನೋಬಲವೇ ಅವರಿಗೆ ಸಂಜೀವಿನಿ ಆಗಿ ಅಮ್ಮ ಆದಷ್ಟು ಬೇಗ ಚೇತರಿಸಿಕೊಳ್ಳಲಿ ಎಂಬುದೇ ನಮ್ಮೆಲ್ಲರ ಪ್ರಾರ್ಥನೆ.

ಪಾರ್ವತಿಯ ಮತ್ತೊಂದು ಹೆಸರನ್ನು ಹೊಂದಿರುವ ಗೌರಿ (ಗೌರಿ ಲಂಕೇಶ್) ತಮ್ಮ 13ನೇ ವಯಸ್ಸಿನಲ್ಲಿ ಮಿದುಳು ಜ್ವರಕ್ಕೆ ತುತ್ತಾಗಿ ಸಾವು ಬದುಕಿನೊಂದಿಗೆ ಹೋರಾಡಿ ಗೆದ್ದು ಬಂದಿದ್ದಾರೆ ಎಂದು ಇಂದಿರಾ ಲಂಕೇಶರ ಕಾಲಂನಲ್ಲಿ ಓದಿ ಚಕಿತರಾದೆವು.

- ವಿನಯ್ ಬೂಕೆಗೌಡ, ಕುರುಬಾರಹಳ್ಳಿ, ಮೈಸೂರು


ಕಳೆದ 40 ವರ್ಷಗಳಿಂದಲೂ ಕನ್ನಡದ ಜನಪ್ರಿಯ ಸಾಹಿತಿಗಳಾಗಿರುವ ಪೂರ್ಣಚಂದ್ರ ತೇಜಸ್ವಿಯವರ ಬಗೆಗೆ ಕನ್ನಡದ ಜನಸಾಮಾನ್ಯ ಸಾಹಿತ್ಯಾಸಕ್ತರಲ್ಲಿ ಇರುವ ಅಭಿಪ್ರಾಯದ ಸಾರಾಂಶ (ಇದನ್ನು ನಾನು ವೈಯಕ್ತಿಕವಾಗಿ ಕೇಳಿ, ಅನುಭವಿಸಿದ್ದು) ಹೀಗಿದೆ:

ತೇಜಸ್ವಿಯವರು ಕುವೆಂಪುರವರ ಮಗ. ವಿದ್ಯಾಭ್ಯಾಸದಲ್ಲಿ ಅಷ್ಟೇನು ಮುಂದೆ ಇರಲ್ಲಿಲ್ಲ, ಆ ಕಾರಣಕ್ಕಾಗಿ ಅವರು ಮೈಸೂರನ್ನು ಬಿಟ್ಟು ಮೂಡಿಗೆರೆಯ ಕಾಡಿಗೆ ಬಂದು ಅಲ್ಲಿ ವ್ಯವಸಾಯ ಮಾಡಿಕೊಂಡಿದ್ದರು. ಅವರು ಅಂತರ್ಜಾತಿ ವಿವಾಹವಾಗಿದ್ದರು. ಅವರಿಗೆ ಕಾಡೆಂದರೆ, ಮೀನು ಶಿಕಾರಿಯೆಂದರೆ, ಮಾಂಸಾಹಾರವೆಂದರೆ, ವಿಜ್ಞಾನವೆಂದರೆ ಬಲು ಇಷ್ಟ. ಕನ್ನಡದ ಸಾಹಿತಿಗಳಲ್ಲಿ ಕಂಪ್ಯೂಟರನ್ನು ಬಳಸಿದ ಮೊದಲ ಸಾಹಿತಿ ತೇಜಸ್ವಿ. ಇವರು ಬರೆದ ಪುಸ್ತಕಗಳು ಕರ್ವಾಲೊ, ಪರಿಸರದ ಕತೆಗಳು, ಮಿಲೇನಿಯಂ ಸರಣಿ ಕತೆಗಳು, ತಬರನ ಕತೆ, ಅಣ್ಣನ ನೆನಪು...



ಇಷ್ಟು ಮಾತ್ರ.

ಬಹುತೇಕ ಜನರಿಗೆ ತೇಜಸ್ವಿ ಬರೆದ 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು' ತರಹದ ಕಥಾಸಂಕಲನಗಳ ಬಗ್ಗೆ ಗೊತ್ತಿಲ್ಲ. ಮಾತ್ರವಲ್ಲ ಈ ಸಂಕಲನಗಳ ಚಾರಿತ್ರಿಕ ಮಹತ್ವ, ಸ್ವರೂಪ, ವ್ಯಕ್ತಿ ವಿಶಿಷ್ಟ ಸಿದ್ಧಾಂತಗಳ ಬಗ್ಗೆಯೂ ಗೊತ್ತಿಲ್ಲ. ಇನ್ನು ತುಕ್ಕೋಜಿ, ಡೇರ್ ಡೆವಿಲ್ ಮುಸ್ತಾಫ, ನಿಗೂಢ ಮನುಷ್ಯರು, ಚಿದಂಬರ ರಹಸ್ಯ ಜುಗಾರಿ ಕ್ರಾಸ್, ಮಾಯಾಲೋಕ ಬಗ್ಗೆಯಾಗಲಿ, ತೇಜಸ್ವಿ ಅವರ ಸಾಮಾಜಿಕ ಮತ್ತು ರಾಜಕೀಯ ವಿಮರ್ಶೆಗಳು, ಚಿಂತನೆಗಳು, ಸಮಾಜವಾದಿ ವ್ಯಕ್ತಿತ್ವದ ಬಗ್ಗೆಯಾಗಲಿ ಗೊತ್ತಿಲ್ಲ.



ತೇಜಸ್ವಿ ಅವರು ಕನ್ನಡದ ಮಾತ್ರವಲ್ಲ ಈ ದೇಶದ ಅತ್ಯುತ್ತಮ ಸಾಹಿತಿಗಳಲ್ಲಿ ಒಬ್ಬರು. ಕೆ.ಟಿ.ಶಿವಪ್ರಸಾದ್, ಶಿವಾರೆಡ್ಡಿ, ರಹಮತ್ ತರೀಕೆರೆ,. ಎಂ.ಎಸ್.ಆಶಾದೇವಿ, ಡಿ.ಎಸ್.ನಾಗಭೂಷಣ್ ತರಹದವರು ಮಾತ್ರ ತೇಜಸ್ವಿಯವರ ಒಟ್ಟಾರೆ ಸಾಹಿತ್ಯದ ಬಗ್ಗೆ, ಆ ಮೂಲಕ ರೂಪಿತಗೊಂಡ ಅವರ ವ್ಯಕ್ತಿತ್ವ ಹಾಗೂ ಕನ್ನಡದ ತಲೆಮಾರಿನ ಬಗ್ಗೆ ಅತ್ಯುತ್ತಮವಾಗಿ ಬರೆದಿದ್ದಾರೆ ಹಾಗೂ ವಿಮರ್ಶಿಸಿದ್ದಾರೆ. ಆದರೆ ನಮ್ಮ ಬಹಳಷ್ಟು ಮಾಧ್ಯಮಗಳು ತೇಜಸ್ವಿ ಅವರ ಬದುಕು ಮತ್ತು ಬರಹವನ್ನು ನಿರ್ಲಕ್ಷಿಸಿವೆ.

ಆದರೆ ಅದೇ ಮಾಧ್ಯಮಗಳು ಕನ್ನಡದ ಮತ್ತೊಬ್ಬ ಸಾಹಿತಿಗಳಾದ ಎಸ್.ಎಲ್.ಭೈರಪ್ಪನವರ ಬಗ್ಗೆ ಅತಿಯಾದ ಉತ್ಸಾಹ ತೋರುತ್ತವೆ. ಭೈರಪ್ಪನವರ ಬಗ್ಗೆ ಪುಟಗಟ್ಟಲೆ ಪ್ರಕಟಿಸುವ ಪತ್ರಿಕೆಗಳು ಅವರ ಕೋಮುವಾದಿ, ಪುರೋಹಿತಶಾಹಿ ಚಿಂತನೆಗಳ ಬಗೆಗೆ ನಿರ್ಲಕ್ಷ್ಯತನ, ಜಾಣ ಮರೆವು ತೋರುತ್ತವೆ. ಹಾಗೆ ಮಾಡುವ ಮೂಲಕ ಭೈರಪ್ಪನವರನ್ನು ಕನ್ನಡದ ಜನಪ್ರಿಯ ಸಾಹಿತಿಯನ್ನಾಗಿ ಬಿಂಬಿಸಿವೆ. ಇದು ನಮ್ಮ ಸಾಹಿತ್ಯ ಲೋಕದ ದುರಂತ.

ಭೈರಪ್ಪನವರು ವಿಕೃತವಾದ ಕೋಮುವಾದಿ, ಮನುವಾದಿ ವಿಚಾರಗಳನ್ನು ತಮ್ಮ ಬರಹ ಬದುಕಿನ ಪ್ರಾರಂಭದ ದಿನಗಳಿಂದ ಇವತ್ತಿನವರೆಗೂ ಹರಡುತ್ತಲೇ ಬಂದಿದ್ದಾರೆ. ಅದಕ್ಕೆ ಅವರು ಬರೆದಿರುವ ಆವರಣ, ಕವಲು, ಮಂದ್ರ, ಸಾರ್ಥ, ತಂತು, ಧರ್ಮಶ್ರೀಗಳಂತಹ ಕಾದಂಬರಿಗಳೇ ಸಾಕ್ಷಿ. ಆದರೂ ನಮ್ಮ ಮಾಧ್ಯಮದವರ, ವಿಮರ್ಶಕರ ಕಣ್ಣಲ್ಲಿ ಭೈರಪ್ಪ ಜನಪ್ರಿಯ ಸಾಹಿತಿ!

ನಮ್ಮ ದೇಶದಲ್ಲಿ ಧರ್ಮಗಳ ಜಾತಿಗಳ ನಡುವೆ ದ್ವೇಷ ಮೂಡಿಸಿ, ಆ ಮೂಲಕ ಅಪಾರ ಸಾವು ನೋವುಗಳಿಗೆ ಕಾರಣವಾಗುವ ಸಂಘ ಪರಿವಾರದ ಚಿಂತನೆಗಳನ್ನು ಇವತ್ತಿಗೂ ಬೆಂಬಲಿಸುವ ಭೈರಪ್ಪ ಚಡ್ಡಿಗಳ ವಕ್ತಾರನಂತೆ ಮಾತನಾಡುತ್ತಾರೆ.

ತೇಜಸ್ವಿ ಅವರ ಜನಪ್ರಿಯ ಕತೆಯಾದ 'ಡೇರ್ ಡೆವಿಲ್ ಮುಸ್ತಾಫ' ಕತೆಯನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. ಶಾಲೆಯಲ್ಲಿ ಹಾಜರಾತಿ ಕರೆದಾಗ ಅಬ್ದುಲ್ ಜಮಾಲ್ ಹುಸೇನ್ ಮುಸ್ತಾಫ "ಎಸ್ ಸರ್" ಎಂದು ಉತ್ತರಿಸಿದಾಗ ಆ ಕ್ಲಾಸಿನ ಹುಡುಗಿಯರ ಊಟದ ಡಬ್ಬಗಳು ದಡ ಬಡ ಎಂದು ಕೆಳಗೆ ಬೀಳುತ್ತವೆ. ಇದು 'ನಾವು' ಮತ್ತು 'ಅವರು' ಎನ್ನುವ ಈ ದೇಶದ ದೊಡ್ಡ ಪಿಡುಗನ್ನು ಧ್ವನಿಪೂರ್ಣವಾಗಿ ನಮ್ಮ ಮುಂದೆ ತೆರೆದಿಡುತ್ತದೆ. ತೇಜಸ್ವಿಯವರು ಎಲ್ಲಿಯೂ ವಾಚ್ಯವಾಗದೆ, ಯಾವ ಇಸಂ ಗಳಿಗೂ ಬಲಿಯಾಗದೆ ಕಲಾತ್ಮಕವಾಗಿ ಕತೆಯನ್ನು ಕಟ್ಟಿಕೊಡುತ್ತಾರೆ. ನನ್ನ ಪ್ರಕಾರ ಕನ್ನಡದ ಶ್ರೇಷ್ಠ ಕತೆಗಳಲ್ಲಿ ಈ ಕತೆಯೂ ಒಂದು.

ಇದೇ ಕತೆಯನ್ನು ಜೀವ ವಿರೋಧಿ ಲೇಖಕ ಭೈರಪ್ಪನವರು ಬರೆದಿದ್ದರೆ ಹೇಗಿರುತ್ತಿತ್ತು? ಅಲ್ಲಿ ಮುಸ್ತಾಫ ಆ ಊರಿನ ಒಬ್ಬ ಪುಂಡ ಹುಡುಗನಾಗಿಯೂ, 'ಅವನ' ಧರ್ಮದವರು 'ನಮ್ಮವರ' ವಿರುದ್ಧ ಯಾವುದೋ ಪಿತೂರಿಯಲ್ಲಿ ತೊಡಗಿರುವವರಂತೆಯೂ ಚಿತ್ರಿಸಲ್ಪಡುತ್ತಿದ್ದರು. ಇವರಿಂದ ಆ ಊರು ಯಾವ ರೀತಿ ನಾಶವಾಗುತ್ತಿದೆ ನೋಡಿ ಎಂದು ಜನರ ಮನಕರಗುವಂತೆ ಬರೆಯುತ್ತಿದ್ದರು.

ಇಂತಹ ಭೈರಪ್ಪನವರಿಗೆ ಇತ್ತೀಚಿಗೆ 'ಸರಸ್ವತಿ ಸಮ್ಮಾನ್' ದೊರಕಿದೆ. ಅದನ್ನು ಪತ್ರಿಕೆಗಳೆಲ್ಲ ಸಂಭ್ರಮಿಸಿವೆ. ಅವರ ಭಾಷಣವನ್ನು ಸಂಪೂರ್ಣವಾಗಿ ಮುದ್ರಿಸಿ ಖುಷಿಪಟ್ಟಿವೆ. ಆದರೆ ಈ ಪ್ರಶಸ್ತಿಯಿಂದಾಗಿ ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲ ಸರಸ್ವತಿಗೂ ಅವಮಾನವಾಗಿದೆ ಎಂದು ಅವರ್‍ಯಾರಿಗೂ ಅರ್ಥವಾದಂತಿಲ್ಲ.

- ಬಿ.ಶ್ರೀಪಾದ ಭಟ್, ಬೆಂಗಳೂರು

3ರ ಮೋಡಿ ಕೊಳವೇರಿ ಡಿ



ಕ್ರೇಜಿ ಲೋಕ

ಹರ್ಷಿಕಾ ಪೂಣಚ್ಚ

'ಕೊಳವೇರಿ ಡಿ' ಎಂಬ ತಮಿಳು-ಇಂಗ್ಲಿಷ್ ಮಿಶ್ರಿತ ಹಾಡು ಈಗ ದೇಶದಾದ್ಯಂತ ಸುದ್ದಿ ಆಗಿದೆ. ಎಲ್ಲರ ಬಾಯಲ್ಲೂ, ಎಲ್ಲ ಟಿವಿ ಚಾನೆಲ್ ಮತ್ತು ಪತ್ರಿಕೆಗಳಲ್ಲೂ ಈ ಹಾಡಿನದ್ದೇ ಸುದ್ದಿ. ಇಂಟರ್‌ನೆಟ್‌ನಲ್ಲಿರುವ ಯೂ ಟ್ಯೂಬ್‌ನಲ್ಲಿ ಈ ಹಾಡನ್ನಾಗಲೇ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಜನ ನೋಡಿದ್ದಾರೆ, ಕೇಳಿದ್ದಾರೆ. ಇನ್ನು ಟ್ವಿಟ್ಟರ್ ಮತ್ತು ಫೇಸ್‌ಬುಕ್‌ನಂತಹ ಜಾಲಗಳಲ್ಲಿ ಇದು ವೇಗವಾಗಿ ಹರಿದಾಡುತ್ತಿದೆ.

ಈ ಹಾಡಿನ ವಿಶೇಷತೆ ಏನು?

ಮೊದಲನೆಯದಾಗಿ ಇದನ್ನು ಹಾಡಿರುವವರು ತಮಿಳ್ ಸೂಪರ್ ಸ್ಟಾರ್ ರಜನೀಕಾಂತ್ ಅವರ ಅಳಿಯ ಕಂ ಜನಪ್ರಿಯ ನಟ ಧನುಶ್. ರಜನಿ ಮಗಳು ಮತ್ತು ಧನುಶ್‌ನ ಪತ್ನಿಯೂ ಆಗಿರುವ ಸೌಂದರ್ಯ ನಿರ್ಮಿಸಿ, ನಿರ್ದೇಶಿಸುತ್ತಿರುವ '3' ಚಿತ್ರಕ್ಕೆ ಈ ಹಾಡನ್ನು ರೆಕಾರ್ಡ್ ಮಾಡಲಾಗಿದೆ. ಅಷ್ಟೇ ಅಲ್ಲ, '3' ಸಿನಿಮಾದಲ್ಲಿ ಧನುಶ್‌ನ ಹೀರೋಯಿನ್ ಆಗಿ ನಟಿಸುತ್ತಿರುವವಳು ರಜನಿಯ ಪ್ರತಿಸ್ಪರ್ಧಿ ಕಮಲ್ ಹಾಸನ್ ಅವರ ಪುತ್ರಿ ಶ್ರುತಿ ಹಾಸನ್. ಅನಿರುದ್ಧ್ ಎಂಬ ಯುವಕ ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕನಾಗಿ ತಮಿಳು ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾನೆ.

ಅಂದರೆ ಈ '3' ಚಿತ್ರದಲ್ಲಿ ಕೆಲಸ ಮಾಡುತ್ತಿರುವವರೆಲ್ಲ ಯುವಕರು. ಅವರೆಲ್ಲ ಯುವಕರಿಗೆ ಇಷ್ಟವಾಗುವಂತಹ ಹಾಡೊಂದನ್ನು ಚಿತ್ರದಲ್ಲಿ ಸೇರಿಸುವ ಬಗ್ಗೆ ಯೋಚಿಸಿದರು. ಆಗ ಸಂಗೀತ ನಿರ್ದೇಶಕ ಅನಿರುದ್ಧ್ ಒಂದು ಟ್ಯೂನ್ ಸಿದ್ಧ ಮಾಡಿದ. ಆದರೆ ಅದಕ್ಕೆ ಯಾರೂ ಸಾಹಿತ್ಯವನ್ನು ಬರೆದಿರಲಿಲ್ಲ. ಆಗ ಧನುಶ್‌ನಿಗೆ ಒಂದು ಐಡಿಯಾ ಹೊಳೆಯಿತು. "ಯುವಕರು ಲವ್ ಡಿಸಪಾಯಿಂಟ್ ಆದಾಗ ಹೇಗಿರುತ್ತಾರೆ? ಇವತ್ತಿನ ಯುವಜನರು ಉಪಯೋಗಿಸುವ ಭಾಷೆ ಎಂತಹದ್ದು?" ಎಂದು ಯೋಚಿಸುತ್ತಾ ಅನಿರುದ್ಧ್ ಸಿದ್ಧಪಡಿಸಿದ್ದ ಟ್ಯೂನಿಗೆ ಸಾಮಾನ್ಯವಾಗಿ ಎಲ್ಲ ಯುವಕರಿಗೂ ಅರ್ಥವಾಗುವಂತಹ ಇಂಗ್ಲಿಷ್ ಪದಗಳನ್ನು ಜೋಡಿಸುತ್ತಾ ಹೋದ. ಹಾಡುವಾಗ ಆ ಇಂಗ್ಲಿಷ್ ಪದಗಳಿಗೆ ತಮಿಳು ಉಚ್ಚಾರಣೆಯ 'ಟಚ್' ಕೊಟ್ಟ. ಮತ್ತು ಈ ಹಾಡು 'ಸೂಪ್ ಬಾಯ್ಸ್‌ಗೆ' ಎಂದು ಧನುಶ್ ಹೇಳಿದ. 'ಸೂಪ್ ಬಾಯ್ಸ್' ಅಂದರೆ 'ಎಲ್‌ಡಿ' ಕೇಸಿನಲ್ಲಿ ಬೇಜಾರು ಮಾಡಿಕೊಂಡಿರುವ ಯುವಕರು.

ಈ ಇಡೀ ಹಾಡಿನಲ್ಲಿ 'ಕೊಳವೇರಿ ಡಿ' ಸೇರಿದಂತೆ ಒಂದೆರಡು ತಮಿಳು ಸಾಲುಗಳು ಬರುತ್ತವೆ. ಅಂದಹಾಗೆ, 'ಕೊಳವೇರಿ ಡಿ' ಅಂದರೆ ಅರ್ಥ 'ಕೊಲ್ಲುವಷ್ಟು ಕೋಪಬರುತ್ತಿದೆ' ಎಂದು. ಮಿಕ್ಕಂತೆ ಈ ಹಾಡಿನಲ್ಲಿ ಇರುವ ಪದಗಳೆಲ್ಲ 'ತಂಗ್ಲಿಷ್' ಪದಗಳೇ. ತಂಗ್ಲಿಷ್ ಒಂದು ರೀತಿಯಲ್ಲಿ ನಮ್ಮ ಕನ್ನಡ-ಇಂಗ್ಲಿಷ್ ಮಿಶ್ರಿತವಾದ 'ಕಂಗ್ಲಿಷ್' ತರಹವೇ ಇದ್ದು ಹಾಡು ಎಲ್ಲರಿಗೂ ಅರ್ಥವಾಗುವಂತಿದೆ.



ಉದಾಹರಣೆಗೆ, ಹಾಡಿನಲ್ಲಿರುವ ಹಲವು ಸಾಲುಗಳನ್ನು ನೋಡಿ:

ಡಿಸ್ಟೆಂನ್ಸ್ ಮೂನು,
ಮೂನು ಕಲರು ವೈಟು,
ವೈಟು
ವೈಟು ಬ್ಯಾಕ್‌ಗ್ರೌಂಡ್
ನೈಟು ನೈಟು
ನೈಟು ಕಲರು ಬ್ಲಾಕು ಬ್ಲಾಕು
ವೈಟು ಸ್ಕಿನ್ನು ಗರ್ಲು, ಗರ್ಲು
ಐಸು ಐಸು ಮೀಟು ಮೀಟು
ಮೈ ಫ್ಯೂಚರ್ ಡಾರ್ಕು, ಡಾರ್ಕು...
ಎಂಪ್ಟಿ ಲೈಫು, ಗರ್ಲು ಕಮ್ಮು
ಲೈಫು ರಿವರ್ಸು ಗೇರು
ಗಾಡು, ಐ ಯಾಮ್ ಡೈಯಿಂಗು ನೌವ್ವು
ಗರ್ಲು ಈಸ್ ಹ್ಯಾಪಿ ನೌವ್ವು
ದಿಸ್ಸು ಸಾಂಗು ಫಾರ್ ಸೂಪು ಬಾಯ್ಸು
ವೀ ಡೋಂಟ್ ಹ್ಯಾವು ಚಾಯ್ಸು
ವೈ ದಿಸ್ ಕೊಳವೇರಿ ಕೊಳವೇರಿ ಡಿ!!!

ಈಗ ಅರ್ಥವಾಯಿತೇ ಯಾಕೆ ಈ ಹಾಡು ಇವತ್ತು ಪಂಜಾಬ್‌ನಿಂದ ಪಶ್ಚಿಮ ಬಂಗಾಳದ ತನಕ, ತಮಿಳು ನಾಡಿನಿಂದ ದೆಹಲಿ ತನಕ ಕಾಡ್ಗಿಚ್ಚಿನಂತೆ ಹಬ್ಬಿದೆ ಎಂದು?

ತಮಾಷೆ ಎಂದರೆ ಈ ಹಾಡಿನ ತುಣುಕು ಅದು ಹೇಗೋ ಸೋರಿಕೆಯಾಗಿ ಜನರ ಗಮನವನ್ನು ಸೆಳೆಯಿತು. ಆಗ ಧನುಶ್-ಸೌಂದರ್ಯ ತಂಡ ಅದನ್ನೇ ತಮ್ಮ ಚಿತ್ರದ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಲು ನಿರ್ಧರಿಸಿದರು. ಧನುಶ್ ಈ ಹಾಡನ್ನು ಸ್ಟುಡಿಯೋದಲ್ಲಿ ಹಾಡುತ್ತಿರುವುದನ್ನೇ ಚಿತ್ರೀಕರಿಸಿಕೊಂಡು ಅದನ್ನು ಅಧಿಕೃತವಾಗಿ ಬಿಡುಗಡೆ ಮಾಡಿದರು. ಒಂದೇ ಒಂದು ವಾರದಲ್ಲಿ ಇದೆಷ್ಟು ಜನಪ್ರಿಯತೆ ಪಡೆಯಿತೆಂದರೆ ಈಗ ಅದು ಎಲ್ಲರ ಬಾಯಲ್ಲೂ ನಲಿದಾಡುತ್ತಿದೆ.

ಹೇಗಿದೆ ತಮಿಳು ಯುವಕರ ಕ್ರಿಯಾಶೀಲತೆ ಮತ್ತು ಚಮತ್ಕಾರ?

ತೆಲುಗು ತಮಿಳಿನಲ್ಲೂ 90!

ಕನ್ನಡ ಚಿತ್ರ ಪ್ರೇಕ್ಷಕರನ್ನು '90' ಅಮಲಲ್ಲಿ ಮುಳುಗೇಳು ವಂತೆ ಮಾಡಿದ್ದ ನಿರ್ದೇಶಕ ಲಕ್ಕಿ ಶಂಕರ್ ಈಗ ಪಕ್ಕದ ರಾಜ್ಯಗಳಿಗೆ ವಲಸೆ ಹೊರಟಿದ್ದಾರೆ. ತಮ್ಮ ನಿರ್ದೇಶನಾ '90'ಗೆ ಅಷ್ಟೊಂದು ಕಿಕ್ ಇದೆ ಎಂದು ಗೊತ್ತಾದ ನಂತರ ಅವರು ಅದನ್ನು ತಮಿಳರಿಗೆ ಮತ್ತು ತೆಲುಗು ಜನರಿಗೆ ಕುಡಿಸಲು ನಿರ್ಧರಿಸಿದ್ದಾರೆ.

ಸಾಧು ಕೋಕಿಲಾ ನಿರ್ಮಿಸಿ, ನಟಿಸಿದ್ದ '90' ಚಿತ್ರ ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರೀಕರಣವಾಗಲಿದೆ. ಆದರೆ ಸಾಧು ಕೋಕಿಲಾ ಕನ್ನಡದಲ್ಲಿ ಮಾಡಿದ್ದ ಪಾತ್ರ ತಮಿಳಿನಲ್ಲಿ ವಿವೇಕ್ ಪಾಲಾಗಿದೆ. ತೆಲುಗಿನಲ್ಲಿ ಬ್ರಹ್ಮಾನಂದಂ ಅಥವಾ ಬೇರೆ ಇನ್ಯಾರನ್ನಾದರೂ ಹಾಕಿಕೊಳ್ಳುವ ಯೋಚನೆ ಚಿತ್ರತಂಡದ್ದು. ಸಾಧು ಆ ಪರ ಭಾಷೆಗಳಲ್ಲಿ ಸಣ್ಣ ಪಾತ್ರವನ್ನಷ್ಟೇ ಮಾಡುತ್ತಿದ್ದಾರೆ.



ಲಕ್ಕಿ ಶಂಕರ್ ಮೂಲ '90' ಚಿತ್ರದಲ್ಲಿರುವ ಅಂಶಗಳ ಜೊತೆಗೆ ಅಲ್ಲಿನ ನೇಟಿವಿಟಿಗೆ ತಕ್ಕಂತೆ ಕೆಲವು ಬದಲಾವಣೆಗಳನ್ನ, ಸೇರ್ಪಡೆಗಳನ್ನ ಮಾಡಲಿದ್ದಾರೆ. ಬರುವ ಜನವರಿಯಲ್ಲೇ ಎರಡೂ ಭಾಷೆಗಳ ಚಿತ್ರಗಳ ಮುಹೂರ್ತ ಇದೆಯಂತೆ.

ಕುಡಿತದ ಬಾಧಕಗಳ ಬಗ್ಗೆ ವಿಶಿಷ್ಟ ಶೈಲಿಯಲ್ಲಿ ಹೇಳಿದ್ದ '90' ಚಿತ್ರ ವಿಮರ್ಶಕರಿಂದ ಅಪಾರ ಮೆಚ್ಚುಗೆ ಪಡೆದಿತ್ತು. ಪ್ರೇಕ್ಷಕರೂ ಜೈ ಅಂದಿದ್ದರು. ಚಿತ್ರ ಈಗಾಗಲೇ 80 ದಿನಗಳನ್ನು ಪೂರೈಸಿದೆ. ನಿರ್ಮಾಪಕ ಸಾಧು ಕೋಕಿಲಾಗೆ ಭರ್ಜರಿ ಲಾಭವನ್ನೂ ತಂದುಕೊಟ್ಟಿದೆ.

ವಿಜಯಪ್ರಕಾಶ್ ಅಂದರ್ ಬಾಹರ್

ಎ.ಆರ್.ರೆಹಮಾನ್ ಅವರ ನಿರ್ದೇಶನದಲ್ಲಿ 'ಜೈ ಹೋ' ಹಾಡನ್ನು ಹಾಡಿ ಖ್ಯಾತಿ ಪಡೆದ ಕನ್ನಡಿಗ ವಿಜಯಪ್ರಕಾಶ್ ಈಗ ಸ್ವತಂತ್ರ ಸಂಗೀತ ನಿರ್ದೇಶಕರಾಗಿ ಕನ್ನಡ ಚಿತ್ರರಂಗವನ್ನು ಪ್ರವೇಶಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ಅಂದರ್ ಬಾಹರ್' ಚಿತ್ರಕ್ಕೆ ಇವರೇ ಸಂಗೀತ ನಿರ್ದೇಶಕರು.



ಈ ಚಿತ್ರದ ಇನ್ನೊಂದು ವಿಶೇಷತೆಯೆಂದರೆ ಫ್ರಣೇಶ್ ಎಂಬ ಹೊಸಬ ಕೂಡ ನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿಡಲಿರುವುದು. ಅಷ್ಟೇ ಅಲ್ಲ, ಈ ಚಿತ್ರವನ್ನು ಸುಮಾರು ಏಳು ಜನ ಗೆಳೆಯರು ಜೊತೆಗೂಡಿ ನಿರ್ಮಿಸುತ್ತಿದ್ದಾರೆ. ಅವರೆಲ್ಲರಿಗೂ ಚಿತ್ರ ನಿರ್ಮಾಣ ಒಂದು ಹೊಸ ಅನುಭವ. ಅಂದರೆ ಶಿವರಾಜ್‌ಕುಮಾರ್ ಒಬ್ಬರನ್ನು ಹೊರತುಪಡಿಸಿ 'ಅಂದರ್ ಬಾಹರ್' ಚಿತ್ರದ ಬಹುತೇಕ ಎಲ್ಲರೂ ಹೊಸಬರಾಗಿರುತ್ತಾರೆ.

'ಮಿಲನ' ಚಿತ್ರದಲ್ಲಿ ತನ್ನ ನಟನಾ ಪ್ರತಿಭೆಯನ್ನು ಪ್ರದರ್ಶಿಸಿದ ಮಲಯಾಳಿ ಹುಡುಗಿ ಪಾರ್ವತಿ ಮೆನನ್ ಈ ಚಿತ್ರದ ಮುಖಾಂತರ ಇದೇ ಮೊದಲ ಬಾರಿಗೆ ಶಿವಣ್ಣನಿಗೆ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಅಂದು ಅಪ್ಪುಗೆ ನಾಯಕಿಯಾಗಿ ಕಾಣಿಸಿಕೊಂಡ ಪಾರ್ವತಿ ಮೆನನ್ ಇಂದು ಅಪ್ಪು ಸಹೋದರ ಶಿವಣ್ಣನಿಗೆ ಜೋಡಿಯಾಗಿದ್ದಾರೆ.

ಇದು ಸದ್ಯಕ್ಕೆ 'ಅಂದರ್ ಬಾಹರ್' ಚಿತ್ರದ ಬಗ್ಗೆ ತಿಳಿದುಬಂದಿರುವ ಒಂದಿಷ್ಟು ಮಾಹಿತಿಗಳು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com